23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 345 | ನವದೆಹಲಿ | ಬೆಲೆ ₹10 | ಜೂನ್ 20 2026, ಶನಿವಾರ



23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಜೂನ್ 20 2026, ಶನಿವಾರ

# ಪಂಚ ಗ್ಯಾರಂಟಿ ಯೋಜನೆ ಅನರ್ಹ ಫಲಾನುಭವಿಗಳ ಕಡಿವಾಣ ಅಗತ್ಯ: ಸಿಎಂ

**ಬೆಂಗಳೂರು, ಜೂ.19: ಪಂಚಖಾತರಿ ಯೋಜನೆಗಳಿಂದ ಒಬ್ಬನೇ ಒಬ್ಬ ಅರ್ಹ ಫಲಾನುಭವಿಗೆ ಅನ್ಯಾಯವಾಗಬಾರದು. ಅನರ್ಹ ಫಲಾನುಭವಿಗಳಿಂದ ಯೋಜನೆಯ ದುರುಪಯೋಗಕ್ಕೆ ಮಾತ್ರ ಕಡಿವಾಣ ಹಾಕಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟವಾಗಿ ಹೇಳಿದ್ದಾರೆ.**



ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಹಲವು ಫಲಾನುಭವಿಗಳು ಬ್ಯಾಂಕ್ ಸಾಲ ಪಡೆದಿರುತ್ತಾರೆ. ಸಾಲದ ಖಾತೆಗೆ ಗೃಹಲಕ್ಷ್ಮಿ ಹಣ ಹೋದ ತಕ್ಷಣ ಅದು ಸಾಲದ ಮೊತ್ತಕ್ಕೆ ಜಮೆ ಆಗುತ್ತದೆ. ಆದ್ದರಿಂದ ಅಂತಹ ಫಲಾನುಭವಿಗಳು ಖಾತೆ ಬದಲಾಯಿಸಿರುತ್ತಾರೆ. ಇಂಥಾ ಫಲಾನುಭವಿಗಳಿಗೆ ತೊಂದರೆ ಆಗಬಾರದು ಎಂದರು.

ಗೃಹಜ್ಯೋತಿ ಗ್ಯಾರಂಟಿ ಯೋಜನೆ ಜಾರಿ ಆಗುವಾಗ ಹೆಚ್ಚಿನ ದುರುಪಯೋಗ ಆಗದ ಹಾಗೆ ಎಚ್ಚರಿಕೆ ವಹಿಸಲಾಗಿತ್ತು. ಇದೇ ಎಚ್ಚರಿಕೆ ಇತರೆ ಯೋಜನೆಗಳಲ್ಲೂ ಅನುಸರಿಸಿದ್ದರೆ ದುರುಪಯೋಗದ ಪ್ರಮಾಣ ಕಡಿಮೆ ಆಗುತ್ತಿತ್ತು. ಮೃತಪಟ್ಟಿರುವ ಫಲಾನುಭವಿಗಳಿಗೂ ಗೃಹಲಕ್ಷ್ಮಿ ಹಣ ಹೋಗುತ್ತಿರುವುದು ಪತ್ತೆಯಾಗಿದೆ. ಈ ರೀತಿಯ ದುರುಪಯೋಗ ತಡೆಗಟ್ಟಬೇಕು. ಗೃಹಲಕ್ಷ್ಮಿ ಹಣ ಫಲಾನುಭವಿಗಳ ಖಾತೆಗೆ ಜಮೆಯಾದ ತಕ್ಷಣ ಅವರ ಮೊಬೈಲಿಗೆ ಧ್ವನಿ ಸಂದೇಶದ ಮೂಲಕ ಖಚಿತಪಡಿಸಬೇಕು ಎಂದರು.

ಏರ್‌ಟೆಲ್ ಆಪ್ ಬ್ಯಾಂಕ್‌ನಲ್ಲಿ ಏರ್‌ಟೆಲ್ ಸಿಮ್ ಬಳಕೆದಾರರು ತೆರೆಯಲು ಅವಕಾಶವಿರುವ ಖಾತೆಗಳನ್ನು ತೆರೆದು ದುರುಪಯೋಗಪಡಿಸಿಕೊಳ್ಳುತ್ತಿರುವ ಪ್ರಕರಣಗಳು ಪತ್ತೆಯಾಗಿವೆ ಎನ್ನುವ ಬಗ್ಗೆ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಖಾತೆಗಳು ಕರ್ನಾಟಕ ರಾಜ್ಯದಲ್ಲಿ ಮಾತ್ರ ಇರಬೇಕು. ಇತರೆ ರಾಜ್ಯಗಳಲ್ಲಿರುವ ಖಾತೆಗಳಿಗೆ ಹಣ ಹೋಗುತ್ತಿರುವುದು ಪತ್ತೆಯಾಗಿದೆ. ಇವುಗಳಿಗೆ ತಡೆ ಹಾಕಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು. ಮರಣ ಹೊಂದಿದ ಫಲಾನುಭವಿಗಳ ಸಂಖ್ಯೆ ಸಕಾಲದಲ್ಲಿ ದೊರೆಯದಿರುವ ಬಗ್ಗೆ ಇ-ಕೆವೈಸಿ ಹಾಗೂ ಬ್ಯಾಂಕ್ ಖಾತೆ, ಎನ್.ಪಿ.ಸಿ.ಐ ನಿಷ್ಕ್ರಿಯವಾಗಿರುವ ಫಲಾನುಭವಿಗಳ ಕುರಿತಂತೆ ಚರ್ಚೆ ನಡೆಸಲಾಯಿತು.

**60 ಕೋಟಿ ರೂ. ಸೋರಿಕೆ: ಸಿಎಜಿ ವರದಿ ಉಲ್ಲೇಖಿಸಿದ ಸಿಎಂ**

ಸಿಎಜಿ ವರದಿಯಲ್ಲಿ ಉಲ್ಲೇಖವಾಗಿರುವ ಸಂಗತಿಗಳ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು. ಒಂದೇ ಖಾತೆಯಲ್ಲಿ ಹಲವು ಫಲಾನುಭವಿಗಳು ಗೃಹಲಕ್ಷ್ಮಿ ಹಣ ಪಡೆಯುತ್ತಿದ್ದಾರೆ. ಮೂರು ಲಕ್ಷ ಕಂತುಗಳಲ್ಲಿ ಒಟ್ಟು 60 ಕೋಟಿ ರೂ. ಸೋರಿಹೋಗಿದೆ ಎನ್ನುವ ಬಗ್ಗೆ ಎಜಿ ವರದಿ ನೀಡಿದೆ. ಒಬ್ಬರೇ ಹಲವು ಖಾತೆಗಳನ್ನು ನೋಂದಾಯಿಸಿರುವುದನ್ನು ಸಹ ಎಜಿ ವರದಿ ಪತ್ತೆ ಮಾಡಿದೆ. ಈ ಹಿಂದೆ ಪಡೆದ ಅರ್ಜಿಗಳಲ್ಲಿ ಉಲ್ಲೇಖವಾಗಿರುವ ಅಂಶಗಳ ನೈಜತೆ ಬಗ್ಗೆ ಪರಿಶೀಲನೆ ನಡೆಸದಿರುವ ಬಗ್ಗೆ ಪ್ರಸ್ತಾಪಿಸಲಾಯಿತು.

ಸಭೆಯಲ್ಲಿ ಸಚಿವರಾದ ಕೆ ಎಚ್ ಮುನಿಯಪ್ಪ, ಕೆ.ಜೆ.ಜಾರ್ಜ್, ಪ್ರಿಯಾಂಕ್ ಖರ್ಗೆ, ಸಿಎಂ ಮುಖ್ಯ ಸಲಹೆಗಾರ ಸುನಿಲ್ ಕನಗೋಳ್, ಸರಕಾರದ ಮುಖ್ಯ ಕಾರ್ಯದರ್ಶಿ ಡಾ ಶಾಲಿನಿ ರಜನೀಶ್, ಸಿಎಂ ಆರ್ಥಿಕ ಸಲಹೆಗಾರ ಎಲ್ ಕೆ ಅತೀಕ್, ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ, ಎಸ್ ಆರ್ ಪಾಟೀಲ್, ಪುಷ್ಪಾ ಅಮರನಾಥ್, ಮೆಹರುಸ್ ಖಾನ್, ಬೆಂಗಳೂರು ಜಿಲ್ಲೆ ಅಧ್ಯಕ್ಷ ಕೃಷ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.

### ಅನುಕೂಲಸ್ಥರು ಸ್ವಯಂಪ್ರೇರಿತರಾಗಿ ಯೋಜನೆಯಿಂದ ಹಿಂದೆ ಸರಿಯುವಂತೆ ಮುಖ್ಯಮಂತ್ರಿ ಮನವಿ

ನಮ್ಮ ರಾಜ್ಯದ ಯೋಜನೆಗಳು ನಮ್ಮ ರಾಜ್ಯದ ಫಲಾನುಭವಿಗಳಿಗೆ ಮಾತ್ರ ಸಿಗಬೇಕು. ಇತರೆ ರಾಜ್ಯದ ಮತದಾರರಿಗೆ ಯೋಜನೆಯ ಲಾಭ ಆಗುತ್ತಿದೆ. ಇದನ್ನು ತಡೆಯಬೇಕು. ಅನುಕೂಲಸ್ಥರು ಯಾರಾದರೂ ಗ್ಯಾರಂಟಿ ಯೋಜನೆಗಳನ್ನು ಸ್ವಯಂಪ್ರೇರಿತವಾಗಿ ಬಿಟ್ಟು ಕೊಡುವ ಮೂಲಕ ಇತರೆ ಅರ್ಹ ಫಲಾನುಭವವಿಗಳಿಗೆ ನೆರವಾಗಲು ಮುಂದಾದರೆ ಅಂಥವರನ್ನು ಪ್ರೋತ್ಸಾಹಿಸಬೇಕು ಎಂದು ಹೇಳಿದರು. ಕೇಂದ್ರದ ನೀತಿಗಳಿಂದ ಬಡವರು ಮತ್ತು ಮಧ್ಯಮ ವರ್ಗದವರ ಮೇಲೆ ಬೀಳುತ್ತಿರುವ ಆರ್ಥಿಕ ಹೊರೆ, ಬೆಲೆ ಏರಿಕೆಯ ಪರಿಣಾಮಗಳು ಮತ್ತು ತಲಾ ಆದಾಯ ಕುಸಿಯುತ್ತಿರುವ ಬಗ್ಗೆಯೂ ಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚರ್ಚೆ ನಡೆಸಿದರು. ಗೃಹಲಕ್ಷ್ಮಿ ಯೋಜನೆ ಜಾರಿಯಲ್ಲಿ ಬರುತ್ತಿರುವ ಎರಡು ಪ್ರಮುಖ ತಾಂತ್ರಿಕ ಸಮಸ್ಯೆಗಳ ಬಗ್ಗೆ ಸಿಎಂ ಡಿ.ಕೆ. ಶಿವಕುಮಾರ್ ಕೂಲಂಕಷವಾಗಿ ಸಮಾಲೋಚನೆ ಮಾಡಿದರು.

## ಒಳಪುಟಗಳಲ್ಲಿ

ನಗರಾಭಿವೃದ್ಧಿ ಪ್ರಾಧಿಕಾರಗಳು ಪ್ರತಿತಿಂಗಳು ಸಭೆ ನಡೆಸುವುದು ಕಡ್ಡಾಯ: ಯತೀಂದ್ರ ಸಿದ್ದರಾಮಯ್ಯ - ಪು.5

## ಪಿಎಂ ಕಿಸಾನ್ ಯೋಜನೆ 23ನೇ ಕಂತಿನ ಹಣ ಇಂದು ಬಿಡುಗಡೆ




**ಪಿಎಂ ಕಿಸಾನ್ ಉತ್ಸವ್ ಕಾರ್ಯಕ್ರಮದಲ್ಲಿ ಪ್ರಧಾನಿಯಿಂದ ಹಣ ವರ್ಗಾವಣೆ ಕರ್ನಾಟಕದ ರೈತರ ಖಾತೆಗೆ ಒಟ್ಟು 830 ಕೋಟಿ ರೂ. ಜಮಾ**

ನವದೆಹಲಿ, ಜೂ.19: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ-ಕಿಸಾನ್) ಯೋಜನೆಯ 23ನೇ ಕಂತಿನ ಆರ್ಥಿಕ ನೆರವನ್ನು ಬಿಡುಗಡೆ ಮಾಡಲು ದಿನಾಂಕ ನಿಗದಿಯಾಗಿದೆ. ಪ್ರಧಾನ ಮಂತ್ರಿಗಳು 2026ನೇ ಜೂನ್ 20ರಂದು ಪಶ್ಚಿಮ ಬಂಗಾಳ ರಾಜ್ಯದ ತಾರಕೇಶ್ವರ್, ಹೂಗ್ಲಿಯಲ್ಲಿ ಸಂಜೆ 4:00 ಗಂಟೆಗೆ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ದೇಶದ ರೈತರ ಖಾತೆಗಳಿಗೆ ಅಧಿಕೃತವಾಗಿ ಹಣ ವರ್ಗಾವಣೆ ಮಾಡಲಿದ್ದಾರೆ.

ಈ ವಿಶೇಷ ದಿನವನ್ನು "ಪಿ.ಎಂ. ಕಿಸಾನ್ ಉತ್ಸವ ದಿವಸ್" ಎಂದು ಆಚರಿಸಲಾಗುತ್ತಿದೆ. ಈ ಯೋಜನೆಯಡಿ ಕರ್ನಾಟಕದ ಒಟ್ಟು 41,54,160 ಫಲಾನುಭವಿ ರೈತರಿಗೆ ಕೇಂದ್ರ ಸರ್ಕಾರದಿಂದ ರೂ. 830.832 ಕೋಟಿಗಳ ಆರ್ಥಿಕ ನೆರವು ನೇರ ನಗದು ವರ್ಗಾವಣೆ ಮೂಲಕ ಜಮೆಯಾಗಲಿದೆ.

**ಯೋಜನೆಯ ಹಿನ್ನೆಲೆ ಮತ್ತು ಪ್ರಯೋಜನಗಳು:**

ವಾರ್ಷಿಕ ನೆರವು: ಅರ್ಹ ರೈತ ಕುಟುಂಬಗಳಿಗೆ ಕೃಷಿ ಚಟುವಟಿಕೆಗಳ ನಿರ್ವಹಣೆ ಹಾಗೂ ಉತ್ತಮ ಇಳುವರಿ ಪಡೆಯಲು ನೆರವಾಗುವಂತೆ ವಾರ್ಷಿಕವಾಗಿ ಒಟ್ಟು ರೂ. 6,000/- ಗಳ ಆರ್ಥಿಕ ಸಹಾಯ ನೀಡಲಾಗುತ್ತದೆ. ಕಂತುಗಳ ವಿವರ: ಈ ಮೊತ್ತವನ್ನು ತಲಾ ರೂ. 2,000/- ಗಳಂತೆ ಮೂರು ಸಮಾನ ಕಂತುಗಳಲ್ಲಿ ಪ್ರತಿ ನಾಲ್ಕು ತಿಂಗಳಿಗೊಮ್ಮೆ ರೈತರ ಖಾತೆಗೆ ಜಮೆ ಮಾಡಲಾಗುತ್ತದೆ.ಅರ್ಹತೆ: ಕರ್ನಾಟಕದಲ್ಲಿ ಫೆ.2019 ರಿಂದ ಈ ಯೋಜನೆ ಜಾರಿಯಲ್ಲಿದ್ದು, ದಿನಾಂಕ: 01.02.2019 ರ ಅನ್ವಯ ಸಾಗುವಳಿ ಭೂಮಿ ಹೊಂದಿರುವ ಅರ್ಹ ರೈತ ಕುಟುಂಬಗಳು (ಗಂಡ, ಹೆಂಡತಿ ಮತ್ತು ಅಪ್ರಾಪ್ತ ವಯಸ್ಸಿನ ಮಕ್ಕಳು) ಇದರ ಪ್ರಯೋಜನ ಪಡೆಯುತ್ತಿದ್ದಾರೆ.ಪ್ರಧಾನ ಮಂತ್ರಿಗಳ ಈ ನೇರ ನಗದು ವರ್ಗಾವಣೆ ಪ್ರಕ್ರಿಯೆಯಿಂದಾಗಿ ರಾಜ್ಯದ ಲಕ್ಷಾಂತರ ರೈತ ಕುಟುಂಬಗಳ ಕೃಷಿವೆಚ್ಚಕ್ಕೆ ಸಕಾಲದಲ್ಲಿ ಆರ್ಥಿಕ ಆಸರೆ ಸಿಕ್ಕಂತಾಗಲಿದೆ.

### ನೀಟ್ ಮರುಪರೀಕ್ಷೆ: ಟೆಲಿಗ್ರಾಂ ಆಪ್‌ಗೆ ತಾತ್ಕಾಲಿಕ ನಿಷೇಧ

## ಕೇಂದ್ರ ಸರ್ಕಾರದ ಕ್ರಮ ಸಮಂಜಸ: ದೆಹಲಿ ಹೈಕೋರ್ಟ್

**ನವದೆಹಲಿ, ಜೂ.19:** ನೀಟ್-ಯುಜಿ ಮರುಪರೀಕ್ಷೆಗಳ ಹಿನ್ನೆಲೆಯಲ್ಲಿ ಭಾರತದಲ್ಲಿ ಟೆಲಿಗ್ರಾಂ ಮೆಸೇಜಿಂಗ್ ಆಪ್ ಮೇಲೆ ಕೇಂದ್ರ ಸರ್ಕಾರ ವಿಧಿಸಿದ್ದ ತಾತ್ಕಾಲಿಕ ನಿರ್ಬಂಧವನ್ನು ದೆಹಲಿ ಹೈಕೋರ್ಟ್ ಎತ್ತಿಹಿಡಿದಿದೆ.




ಕೇಂದ್ರ ಸರ್ಕಾರದ ಆದೇಶವನ್ನು ಪ್ರಶ್ನಿಸಿ ಟೆಲಿಗ್ರಾಂ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ತೇಜಸ್ ಕಾರಿಯಾ ಅವರಿದ್ದ ಪೀಠ ತಿರಸ್ಕರಿಸಿದ್ದು, ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಅಡಿಯಲ್ಲಿ ಕೇಂದ್ರ ಸರ್ಕಾರ ತನ್ನ ತುರ್ತು ಅಧಿಕಾರಗಳನ್ನು ಬಳಸಲು ಸಾಕಷ್ಟು ಕಾರಣಗಳನ್ನು ತೋರಿಸಿದೆ ಎಂದು ಅಭಿಪ್ರಾಯಪಟ್ಟಿತು.

ಕೇಂದ್ರ ಸರ್ಕಾರಕ್ಕೆ ಟೆಲಿಗ್ರಾಂ ಪ್ರವೇಶವನ್ನು ನಿರ್ಬಂಧಿಸುವ ಅಧಿಕಾರವಿದೆ. ಸರ್ಕಾರ ಕೈಗೊಂಡ ಕ್ರಮಗಳು ಕನಿಷ್ಠ ನಿರ್ಬಂಧಿತ ಸ್ವರೂಪದ್ದಾಗಿದ್ದು, ಅನುಪಾತದ ಪರೀಕ್ಷೆಯು ತೃಪ್ತಿಕರವಾಗಿದೆ. ಆದ್ದರಿಂದ ಈ ಆದೇಶವನ್ನು ಅತಿಯಾದ ಅಥವಾ ಅಸಮಂಜಸ ಎಂದು ಹೇಳಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ತಿಳಿಸಿದೆ.

ನೀಟ್-ಯುಜಿ ಮರುಪರೀಕ್ಷೆ ನಡೆಸುವ ಸಂದರ್ಭದಲ್ಲಿ ಉದ್ಭವಿಸಿದ್ದ ತುರ್ತು ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ನೀಡಿದ ಕಾರಣಗಳು ಸಮಂಜಸವಾಗಿವೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಅಲ್ಲದೆ, ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಅಡಿಯಲ್ಲಿ ನಿಗದಿಪಡಿಸಿರುವ ಎಲ್ಲಾ ಪ್ರಕ್ರಿಯೆಗಳನ್ನು ಸರ್ಕಾರ ಸರಿಯಾಗಿ ಅನುಸರಿಸಿದೆ ಎಂದು ತಿಳಿಸಿದೆ.

ಕೇಂದ್ರ ಸರ್ಕಾರ ಹೊರಡಿಸಿದ ನಿರ್ಬಂಧ ಆದೇಶಗಳು ಸೂಕ್ತ ಕಾರಣಗಳನ್ನು ಒಳಗೊಂಡಿದ್ದು, ಕಾನೂನುಬದ್ಧವಾಗಿವೆ ಎಂದು ಸ್ಪಷ್ಟಪಡಿಸಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ ವ್ಯಾಪ್ತಿಯಲ್ಲಿ ಮಾಹಿತಿ ಎಂಬ ವ್ಯಾಖ್ಯಾನದಿಂದ ಈ ವೇದಿಕೆಯನ್ನು ಹೊರಗಿಡಲು ಯಾವುದೇ ಕಾರಣವಿಲ್ಲ ಎಂದು ನ್ಯಾಯಾಲಯ ಹೇಳಿದೆ.

ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಅಕ್ರಮಗಳ ವಿವಾದದ ಹಿನ್ನೆಲೆ, ಸಂಘಟಿತ ನಕಲು ಜಾಲಗಳು ಟೆಲಿಗ್ರಾಂ ವೇದಿಕೆಯನ್ನು ದುರುಪಯೋಗ ಪಡಿಸಿಕೊಂಡಿವೆ ಎಂಬ ಆತಂಕವನ್ನು ಉಲ್ಲೇಖಿಸಿ ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿತ್ತು.

ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳ ಕಾರಣ ಮೂಲ ನೀಟ್ ಪರೀಕ್ಷೆಯನ್ನು ರದ್ದುಗೊಳಿಸಲಾಗಿದ್ದು, 2026ರ ನೀಟ್-ಯುಜಿ ಮರುಪರೀಕ್ಷೆಯನ್ನು ಜೂನ್ 21ರಂದು ನಡೆಸಲು ನಿಗದಿಪಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಅಡಿಯಲ್ಲಿ ಜೂನ್ 22ರವರೆಗೆ ಭಾರತದಲ್ಲಿ ಟೆಲಿಗ್ರಾಂ ಸೇವೆಗೆ ಪ್ರವೇಶ ನಿರ್ಬಂಧಿಸಲು ಇಂಟರ್ನೆಟ್ ಸೇವಾ ಪೂರೈಕೆದಾರರಿಗೆ ನಿರ್ದೇಶನ ನೀಡಿತ್ತು.

ಇದರ ಜೊತೆಗೆ, ಈಗಾಗಲೇ ಪೋಸ್ಟ್ ಮಾಡಿರುವ ಸಂದೇಶಗಳನ್ನು ಸಂಪಾದಿಸುವ ಸೌಲಭ್ಯವನ್ನು ಜೂನ್ 30ರವರೆಗೆ ಸ್ಥಗಿತಗೊಳಿಸುವಂತೆ ಟೆಲಿಗ್ರಾಂಗೆ ಸೂಚಿಸಲಾಗಿತ್ತು. ಹಾಗೆಯೇ, ನಿರ್ಬಂಧದ ಅವಧಿಯಲ್ಲಿ ಟೆಲಿಗ್ರಾಂ ಆಪ್ ಅನ್ನು ತಮ್ಮ ಆಪ್ ಸ್ಟೋರ್‌ಗಳಿಂದ ತೆಗೆದುಹಾಕುವಂತೆ ಗೂಗಲ್ ಮತ್ತು ಆಪಲ್‌ಗೂ ಸರ್ಕಾರ ನಿರ್ದೇಶನ ನೀಡಿತ್ತು.

## ಮೂರು ತಿಂಗಳ ಬಳಿಕ ಭಾರತಕ್ಕೆ ಬಂದ ಎಲ್‌ಎನ್‌ಜಿ ಟ್ಯಾಂಕರ್ ದಿಶಾ



ನವದೆಹಲಿವು ಜೂ.19: ಸತತ ಮೂರು ತಿಂಗಳ ಬಳಿಕ ಎಲ್‌ಎನ್‌ಜಿ ಟ್ಯಾಂಕರ್ ದಿಶಾ ಹಾರ್ಮುಜ್ ಜಲಸಂಧಿಯನ್ನು ದಾಟಿ ಭಾರತವನ್ನು ತಲುಪಿದೆ. 62,370 ಮೆಟ್ರಿಕ್ ಟನ್ ಎಲ್‌ಎನ್‌ಜಿ ಸರಕುಗಳೊಂದಿಗೆ ಶುಕ್ರವಾರ ಗುಜರಾತ್‌ನ ದಹೇಜ್ ಬಂದರಿಗೆ ಆಗಮಿಸಿದೆ.

ಶುಕ್ರವಾರ ಬೆಳಗ್ಗೆ 7:32ಕ್ಕೆ ದಹೇಜ್ ಟರ್ಮಿನಲ್‌ಗೆ ಟ್ಯಾಂಕರ್ ಬಂದಿಳಿತು. ಕತಾರ್‌ನ ರಾಸ್ ಲಫಾನ್ ಎಲ್‌ಎನ್‌ಜಿ ಟರ್ಮಿನಲ್‌ನಲ್ಲಿ ಎಲ್‌ಎನ್‌ಜಿ ಸರಕುಗಳನ್ನು ಲೋಡ್ ಮಾಡಲಾಯಿತು. ಮಧ್ಯಪ್ರಾಚ್ಯದಲ್ಲಿ ಉಂಟಾದ ಸಂಘರ್ಷದಿಂದ ಹಾರ್ಮೋಜ್‌ನಲ್ಲಿ ಸಿಲುಕಿತ್ತು. ದಿಶಾ ಎಂಬ ಹೆಸರಿನ ಈ ಹಡಗನ್ನು ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ನೇತೃತ್ವದ ಒಕ್ಕೂಟವು ನಿರ್ವಹಿಸುತ್ತದೆ ಮತ್ತು ಪೆಟ್ರೋನೆಟ್ ಎಲ್‌ಎನ್‌ಜಿ ಲಿಮಿಟೆಡ್‌ಗೆ ಚಾರ್ಟರ್ ಮಾಡಲಾಗಿದೆ.

ಭರೂಚ್‌ನಲ್ಲಿರುವ ದಹೇಜ್ ಎಲ್‌ಎನ್‌ಜಿ ಟರ್ಮಿನಲ್ ಭಾರತದ ಅತಿದೊಡ್ಡ ದ್ರವೀಕೃತ ನೈಸರ್ಗಿಕ ಅನಿಲ ಆಮದು ಕೇಂದ್ರವಾಗಿದ್ದು, ದೇಶದ ನೈಸರ್ಗಿಕ ಅನಿಲ ವಿತರಣಾ ಜಾಲದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದಿಶಾ ಆಗಮನವು ಎಲ್‌ಎನ್‌ಜಿ ಲಭ್ಯತೆಯನ್ನು ಬಲಪಡಿಸುತ್ತದೆ ಮತ್ತು ಕೈಗಾರಿಕಾ ಮತ್ತು ದೇಶೀಯ ಬಳಕೆಗಾಗಿ ಸ್ಥಿರವಾದ ಇಂಧನ ಪೂರೈಕೆಯನ್ನು ಬೆಂಬಲಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.



ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ನವದೆಹಲಿಯ ಕೆಪಿಸಿಸಿ ಕಚೇರಿಯಲ್ಲಿ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ವಾದ್ರಾ, ಇನ್ನಿತರ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

## ಜಲಮೂಲಗಳಿಗೆ ವೈದ್ಯಕೀಯ ತ್ಯಾಜ್ಯ ಎಸೆದರೆ ಕ್ರಿಮಿನಲ್ ಮೊಕದ್ದಮೆ

### ತಾಪಂ ಇಒಗಳಿಗೆ ಸಚಿವ ಈಶ್ವರ ಖಂಡ್ರೆ ಸೂಚನೆ

### ನೆಲಮಂಗಲ ತಾಲೂಕಿನ ಯಂಟಗಾನಹಳ್ಳಿ ಗ್ರಾಪಂಗೆ ಭೇಟಿ



**ಬೆಂಗಳೂರು, ಜೂ.19**: ಕೆರೆಗಳು, ನದಿ, ಸರೋವರ ಸೇರಿ ಜಲ ಮೂಲಗಳಿಗೆ ವೈದ್ಯಕೀಯ ತ್ಯಾಜ್ಯ, ಇ-ತ್ಯಾಜ್ಯ ಸುರಿದು ಕಲುಷಿತಗೊಳಿಸುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸ್ಪಷ್ಟ ಸೂಚನೆ ನೀಡಿದ್ದಾರೆ.

ನೆಲಮಂಗಲ ತಾಲೂಕು ಯಂಟಗಾನಹಳ್ಳಿ ಗ್ರಾಮ ಪಂಚಾಯ್ತಿಗೆ ಇಂದು ದಿಢೀರ್ ಭೇಟಿ ನೀಡಿದ ಸಂದರ್ಭದಲ್ಲಿ ತಮ್ಮ ಗ್ರಾಮದ ಕೆರೆಯಲ್ಲಿ ವೈದ್ಯಕೀಯ ತ್ಯಾಜ್ಯ ಸುರಿಯಲಾಗುತ್ತಿದೆ ಎಂದು ಗ್ರಾಮಸ್ಥರು ನೀಡಿದ ದೂರಿಗೆ ಸ್ಪಂದಿಸಿ, ಈ ಬಗ್ಗೆ ಪರಿಶೀಲಿಸಿ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ ದೂರು ದಾಖಲಿಸುವಂತೆ ತಾಲೂಕು ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದರು.

ಜನರ ಕುಂದು ಕೊರತೆ ವಿಚಾರಿಸಿದ ಸಚಿವರು, 15 ದಿನಗಳಲ್ಲಿ 11 ಬಿ ಅರ್ಜಿಗಳನ್ನು ವಿಲೆಗೂ ಸೂಚನೆ ನೀಡಿದರು. ಪಂಚಾಯ್ತಿ ಅಧಿಕಾರಿ, ಸಿಬ್ಬಂದಿಗಳ ಹಾಜರಾತಿ ಪುಸ್ತಕ ಪರಿಶೀಲಿಸಿದ ಅವರು, ನಿಗದಿತ ಸಮಯಕ್ಕೆ ಅಧಿಕಾರಿ, ಸಿಬ್ಬಂದಿ ಕಚೇರಿಗೆ ಆಗಮಿಸಬೇಕು, ಜನಸ್ನೇಹಿಯಾಗಿ ಕೆಲಸ ಮಾಡಬೇಕು. ವಿನಾ ಕಾರಣ ಗ್ರಾಮಸ್ಥರನ್ನು ಪಂಚಾಯ್ತಿ ಕಚೇರಿಗೆ ಅಲೆಸಬಾರದು ಎಂದು ನಿರ್ದೇಶಿಸಿದರು.

ಇ-ಸ್ವತ್ತು ನೀಡಿಕೆಯಲ್ಲಿ ಅನಗತ್ಯ ವಿಳಂಬವಾಗುತ್ತಿದೆ ಎಂಬ ಬಗ್ಗೆ ಪ್ರತಿಕ್ರಿಯಿಸಿದ ಅವರು, ತಾಂತ್ರಿಕ ಸಮಸ್ಯೆ ಇದ್ದರೆ ಮೇಲಧಿಕಾರಿಗಳ ಗಮನಕ್ಕೆ ತನ್ನಿ. ಎಲ್ಲ ದಾಖಲೆ ಸಮರ್ಪಕವಾಗಿದ್ದಲ್ಲಿ, ಕಾಲಮಿತಿಯಲ್ಲಿ ಇ-ಸ್ವತ್ತು ದಾಖಲಾತಿ ನೀಡಿ ಎಂದು ಸೂಚಿಸಿದರು.

ಬಳಿಕ, ಹಂಚಿಪುರ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಭೇಟಿನೀಡಿ, ನೀರಿನ ಗುಣಮಟ್ಟ ಪರಿಶೀಲಿಸಿದ ಅವರು, ಜಲ ಶುದ್ಧಿಗೆ ಬಳಸುವ ಮೆಂಬರೇನ್‌ಗಳನ್ನು ನಿಯಮಿತವಾಗಿ ಬದಲಾಯಿಸಬೇಕು, ನೀರಿನ ಗುಣಮಟ್ಟದ ಪರೀಕ್ಷೆ ನಡೆಸಬೇಕು. ನೀರಿನಿಂದ ಗ್ರಾಮದ ಜನರ ಆರೋಗ್ಯದ ಮೇಲೆ ಪರಿಣಾಮ ಆಗದಂತೆ ಕಟ್ಟೆಚ್ಚರ ವಹಿಸಿ ಎಂದರು.

ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ, ಮಕ್ಕಳಿಗೆ ನೀಡಲಾಗುತ್ತಿರುವ ಊಟದ ಗುಣಮಟ್ಟ ಪರಿಶೀಲಿಸಿದ ಅವರು, ಶೌಚಾಲಯಗಳಲ್ಲಿ ನೀರಿನ ವ್ಯವಸ್ಥೆ, ಶುಚಿತ್ವ ಇದೆಯೇ ಎಂಬ ಬಗ್ಗೆ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ತಾಲೂಕು ಕಾರ್ಯನಿರ್ವಹಣಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಬೇಕು ಎಂದು ಆದೇಶಿಸಿದರು.

ಭೇಟಿಯ ವೇಳೆ ನೆಲಮಂಗಲ ತಾಲೂಕು ಪಂಚಾಯ್ತಿಯ ಕಾರ್ಯನಿರ್ವಹಣಾಧಿಕಾರಿ ಬಿಂಧು ಮತ್ತಿತರರು ಉಪಸ್ಥಿತರಿದ್ದರು.

# ದೆಹಲಿಯಲ್ಲಿ ವಾಯುಮಾಲಿನ್ಯ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ

**ಪಿಯುಸಿ ವಾಹನಗಳ ಇಂಧನ, ಪಾರ್ಕಿಂಗ್ ದುಬಾರಿ ಮತ್ತು ಕಸ ಸುಡುವ ವ್ಯವಸ್ಥೆಗೆ ಬ್ರೇಕ್**

**ನವೆಂಬರ್‌ನಿಂದ ಫೆಬ್ರವರಿವರೆಗೆ ಹೊಸ ನಿಯಮ ಜಾರಿ**



ನವದೆಹಲಿ, ಜೂ.19: ಚಳಿಗಾಲದಲ್ಲಿ ದೆಹಲಿಯಲ್ಲಿ ಹೆಚ್ಚುವ ವಾಯುಮಾಲಿನ್ಯ ಸಮಸ್ಯೆ ಪರಿಹರಿಸಲು ಸರ್ಕಾರ ಈಗಾಗಲೇ ಸಿದ್ಧತೆ ಪ್ರಾರಂಭಿಸಿದೆ. ಚಳಿಗಾಲದ ಮಾಲಿನ್ಯ ಮಟ್ಟ ಹೆಚ್ಚಾದ ನಂತರ ನಿರ್ಬಂಧಗಳನ್ನು ವಿಧಿಸುವ ಬದಲು, ದೆಹಲಿ ಸರ್ಕಾರವು ನವೆಂಬರ್ ನಿಂದ ಫೆಬ್ರವರಿವರೆಗೆ ಜಾರಿಯಲ್ಲಿರುವ ಚಳಿಗಾಲದ ವಾಯು ಗುಣಮಟ್ಟ ನಿರ್ವಹಣಾ ವ್ಯವಸ್ಥೆಯನ್ನು ಜಾರಿ ಮಾಡಲು ಹೊರಟಿದೆ.

ಈ ವ್ಯವಸ್ಥೆಯಡಿಯಲ್ಲಿ, ವಾಹನ, ನಿರ್ಮಾಣ ಚಟುವಟಿಕೆ, ಪಾರ್ಕಿಂಗ್, ಕಚೇರಿ ಮತ್ತು ತೆರೆದ ಪ್ರದೇಶಗಳಲ್ಲಿ ಕೃಷಿ ತಾಜ್ಯ ಸುಡುವ ಚಟುವಟಿಕೆಗಳಿಗೆ ಪೂರ್ವಭಾವಿ ನಿಯಂತ್ರಣ ಕ್ರಮಗಳನ್ನು ಸ್ಥಾಪಿಸಲಾಗಿದೆ.

ಹೊಸ ವ್ಯವಸ್ಥೆಯಡಿಯಲ್ಲಿ, ಮಾನ್ಯ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ಹೊಂದಿರುವ ವಾಹನಗಳಿಗೆ ಮಾತ್ರ ಎಲ್ಲಾ ಪೆಟ್ರೋಲ್ ಪಂಪ್‌ಗಳಲ್ಲಿ ಮಾತ್ರ 1ಇಂಧನ ಸಿಗುತ್ತದೆ. ಇದರ ಹೊರತಾಗಿ, ದೆಹಲಿಯ ಹೊರಗೆ ನೋಂದಾಯಿಸಲಾದ ಬಿಎಸ್ -6 ಅಲ್ಲದ ವಾಣಿಜ್ಯ ವಾಹನಗಳ ಪ್ರವೇಶವನ್ನು ನವೆಂಬರ್ 1 ರಿಂದ ಜನವರಿ 31 ರವರೆಗೆ ನಿಷೇಧಿಸಲಾಗುವುದು. ಆದಾಗ್ಯೂ, ಸಿಎನ್‌ಜಿ, ವಿದ್ಯುತ್, ತುರ್ತು ಸೇವೆಗಳು ಮತ್ತು ಸರ್ಕಾರಿ ವಾಹನಗಳಿಗೆ ವಿನಾಯಿತಿ ನೀಡಲಾಗುವುದು.

ಚಳಿಗಾಲದಲ್ಲಿ ಖಾಸಗಿ ವಾಹನಗಳ ಬಳಕೆಯನ್ನು ಕಡಿಮೆ ಮಾಡಲು, ನವೆಂಬರ್ 1 ರಿಂದ ಫೆಬ್ರವರಿ 28 ರವರೆಗೆ ಅಧಿಕೃತ ಪಾರ್ಕಿಂಗ್ ಸ್ಥಳಗಳಲ್ಲಿ ಪಾರ್ಕಿಂಗ್ ಶುಲ್ಕವನ್ನು ದ್ವಿಗುಣಗೊಳಿಸಲಾಗುತ್ತದೆ.

ಇದರೊಂದಿಗೆ, ಸಂಚಾರ ಒತ್ತಡವನ್ನು ಕಡಿಮೆ ಮಾಡಲು ಕಚೇರಿ ಸಮಯಗಳನ್ನು ಬದಲಾಯಿಸುವ ವ್ಯವಸ್ಥೆಯನ್ನು ಜಾರಿಗೆ ತರಬಹುದು. ಸರ್ಕಾರಿ ಮತ್ತು ಖಾಸಗಿ ಕಚೇರಿಗಳಲ್ಲಿ ಗರಿಷ್ಠ 50 ಪ್ರತಿಶತದಷ್ಟು ಭೌತಿಕ ಉಪಸ್ಥಿತಿ ಮತ್ತು ಉಳಿದ ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಗತ್ಯ ಮತ್ತು ತುರ್ತು ಸೇವೆಗಳನ್ನು ಇದರಿಂದ ವಿನಾಯಿತಿ ನೀಡಲಾಗುವುದು.

ನಿರ್ಮಾಣ ಮತ್ತು ಕೆಡವುವಿಕೆ ಚಟುವಟಿಕೆಗಳಿಂದ ಹೊರಹೊಮ್ಮುವ ಧೂಳು ದೆಹಲಿಯಲ್ಲಿ ಮಾಲಿನ್ಯಕ್ಕೆ ಪ್ರಮುಖ ಕಾರಣವೆಂದು ಪರಿಗಣಿಸಲಾಗಿದೆ. ಆದ್ದರಿಂದ ನಿರ್ಮಾಣ ಸಂಸ್ಥೆಗಳು ತಮ್ಮ ಯೋಜನೆಗಳನ್ನು ಮುಂಚಿತವಾಗಿ ಸಿದ್ಧಪಡಿಸುವಂತೆ ಕೇಳಿದೆ.

ನವೆಂಬರ್ 1 ರಿಂದ ಜನವರಿ 31 ರವರೆಗೆ, ಪರಿಸರ ಮಾನದಂಡಗಳು ಮತ್ತು ಧೂಳು ನಿಯಂತ್ರಣ ಕ್ರಮಗಳಿಗೆ ಅನುಗುಣವಾಗಿ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಬೇಕಾಗುತ್ತದೆ.

ಆದರೆ, ಡಿಸೆಂಬರ್ 10 ಮತ್ತು ಜನವರಿ 20 ರ ನಡುವೆ, ಮಾಲಿನ್ಯದ ಮಟ್ಟಗಳು ಅತ್ಯಧಿಕವಾಗಿರುವಾಗ, ನಿರ್ಮಾಣ ಚಟುವಟಿಕೆಗಳ ಮೇಲೆ ಹೆಚ್ಚುವರಿ ನಿರ್ಬಂಧಗಳನ್ನು ವಿಧಿಸಬಹುದು. ಪ್ರಮುಖ ನಿರ್ಮಾಣ ಸ್ಥಳಗಳಲ್ಲಿ ಹೊಗೆ ನಿರೋಧಕ ಗನ್‌ಗಳು, ಮಂಜು ವ್ಯವಸ್ಥೆಗಳು ಮತ್ತು ಇತರ ಧೂಳು ನಿಯಂತ್ರಣ ಕ್ರಮಗಳನ್ನು ಕಡ್ಡಾಯಗೊಳಿದೆ.

ಕೃಷಿ ತಾಜ್ಯ, ಒಣಎಲೆಗಳು ಮತ್ತು ಇತರ ವಸ್ತುಗಳನ್ನು ತೆರೆದ ಸ್ಥಳದಲ್ಲಿ ಸುಡುವ ಘಟನೆ ತಡೆಯಲು ಸರ್ಕಾರವು ಕಟ್ಟುನಿಟ್ಟಿನ ವ್ಯವಸ್ಥೆಗಳನ್ನು ಮಾಡಿದೆ. ಈ ವ್ಯವಸ್ಥೆಯು ಪ್ರತಿವರ್ಷ ನವೆಂಬರ್ 1 ರಿಂದ ಫೆಬ್ರವರಿ 28 ರವರೆಗೆ ಜಾರಿಯಲ್ಲಿರುತ್ತದೆ.

# ಎನ್‌ಸಿಪಿಐ ಜತೆ ಟಿಎಂಸಿ ಸಂಸದರ ವಿಲೀನ ಪ್ರಸ್ತಾವನೆಗೆ ಆಕ್ಷೇಪ

**ನವದೆಹಲಿ, ಜೂ.19:** ತನ್ನದೇ ಪಕ್ಷದ ಬಂಡಾಯ ಸಂಸದರ ವಿರುದ್ಧ ಹೋರಾಟವನ್ನು ತೃಣಮೂಲ ಕಾಂಗ್ರೆಸ್ ತೀವ್ರಗೊಳಿಸಿದೆ. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ನೇತೃತ್ವದಲ್ಲಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಶುಕ್ರವಾರ ಭೇಟಿ ಮಾಡಲು ಮತ್ತು ನ್ಯಾಷನಲಿಸ್ಟ್ ಸಿಟಿಜನ್ಸ್ ಪಾರ್ಟಿ ಆಫ್ ಇಂಡಿಯಾ (ಎನ್‌ಸಿಪಿಐ) ನೊಂದಿಗೆ ವಿಲೀನಗೊಂಡ ಬಂಡುಕೋರರ ಹೇಳಿಕೆಯನ್ನು ಪ್ರಶ್ನಿಸಿತು.

ಟಿಎಂಸಿಯ ಹಿರಿಯ ನಾಯಕರಾದ ಕಲ್ಯಾಣ್ ಬ್ಯಾನರ್ಜಿ, ಮಹುವಾ ಮೊಯಿತ್ರಾ ಮತ್ತು ಸೌಗತ್ ರಾಯ್ ಅವರನ್ನೊಳಗೊಂಡ ನಿಯೋಗವು ಭಿನ್ನಮತೀಯ ಸಂಸದರ ವಿರುದ್ಧ 20 ಅನರ್ಹತೆ ಅರ್ಜಿಗಳನ್ನು ಸಲ್ಲಿಸಿತು ಮತ್ತು ಸಂಸತ್ತಿನಲ್ಲಿ ಅವರಿಗೆ ತೃಣಮೂಲ ಕಾಂಗ್ರೆಸ್ ಪ್ರತಿನಿಧಿಗಳಾಗಿ ಮಾನ್ಯತೆ ನೀಡದಂತೆ ಸ್ಪೀಕರ್ ಅವರನ್ನು ಒತ್ತಾಯಿಸಿತು.

ಸಭೆಯ ನಂತರ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಅಭಿಷೇಕ್ ಬ್ಯಾನರ್ಜಿ, ಪ್ರಸ್ತಾವಿತ ವಿಲೀನ ಮತ್ತು ಸಂಸದೀಯ ಪಕ್ಷದೊಳಗಿನ ವಿಭಜನೆಗೆ ಪಕ್ಷವು ತನ್ನ ಸಾಂವಿಧಾನಿಕ ಮತ್ತು ಕಾನೂನು ಆಕ್ಷೇಪಣೆಗಳನ್ನು ಔಪಚಾರಿಕವಾಗಿ ಮಂಡಿಸಲಾಗಿದೆ. ಸ್ಪೀಕರ್‌ಗೆ



20 ಅನರ್ಹತೆ ಅರ್ಜಿಗಳನ್ನು ಸಲ್ಲಿಸಿದ್ದೇವೆ. ಎನ್‌ಸಿಪಿಐ ಜೊತೆ ಹೊಂದಾಣಿಕೆ ಮಾಡಿಕೊಂಡಿರುವ ಬಂಡಾಯ ಸಂಸದರಿಗೆ ಟಿಎಂಸಿ ಸ್ಥಾನಮಾನ ನಿರಾಕರಿಸುವಂತೆ ಕೋರಿ ಪಕ್ಷವು ಬಿರ್ಲಾ ಅವರಿಗೆ ಪತ್ರ ಬರೆದಿದೆ. ಈ ಕ್ರಮವನ್ನು ಪಕ್ಷವನ್ನು ವಿಭಜಿಸುವ ಅಸಂವಿಧಾನಿಕ ಪ್ರಯತ್ನ ಎಂದು ಕರೆದ ಬ್ಯಾನರ್ಜಿ, ತೃಣಮೂಲ ಕಾಂಗ್ರೆಸ್ ಏಕೀಕೃತ ರಾಜಕೀಯ ಸಂಘಟನೆಯಾಗಿ ಉಳಿದಿದೆ ಎಂದು ಪ್ರತಿಪಾದಿಸಿದರು.

ಭಿನ್ನಮತೀಯರ ವಿಲೀನದ ಹಕ್ಕು ಸಂವಿಧಾನದ ಪಕ್ಷಾಂತರ ವಿರೋಧಿ ನಿಬಂಧನೆಗಳ ಅಡಿಯಲ್ಲಿ ಪರಿಶೀಲನೆಗೆ ಒಳಪಡುವುದಿಲ್ಲ ಎಂದು ಟಿಎಂಸಿ ಸ್ಪೀಕರ್ ಮುಂದೆ ವಾದಿಸಿತು. ಪಕ್ಷದ ಪ್ರಕಾರ, ಹತ್ತನೇ ವೇಳಾಪಟ್ಟಿಯು ಮಾನ್ಯ ವಿಲೀನಕ್ಕಾಗಿ ಪೋಷಕ ರಾಜಕೀಯ ಪಕ್ಷದ ಕನಿಷ್ಠ ಮೂರನೇ ಎರಡರಷ್ಟು ಜನರ ಒಪ್ಪಿಗೆಯನ್ನು ಬಯಸುತ್ತದೆ ಮತ್ತು ಶಾಸಕಾಂಗ ಪಕ್ಷದ ಒಂದು ವಿಭಾಗವು ಸಂಘಟನೆಯಿಂದ ಏಕಪಕ್ಷೀಯವಾಗಿ ತನ್ನನ್ನು ತಾನು ಪ್ರತ್ಯೇಕಿಸಿಕೊಳ್ಳಲು ಅನುಮತಿಸುವುದಿಲ್ಲ. ಶಾಸಕರು ಸಂಸದೀಯ ವಿಭಾಗದೊಳಗೆ ಕೇವಲ ನಿರ್ಣಯಗಳು ಅಥವಾ ಸಹಿಗಳ ಮೂಲಕ ಸ್ವತಂತ್ರ ವಿಭಜಿತ ಬಣವನ್ನು ರಚಿಸಲು ಸಾಧ್ಯವಿಲ್ಲ ಮತ್ತು ಅಂತಹ ವಿಷಯಗಳಲ್ಲಿ ಪೋಷಕ ಪಕ್ಷವು ನಿರ್ಣಾಯಕ ಅಧಿಕಾರವಾಗಿ ಉಳಿದಿದೆ ಎಂದು ಪಕ್ಷವು ಮತ್ತಷ್ಟು ವಾದಿಸಿತು.

ತನ್ನ ಸಲ್ಲಿಕೆಯ ಭಾಗವಾಗಿ, ಈ ವಿಷಯವು ತೀರ್ಪು ನೀಡುವವರೆಗೆ ಬಂಡಾಯ ಬಣಕ್ಕೆ ಪ್ರತ್ಯೇಕ ಆಸನ ವ್ಯವಸ್ಥೆ, ಸಂಸತ್ತಿನ ಮಾನ್ಯತೆ ಮತ್ತು ಇತರ ಸೌಲಭ್ಯಗಳನ್ನು ನಿರಾಕರಿಸಬೇಕೆಂದು ಟಿಎಂಸಿ ವಿನಂತಿಸಿತು.

ಹಿರಿಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್ ನೇತೃತ್ವದ 20 ಟಿಎಂಸಿ ಲೋಕಸಭಾ ಸದಸ್ಯರು ಮತ್ತು ನಂತರ ಹಿರಿಯ ನಾಯಕ ಸುದೀಪ್ ಬಂಡೋಪಾಧ್ಯಾಯ ಸೇರಿಕೊಂಡ ನಂತರ, ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷದಿಂದ ಬೇರ್ಪಡುವ ನಿರ್ಧಾರವನ್ನು ಘೋಷಿಸಿದ ನಂತರ ಈ ವಿವಾದ ಹುಟ್ಟಿಕೊಂಡಿತು. ನಂತರ ಗುಂಪು ಎನ್ಸಿಪಿಐ ಜೊತೆ ವಿಲೀನವನ್ನು ಘೋಷಿಸಿತು ಮತ್ತು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಕ್ಕೆ ತನ್ನ ಬೆಂಬಲವನ್ನು ಸೂಚಿಸಿತು.

# ಜೂ.21ಕ್ಕೂ ಮುನ್ನ ನೀಟ್ ಮರುಪರೀಕ್ಷೆಗೆ ಆಕ್ಷೇಪ ವ್ಯಕ್ತಪಡಿಸುವ ಅರ್ಜಿ ಪುರಸ್ಕರಿಸಲು ಸುಪ್ರೀಂ ನಕಾರ

**ನವದೆಹಲಿ, ಜೂ.19:** ಜೂನ್ 21ರಂದು ನಡೆಯಲಿರುವ ನೀಟ್–ಯುಜಿ ಮರುಪರೀಕ್ಷೆಯ ಕುರಿತು ಆಕ್ಷೇಪ ವ್ಯಕ್ತಪಡಿಸುವ ಅರ್ಜಿಗಳ ತುರ್ತು ವಿಚಾರಣೆಯನ್ನು ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ, ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು ಈಗಾಗಲೇ ನ್ಯಾಯಮೂರ್ತಿ ಪಿ.ಎಸ್. ನರಸಿಂಹ ನೇತೃತ್ವದ ಪೀಠದ ಮುಂದೆ ಪಟ್ಟಿ ಮಾಡಲಾಗಿದೆ ಎಂದು ಗಮನಿಸಿದೆ.

ನೀಟ್ ಅಭ್ಯರ್ಥಿಗಳನ್ನು ಪ್ರತಿನಿಧಿಸುವ ವಕೀಲರು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿದರು. "ಎಲ್ಲಾ ನೀಟ್ ವಿಷಯಗಳು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರ ಪೀಠದ ಮುಂದೆ ಹೋಗುತ್ತವೆ. ಯಾವುದೇ ತುರ್ತು ಇಲ್ಲ" ಎಂದು ಅವರು ಹೇಳಿದರು.

ನಂತರ, ಮತ್ತೊಬ್ಬ ವಕೀಲರು 1,600 ನೀಟ್ ಅಭ್ಯರ್ಥಿಗಳ ಕಳವಳಗಳ ಬಗ್ಗೆ ನ್ಯಾಯಾಲಯದ ಗಮನ ಸೆಳೆದರು, ಸಾಮಾಜಿಕ ಮಾಧ್ಯಮಗಳಲ್ಲಿ ಹರಡುತ್ತಿರುವ ವದಂತಿಗಳು ಮತ್ತು ದೆಹಲಿ ಹೈಕೋರ್ಟ್ನ ಮುಂದೆ ಸಂಬಂಧಿತ ಪ್ರಕ್ರಿಯೆಗಳಲ್ಲಿನ ಬೆಳವಣಿಗೆಗಳಿಂದಾಗಿ ಅವರು ಗಮನಾರ್ಹ ಒತ್ತಡ ಮತ್ತು ಅನಿಶ್ಚಿತತೆಯನ್ನು ಎದುರಿಸುತ್ತಿದ್ದಾರೆ ಎಂದು ಹೇಳಿದರು. ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಪರೀಕ್ಷಾ ಪ್ರಕ್ರಿಯೆಯ ಸುತ್ತಲಿನ ಚರ್ಚೆಗಳ ಬಗ್ಗೆ ವರದಿಗಳ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು "ಅಗಾಧ ಒತ್ತಡ ಮತ್ತು ಆತಂಕ"ದಲ್ಲಿದ್ದಾರೆ ಎಂದು ವಕೀಲರು ವಾದಿಸಿದರು.

ಜೂನ್ 21 ರಂದು ನಡೆಯುವ ಮರುಪರೀಕ್ಷೆಯ ಪ್ರವೇಶಪತ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಹ ವಕೀಲರು ಎತ್ತಿ ತೋರಿಸಿದರು, ಕೆಲವು ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರಗಳನ್ನು ಡೌನ್ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ, ಆದರೆ ಇತರರು ಮೂಲತಃ ನಿಗದಿಪಡಿಸಿದ ಕೇಂದ್ರಗಳಿಗಿಂತ ಭಿನ್ನವಾದ ಪರೀಕ್ಷಾ ಕೇಂದ್ರಗಳನ್ನು ನಿಯೋಜಿಸಿ ಪ್ರವೇಶ ಪತ್ರಗಳನ್ನು ಪಡೆದಿದ್ದಾರೆ ಎಂದು ಹೇಳಿದರು.

ವಿದ್ಯಾರ್ಥಿಗಳ ಆತಂಕವನ್ನು ನಿವಾರಿಸಲು, ಅರ್ಜಿಯನ್ನು ಕನಿಷ್ಠ ಬಾಕಿ ಇರುವ ನೀಟ್ ವಿಷಯಗಳ ಬ್ಯಾಚ್‌ನೊಂದಿಗೆ ಟ್ಯಾಗ್ ಮಾಡಬೇಕೆಂದು ವಕೀಲರು ವಿನಂತಿಸಿದರು. ಆದಾಗ್ಯೂ, ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಈಗಾಗಲೇ ಈ ವಿಷಯವನ್ನು ನಿರ್ವಹಿಸುತ್ತಿರುವ ಪೀಠವು ಪರಿಗಣಿಸುತ್ತದೆ ಎಂದು ಮುಖ್ಯ ನ್ಯಾಯಾಧೀಶರು ಪುನರುಚ್ಚರಿಸಿದರು.

ನ್ಯಾಯಾಲಯವು ಪರಿಸ್ಥಿತಿಯ ಬಗ್ಗೆ ತಿಳಿದಿದೆ ಮತ್ತು ಸಂಬಂಧಿತ ಎಲ್ಲಾ ಅರ್ಜಿಗಳು ನ್ಯಾಯಮೂರ್ತಿ ನರಸಿಂಹ ಅವರ ಪೀಠದ ಮುಂದೆ ಇವೆ ಎಂದು ಗಮನಿಸಿದ ಸಿಜೆಐ, ಪೀಠವು ಸಭೆ ಸೇರಿದಾಗ ಸಮಸ್ಯೆಗಳನ್ನು ಪರಿಹರಿಸಬಹುದು ಎಂದು ಹೇಳಿದರು.

ಪರಿಣಾಮವಾಗಿ ನ್ಯಾಯಾಲಯವು ಯಾವುದೇ ತುರ್ತು ಪರಿಹಾರ ಅಥವಾ ಪ್ರತ್ಯೇಕ ಪಟ್ಟಿಯನ್ನು ನೀಡಲು ನಿರಾಕರಿಸಿತು, ಅಭ್ಯರ್ಥಿಗಳು ಎತ್ತಿರುವ ಕಳವಳಗಳನ್ನು ನ್ಯಾಯಮೂರ್ತಿ ಪಿ ಎಸ್ ನರಸಿಂಹ ನೇತೃತ್ವದ ಪೀಠದ ಮುಂದೆ ಬಾಕಿ ಇರುವ ನೀಟ್ ಸಂಬಂಧಿತ ಪ್ರಕರಣಗಳ ಜೊತೆಗೆ ಪರಿಗಣಿಸಲು ಬಿಟ್ಟಿತು.

# ನೀಟ್ ಪರೀಕ್ಷೆ: ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಕ್ಕೆ 1 ಕೋಟಿ ರೂ.ಪರಿಹಾರಕ್ಕೆ ಆಗ್ರಹ



**ನವದೆಹಲಿ, ಜೂ.19:** ನೀಟ್ ಪರೀಕ್ಷೆಗೆ ಸಂಬಂಧಿಸಿದ ವಿವಾದಗಳ ನಡುವೆ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಗಳಿಗೆ ತಲಾ 1 ಕೋಟಿ ರೂ. ಪರಿಹಾರ ನೀಡುವಂತೆ ಪ್ರಧಾನಿ ಮೋದಿಗೆ ಕಾಕ್ರೋಚ್ ಜನತಾ ಪಕ್ಷದ ಸ್ಥಾಪಕ ಅಭಿಜೀತ್ ದೀಪ್ಕೆ ಅಗ್ರಹಿಸಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಅವರು, ಪ್ರಶ್ನೆ ಪತ್ರಿಕೆ ಸೋರಿಕೆಗೆ ಹೊಣೆಗಾರಿಕೆ ವಹಿಸುವಂತೆ ಒತ್ತಾಯಿಸಿದರು ಮತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ವಜಾಗೊಳಿಸುವ ತಮ್ಮ ಬೇಡಿಕೆಯನ್ನು ಪುನರುಚ್ಚರಿಸಿದರು.

ನಮ್ಮ ದೇಶದ ಭವಿಷ್ಯಕ್ಕೆ ಅಂದರೆ ನಮ್ಮ ಯುವ ವಿದ್ಯಾರ್ಥಿಗಳ ಜೀವನ ಮತ್ತು ಮಾನಸಿಕ ಆರೋಗ್ಯಕ್ಕೆ ಬೆದರಿಕೆಯೊಡ್ಡುತ್ತಿರುವ ಬೆಳೆಯುತ್ತಿರುವ ಬಿಕ್ಕಟ್ಟಿನ ಬಗ್ಗೆ ನಿಮ್ಮ ಗಮನ ಸೆಳೆಯಲು ನಾನು ಇಂದು ಭಾರವಾದ ಹೃದಯದಿಂದ ನಿಮಗೆ ಬರೆಯುತ್ತಿದ್ದೇನೆ, ಪ್ರಶ್ನೆ ಸೋರಿಕೆ ಬಳಿಕ ಇತ್ತೀಚಿನ ವಾರಗಳಲ್ಲಿ 11 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮತ್ತು ಕಳೆದ 48 ಗಂಟೆಗಳಲ್ಲಿ ಐದು ಸಾವುಗಳು ಸಂಭವಿಸಿವೆ.

ಅನೇಕ ಕುಟುಂಬಗಳು ತಮ್ಮ ಮಕ್ಕಳ ಶಿಕ್ಷಣದ ಕನಸುಗಳನ್ನು ನನಸಾಗಿಸಲು ಗಣನೀಯ ಪ್ರಮಾಣದ ಶೈಕ್ಷಣಿಕ ಸಾಲಗಳನ್ನು ಪಡೆದಿವೆ. ತಮ್ಮ ಇಡೀ ಜೀವನ ಉಳಿತಾಯವನ್ನು ಖರ್ಚು ಮಾಡಿದ ಮಕ್ಕಳನ್ನು ಶಿಕ್ಷಣಕ್ಕಾಗಿ ಕಳೆದುಕೊಂಡಿರುವುದು ಈ ಕುಟುಂಬಗಳನ್ನು ಸಂಪೂರ್ಣವಾಗಿ ನಿರ್ಗತಿಕರನ್ನಾಗಿ ಮಾಡಿದೆ. ಆದ್ದರಿಂದ, ಪ್ರಶ್ನೆಪತ್ರಿಕೆ ಸೋರಿಕೆಯಿಂದ ಹಾನಿಗೊಳಗಾದ ಕುಟುಂಬಗಳಿಗೆ 1 ಕೋಟಿ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

**ಶಿಕ್ಷಣ ಸಚಿವರನ್ನು ಕೈಬಿಡುವಂತೆ ಮನವಿ:** ಕಾಕ್ರೋಚ್ ಜನತಾ ಪಕ್ಷವು ಕಳೆದ ಒಂದು ತಿಂಗಳಿನಿಂದ ಶಿಕ್ಷಣ ಸಚಿವರ ರಾಜೀನಾಮೆಗೆ ಒತ್ತಾಯಿಸುತ್ತಿದೆ ಮತ್ತು ಅದರ ಬೇಡಿಕೆಗಳನ್ನು ಬೆಂಬಲಿಸಿ ದೇಶಾದ್ಯಂತ ಪ್ರತಿಭಟನೆ ನಡೆಸುತ್ತಿದೆ. ನಮಗೆ ಬೇಕಾಗಿರುವುದು ಜೀವಹಾನಿ ಘಟನೆಗಳಿಗೆ ಸ್ವಲ್ಪ ಹೊಣೆಗಾರಿಕೆ. ನಾಯಕತ್ವವನ್ನು ಹೊಣೆಗಾರರನ್ನಾಗಿ ಮಾಡುವುದು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಪೋಷಕರ ನಂಬಿಕೆಯನ್ನು ಪುನಃಸ್ಥಾಪಿಸುವ ಪ್ರಮುಖ ಹೆಜ್ಜೆಯಾಗಿದೆ ಮತ್ತು ಹಾಗೆ ಮಾಡಲು ವಿಫಲವಾದರೆ ಆಡಳಿತವು ಪ್ರಸ್ತುತ ಪರಿಸ್ಥಿತಿಯನ್ನು ಒಪ್ಪಿಕೊಳ್ಳುತ್ತದೆ ಎಂಬ ಸಂದೇಶವನ್ನು ಅಜಾಗರೂಕತೆಯಿಂದ ಕಳುಹಿಸುತ್ತದೆ. ಆದ್ದರಿಂದ, ಶಿಕ್ಷಣ ಸಚಿವರನ್ನು ಅವರ ಹುದ್ದೆಯಿಂದ ತೆಗೆದುಹಾಕುವಂತೆ ನಾವು ನಿಮ್ಮನ್ನು ಗೌರವದಿಂದ ವಿನಂತಿಸುತ್ತೇವೆ ಎಂದು ಪತ್ರದಲ್ಲಿ ಉಲ್ಲೇಖಿಸಿದೆ.

# ರಾಮಮಂದಿರ ದೇಣಿಗೆ ಕಳ್ಳತನ ತಪ್ಪಿತಸ್ಥರನ್ನು ಬಿಡುವುದಿಲ್ಲ: ಯೋಗಿ

**ಅಯೋಧ್ಯೆ ಜೂ.19:** ರಾಮಮಂದಿರ ದೇಣಿಗೆ ಕಳ್ಳತನದ ಅಪರಾಧಿಗಳು ಯಾರೇ ಆಗಿರಲಿ ಅವರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಉತ್ತರ ಪ್ರದೇಶ ಸಿಎಂ ಆದಿತ್ಯನಾಥ್ ಎಚ್ಚರಿಸಿದ್ದಾರೆ. ಅಯೋಧ್ಯೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಹೇಳಿಕೆ ನೀಡಿದ್ದಾರೆ.

ಜನರು ರಾಮಭಕ್ತರ ಭಾವನೆಗಳಿಗೆ ಧಕ್ಕೆ ತರುವ ಹೇಳಿಕೆಗಳನ್ನು ನೀಡಬಾರದು ಎಂದು ಆದಿತ್ಯನಾಥ ಮನವಿ ಮಾಡಿದರು. ಯಾರಾದರೂ ಸಾಕ್ಷ್ಯಗಳನ್ನು ಹೊಂದಿದ್ದರೆ ಅದನ್ನು ವಿಶೇಷ ತನಿಖಾ ತಂಡಕ್ಕೆ ಸಲ್ಲಿಸುವಂತೆ ಅವರು ಕೇಳಿಕೊಂಡರು. ದೇವಾಲಯದ ಟ್ರಸ್ಟ್‌ನ ಕೋರಿಕೆಯ ಮೇರೆಗೆ ಎಸ್‌ಐಟಿ ರಚಿಸಲಾಗಿದೆ ತನಿಖೆಯು ಸತ್ಯಗಳನ್ನು ಬೆಳಕಿಗೆ ತರುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಭಕ್ತರು ಶ್ರೀರಾಮನೊಂದಿಗೆ ಸಂಬಂಧ ಹೊಂದಿರುವ ಘನತೆ ಮತ್ತು ತಾಳ್ಮೆಯ ಆದರ್ಶಗಳನ್ನು ಎತ್ತಿಹಿಡಿಯಬೇಕು ಮತ್ತು ಅಯೋಧ್ಯೆ ಅಥವಾ ರಾಮಜನ್ಮಭೂಮಿ ದೇವಾಲಯವನ್ನು ಕೆಣಕುವ ಪ್ರಯತ್ನಗಳಿಂದ ಪ್ರಭಾವಿತರಾಗಬಾರದು ಎಂದು ಅವರು ಕರೆ ನೀಡಿದರು. ಅಯೋಧ್ಯೆಯ ಬಗ್ಗೆ ಕಾಂಗ್ರೆಸ್ "ದ್ವಿಮುಖ ನೀತಿ" ಪ್ರದರ್ಶಿಸುತ್ತಿದೆ ಎಂದು ಯೋಗಿ ಆದಿತ್ಯನಾಥ ಆರೋಪಿಸಿದರು, ರಾಮ ಮಂದಿರ ನಿರ್ಮಾಣವನ್ನು ವಿರೋಧಿಸಿದ್ದ ಪಕ್ಷ ಈಗ ಪವಿತ್ರ ನಗರದ ಬಗ್ಗೆ ಕಾಳಜಿ ವಹಿಸುತ್ತಿರುವಂತೆ ನಟಿಸುತ್ತಿದೆ ಎಂದು ಆರೋಪಿಸಿದರು.

ಸಮಾಜವಾದಿ ಪಕ್ಷ ಮತ್ತು ಅದರ ದ್ವಂದ್ವ ನೀತಿಗಳನ್ನು ನೋಡಿ, ಇಂದು ರಾಮ ಭಕ್ತರನ್ನು ಅವಮಾನಿಸಲಾಗಿದೆ ಎಂದು ಅವರು ಹೇಳುತ್ತಾರೆ, ಆದರೆ ಇವರು 'ಕರಸೇವಕರ' ಮೇಲೆ ಗುಂಡು ಹಾರಿಸಲು ಆದೇಶಿಸಿದ ಮತ್ತು 'ಜೈಶ್ರೀರಾಮ್' ಎಂದು ಜಪಿಸುವವರ ವಿರುದ್ಧ ಲಾಠಿ ಪ್ರಹಾರ ಮಾಡಿದ ಜನರು. ಈಗ ಅವರು ಇತರರಿಗೆ ಧರ್ಮೋಪದೇಶ ನೀಡಲು ಮುಂದೆ ಬಂದಿದ್ದಾರೆ ಎಂದು ಅವರು ಹೇಳಿದರು.



ಶುಕ್ರವಾರ ನವದೆಹಲಿಯಲ್ಲಿ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಸಮ್ಮುಖದಲ್ಲಿ ಭಾರತೀಯ ನೌಕಾಪಡೆಗಾಗಿ ಕನಿಷ್ಠ 60% ಸ್ಥಳೀಯ ವಿಷಯವನ್ನು ಹೊಂದಿರುವ 1.25 ಮೆಗಾವ್ಯಾಟ್ ಮೆರೈನ್ ಗ್ಯಾಸ್ ಟರ್ಬೈನ್ ಜನರೇಟರ್‌ಗಳ 12 ಸೆಟ್‌ಗಳ ಖರೀದಿಗಾಗಿ ರಕ್ಷಣಾ ಸಚಿವಾಲಯವು ಪುಣೆಯ ಭಾರತ್ ಫೋರ್ಜ್ ಕಂಪನಿಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.

## ಯುಡಿಎಫ್ ಸರ್ಕಾರದ ಮೊದಲ ಮುಂಗಡಪತ್ರ ಮಂಡಿಸಿದ ಸಿಎಂ ವಿ.ಡಿ. ಸತೀಶನ್

# ಕೇರಳ ಬಜೆಟ್: ಕಡಲತೀರದ ಪ್ರಗತಿ, ಆರೋಗ್ಯ ಕ್ಷೇತ್ರಕ್ಕೆ ಒತ್ತು

**ತಿರುವನಂತಪುರ, ಜೂ.19:** ಕೇರಳದ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರೂ ಆಗಿರುವ ವಿ.ಡಿ. ಸತೀಶನ್ ಅವರು ವಿಧಾನಸಭೆಯಲ್ಲಿ ಹೊಸ ಯುಡಿಎಫ್ ಸರ್ಕಾರದ ಮೊದಲ 2026–27ನೇ ಸಾಲಿನ ಪರಿಷ್ಕೃತ ಬಜೆಟ್ ಮಂಡಿಸಿದ್ದಾರೆ. ಈ ಬಜೆಟ್ನಲ್ಲಿ ರಾಜ್ಯದ ಆರ್ಥಿಕತೆಯನ್ನು ಸುಧಾರಿಸಲು, ಆರೋಗ್ಯ ಕ್ಷೇತ್ರ, ಕಡಲ ತೀರದ ಪ್ರಗತಿ ಮತ್ತು ಸುಸ್ಥಿರ ಮೂಲಸೌಕರ್ಯಗಳ ಸುಧಾರಣೆಗೆ ಒತ್ತು ನೀಡಲಾಗಿದೆ.

ಕೇರಳವನ್ನು ಜಾಗತಿಕ ಕಡಲ ಮತ್ತು ಆರ್ಥಿಕ ಹಬ್ ಆಗಿ ಪರಿವರ್ತಿಸಲು ಮಿಷನ್ ಸಮುದ್ರ ಯೋಜನೆಯನ್ನು ಕೇರಳ ಸರ್ಕಾರ ಘೋಷಿಸಿದೆ. ಹಾಗೆಯೇ ಕೇರಳವನ್ನು ಪ್ರಮುಖ ಏಕೀಕೃತ ಬಂದರು ನಗರ ಆಗಿ ಅಭಿವೃದ್ಧಿಪಡಿಸುವ ಮೂಲಕ ಬಂದರು ಆಧಾರಿತ ಆರ್ಥಿಕತೆಗೆ ಉತ್ತೇಜನ ನೀಡಲು ತೀರ್ಮಾನಿಸಿದೆ. ಇನ್ನು ಮೀನುಗಾರರ ವಸತಿ ಯೋಜನೆಗಳಿಗೆ ನೆರವು ಮತ್ತು ಅವರು ಮೀನುಗಾರಿಕೆಗೆ ಹೋಗಲಾಗದ ಕಷ್ಟದ ದಿನಗಳಲ್ಲಿ ವಿಶೇಷ ಆರ್ಥಿಕ ಸಹಾಯ ಒದಗಿಸಲು ನಿರ್ಧರಿಸಲಾಗಿದೆ.

ಆರೋಗ್ಯ ರಕ್ಷಣೆಗೆ ಒಟ್ಟು 2,076 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ.



ಈ ಬಜೆಟ್ನಲ್ಲಿ ಹೊಸದಾಗಿ ಉಮ್ಮನ್ ಚಾಂಡಿ ಆರೋಗ್ಯ ವಿಮೆ ಯೋಜನೆಯನ್ನು ಘೋಷಿಸಲಾಗಿದೆ.

ಇದಕ್ಕಾಗಿ 10 ಕೋಟಿ ರೂ. ಆರಂಭಿಕ ಅನುದಾನ ನೀಡಲಾಗಿದೆ. ಹಾಗೆಯೇ ಹರಿಪಾಡ್ನಲ್ಲಿ ಹೊಸ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ. ವೃದ್ಧರ ಆರೈಕೆಗಾಗಿ 10 ಕೋಟಿ ಮೀಸಲಿಡಲಾಗಿದ್ದು, ಇದಕ್ಕಾಗಿ ವಿಶೇಷ ಕೇರ್ಗಿವರ್ ಪ್ರಮಾಣಪತ್ರ ಕೋರ್ಸ್‌ಗಳನ್ನು ಆರಂಭಿಸುವುದಾಗಿ ಕೇರಳ ಯುಡಿಎಫ್ ಸರ್ಕಾರ ಬಜೆಟ್ನಲ್ಲಿ ಘೋಷಿಸಿದೆ.

ಇನ್ನು ರಬ್ಬರ್ ಕನಿಷ್ಠ ಬೆಂಬಲ ಬೆಲೆಯನ್ನು 250 ರೂ.ಗಳಿಗೆ ಹೆಚ್ಚಿಸಲಾಗಿದೆ. ಕೃಷಿ ವಲಯಕ್ಕೆ ಒಟ್ಟು 1,535 ಕೋಟಿ ರೂ. ನೀಡಲಾಗಿದ್ದು, ಮಹಿಳಾ ರೈತರನ್ನು ಉತ್ತೇಜಿಸಲು ಕೃಷಿಸಖಿ ಯೋಜನೆ ಆರಂಭಿಸಲಾಗಿದೆ. ಮಾನವ–ವನ್ಯಜೀವಿ ಸಂಘರ್ಷವನ್ನು ತಡೆಗಟ್ಟಲು 192 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್ ಕೇರಳ ಸಿಎಂ ವಿ. ಡಿ. ಸತೀಶನ್ ಘೋಷಿಸಿದ್ದಾರೆ.

ಪರಿಸರಸ್ನೇಹಿ ಇವಿ ಕಾರುಗಳ ರಸ್ತೆ ತೆರಿಗೆಯನ್ನು ಕಡಿತಗೊಳಿಸಲಾಗಿದೆ, ಇದರಿಂದ ಇವಿ ಕಾರುಗಳು ಅಗ್ಗವಾಗಲಿವೆ. ಖಾಸಗಿ ಬಸ್ ಆಪರೇಟರ್‌ಗಳಿಗೆ ಮೂರು ತಿಂಗಳಿಗೊಮ್ಮೆ ಪಾವತಿಸಬೇಕಾದ ತೆರಿಗೆಯಲ್ಲಿ ಶೇ.50ರಷ್ಟು ಕಡಿತ ಘೋಷಿಸಲಾಗಿದೆ. ಆಲ್ ಇಂಡಿಯಾ ಪರ್ಮಿಟ್ ವಾಹನಗಳ ತೆರಿಗೆಯನ್ನೂ ಶೇ.50ರಷ್ಟು ಇಳಿಸಲಾಗಿದೆ. ಕಡಿಮೆ ಆಲ್ಕೋಹಾಲ್ ಇರುವ ಪಾನೀಯಗಳಿಗೆ ಹೊಸ ತೆರಿಗೆ ಸ್ಲ್ಯಾಬ್ ಪರಿಚಯಿಸಲಾಗಿದೆ ಮತ್ತು ಮದ್ಯದ ಬೆಲೆಯಲ್ಲಿ ಏರಿಕೆಯಾಗಿದೆ.

ಶಿಕ್ಷಣ ವಲಯಕ್ಕೆ 1,032 ಕೋಟಿ ರೂ. ಹಾಗೂ ಕೈಗಾರಿಕಾ ಪ್ರಗತಿಗೆ 1,558 ಕೋಟಿ ರೂ. ಹಂಚಿಕೆ ಮಾಡಲಾಗಿದೆ. ಮಹಿಳೆಯರ ಉಚಿತ ಬಸ್ ಪ್ರಯಾಣದ ಇಂದಿರಾ ಗಾಂಧಿ ಯೋಜನೆಗಾಗಿ 600 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

ವಯನಾಡು, ಕಾಸರಗೋಡು ಮತ್ತು ಇಡುಕ್ಕಿ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಘೋಷಣೆಯಾಗಿದೆ. ಮಾದಕ ದ್ರವ್ಯ ಮುಕ್ತ ಕೇರಳಕ್ಕಾಗಿ ಆಪರೇಷನ್ ತೂಫಾನ್ ಯೋಜನೆಗೆ 10 ಕೋಟಿ ರೂ. ನೀಡಲಾಗಿದೆ.

# ಸುರಕ್ಷಿತ ಪಾದಚಾರಿ ಮಾರ್ಗಗಳಲ್ಲಿ ನಡೆಯುವುದು ನಾಗರಿಕರ ಹಕ್ಕು: ಸುಪ್ರೀಂ



**ನವದೆಹಲಿ, ಜೂ.19:** ಸುರಕ್ಷಿತ ಪಾದಚಾರಿ ಮಾರ್ಗಗಳಲ್ಲಿ ಆತಂಕವಿಲ್ಲದೆ ನಡೆಯುವುದು ನಾಗರಿಕರ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ. ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಮತ್ತು ನ್ಯಾಯಮೂರ್ತಿ ಅತುಲ್ ಎಸ್. ಚಂದೂರ್ಕರ್ ಅವರನ್ನೊಳಗೊಂಡ ನ್ಯಾಯಪೀಠವು ಈ ಆದೇಶ ನೀಡಿದೆ.

ವ್ಯಕ್ತಿಯೊಬ್ಬರು ತಮ್ಮ 5 ವರ್ಷದ ಮಗನನ್ನು ಶಾಲೆಗೆ ಕರೆದುಕೊಂಡು ಹೋಗುತ್ತಿದ್ದಾಗ ಹಿಂದಿನಿಂದ ಬಂದ ನೀರಿನ ಟ್ಯಾಂಕರ್ ಹರಿದು ಬಾಲಕ ಸ್ಥಳದಲ್ಲೇ ಮೃತಪಟ್ಟಿದ್ದ. ಈ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ಆದೇಶ ನೀಡಿದೆ. ಈ ಘಟನೆ ನಡೆದ ಸ್ಥಳದಲ್ಲಿ ಯಾವುದೇ ಪಾದಚಾರಿ ಮಾರ್ಗ ಅಥವಾ ಕ್ರಾಸಿಂಗ್ ಇರಲಿಲ್ಲ. ಮಗುವಿನ ಕುಟುಂಬಕ್ಕೆ 11.44 ಲಕ್ಷ ರೂ. ಪರಿಹಾರ ಘೋಷಿಸುವುದರ ಜತೆಗೆ ದೇಶಾದ್ಯಂತ ಪಾದಚಾರಿಗಳ ಸುರಕ್ಷತೆಗೆ ಹೊಸ ಕಾನೂನು ತರಲು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಇನ್ನು ಅಪಘಾತ ಪರಿಹಾರ ನ್ಯಾಯಾಧಿಕರಣ ನೀಡಿದ್ದ ರೂ. 7.82 ಲಕ್ಷ ಪರಿಹಾರವನ್ನು ಹೈಕೋರ್ಟ್ ರೂ. 4.70 ಲಕ್ಷಕ್ಕೆ ಇಳಿಸಿತ್ತು. ಇದನ್ನು ತೀವ್ರವಾಗಿ ಖಂಡಿಸಿದ ಸುಪ್ರೀಂ ಕೋರ್ಟ್, ಪರಿಹಾರವನ್ನು ರೂ. 11,44,628ಕ್ಕೆ ಹೆಚ್ಚಿಸಿ ಆದೇಶಿಸಿದೆ. ಅಲ್ಲದೆ ಇಂತಹ ದುರಂತಗಳಿಗೆ ರಸ್ತೆ ವ್ಯವಸ್ಥೆಯೇ ಕಾರಣ ಎಂದು ಬೇಸರ ವ್ಯಕ್ತಪಡಿಸಿದೆ. ರಸ್ತೆಯ ಮೇಲೆ ಮೋಟಾರು ವಾಹನಗಳು ಚಲಿಸುವುದಕ್ಕಿಂತ, ಪಾದಚಾರಿಗಳು ಸುರಕ್ಷಿತವಾಗಿ ನಿರ್ಮಿಸಲಾದ ಪಾದಚಾರಿ ಮಾರ್ಗಗಳಲ್ಲಿ ನಡೆಯುವ ಹಕ್ಕಿಗೆ ಮೊದಲ ಆದ್ಯತೆ ಇರಬೇಕು. ವಾಹನಗಳ ಸವಲತ್ತಿಗಿಂತ ನಾಗರಿಕರ ನಡಿಗೆಯ ಹಕ್ಕು ಮಿಗಿಲಾದದ್ದು ಎಂದು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರು ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ಸಂವಿಧಾನವು ದೇಶಾದ್ಯಂತ ಮುಕ್ತವಾಗಿ ಸಂಚರಿಸುವ, ಗೌರವಯುತವಾಗಿ ಬದುಕುವ ಮತ್ತು ಜೀವಿಸುವ ಹಕ್ಕು ನೀಡುತ್ತದೆ. ನಡಿಗೆ ಎಂಬುದು ಮಾನವನ ಅತ್ಯಂತ ಸರಳ ಮತ್ತು ದೈನಂದಿನ ಪ್ರಕ್ರಿಯೆಯಾಗಿದ್ದು, ಇದು ನೇರವಾಗಿ ಜೀವಿಸುವ ಹಕ್ಕಿನೊಂದಿಗೆ ಬೆಸೆದುಕೊಂಡಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ನ್ಯಾಯಮೂರ್ತಿಗಳು ತಮ್ಮ ತೀರ್ಪಿನಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ನೆನಪಿಸಿಕೊಂಡಿದ್ದಾರೆ. ನಮ್ಮ ಇತಿಹಾಸದಲ್ಲಿ ನಡಿಗೆಗೆ ಆಳವಾದ ಸಾಮಾಜಿಕ ಮತ್ತು ರಾಜಕೀಯ ಮಹತ್ವವಿದೆ. ದಂಡಿಯಾತ್ರೆಯಂತಹ ನಡಿಗೆಗಳೇ ನಮ್ಮ ಸ್ವಾತಂತ್ರ್ಯದ ಆಶಯಗಳನ್ನು ಜಾಗೃತಗೊಳಿಸಿದವು. ನಡಿಗೆ ಕೇವಲ ಚಲನೆಯಲ್ಲ, ಅದು ಅಭಿವ್ಯಕ್ತಿ ಸ್ವಾತಂತ್ರ್ಯವೂ ಹೌದು ಎಂದು ಕೋರ್ಟ್ ಮಾರ್ಮಿಕವಾಗಿ ಹೇಳಿದೆ. ಹಾಗೆಯೇ ಈ ಹಕ್ಕನ್ನು ಹೇಗೆ ಕಾಯ್ದೆಯಾಗಿಸಬಹುದು ಎಂಬುದನ್ನು ಪರಿಶೀಲಿಸಲು ಭಾರತೀಯ ಕಾನೂನು ಆಯೋಗಕ್ಕೆ ತೀರ್ಪಿನ ಪ್ರತಿಯನ್ನು ರವಾನಿಸಲಾಗಿದೆ.

# ರಾಜ್ಯಸಭಾ ಚುನಾವಣೆ: ಜಾರ್ಖಂಡ್‌ನಲ್ಲಿ ಇಂಡಿಯಾ ಒಕ್ಕೂಟಕ್ಕೆ ಹಿನ್ನಡೆ ಆಗಿದ್ದೇಕೆ?

**ನವದೆಹಲಿ, ಜೂ.19:** ಜಾರ್ಖಂಡ್‌ನ ಎರಡು ರಾಜ್ಯಸಭಾ ಸ್ಥಾನಗಳಿಗೆ ಗುರುವಾರ ನಡೆದ ಚುನಾವಣೆಯಲ್ಲಿ ಜೆಎಂಎಂ ಅಭ್ಯರ್ಥಿ ಬೈದ್ಯನಾಥ್ ರಾಮ್ ಮತ್ತು ಎನ್‌ಡಿಎ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಪರಿಮಳ್ ನಾಥ್ವಾನಿ ಗೆಲುವು ಸಾಧಿಸಿದರೆ, ಇಂಡಿಯಾ ಒಕ್ಕೂಟಕ್ಕೆ ಹಿನ್ನಡೆಯಾಗಿದೆ. ಸದ್ಯ ಎನ್‌ಡಿಎ ಎನ್‌ಡಿಎ ಧನಬಲಕ್ಕೆ ಗೆಲುವಾಗಿದೆ ಎಂಬ ಆರೋಪಗಳು ಕೇಳಿಬಂದಿವೆ.

ಒಟ್ಟು 2 ಸ್ಥಾನಗಳಿಗೆ ನಡೆದ ಈ ಚುನಾವಣೆಯಲ್ಲಿ ಮೂವರು ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಗೆಲ್ಲಲು ತಲಾ 28 ಮತಗಳ ಅಗತ್ಯವಿತ್ತು. ಬೈದ್ಯನಾಥ್ ರಾಮ್ 31 ಮತಗಳನ್ನು ಪಡೆದು ಸುಲಭವಾಗಿ ಜಯಗಳಿಸಿದರು.

ಪರಿಮಳ್ ನಾಥ್ವಾನಿ 28 ಮತಗಳನ್ನು ಪಡೆದು ಗೆಲುವು ಸಾಧಿಸಿದರು. ಪ್ರಣವ್ ಝಾ ಕೇವಲ 19 ಮತಗಳನ್ನು ಪಡೆದು ಸೋಲನ್ನೊಪ್ಪಿಕೊಂಡರು. 3 ಮತಗಳನ್ನು ಚುನಾವಣಾ ಆಯೋಗ ಅಮಾನ್ಯಗೊಳಿಸಿದೆ.

ಜಂಟಿ ಸಂಖ್ಯಾಬಲದ ಆಧಾರದ ಮೇಲೆ ಎರಡೂ ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿತ್ತು. ಆದರೆ ಅಡ್ಡ ಮತದಾನ ನಡೆದು, ಎನ್‌ಡಿಎ ಬೆಂಬಲಿತ ಅಭ್ಯರ್ಥಿಗೆ ಗೆಲುವಾಗಿದೆ. ಈ ಸೋಲಿಗೆ ಎನ್ಡಿಎ ಹೂಡಿದ ರಾಜಕೀಯ ತಂತ್ರಗಾರಿಕೆ, ಧನಬಲದ ಬಳಕೆ ಮತ್ತು ಕುದುರೆ ವ್ಯಾಪಾರವೇ ಕಾರಣ ಎಂದು ಕಾಂಗ್ರೆಸ್ ಮತ್ತು ಜೆಎಂಎಂ ನಾಯಕರು ಗಂಭೀರ ಆರೋಪ ಮಾಡಿದ್ದಾರೆ. ಎನ್‌ಡಿಎ ಮೈತ್ರಿಕೂಟವು ತನ್ನದೇ ಪಕ್ಷದ ಅಭ್ಯರ್ಥಿಯನ್ನು ನಿಲ್ಲಿಸುವ ಬದಲು, ರಿಲಯನ್ಸ್ ಗ್ರೂಪ್‌ನ ಹಿರಿಯ ಅಧಿಕಾರಿ, ಉದ್ಯಮಿ ಪರಿಮಳ್ ನತ್ವಾಣಿ ಅವರನ್ನು ಪಕ್ಷೇತರ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದ್ದು, ಕೇವಲ ಹಣದ ಪ್ರಭಾವದಿಂದಲೇ ಈ ಫಲಿತಾಂಶ ಉಲ್ಟಾ ಆಗಿದೆ ಎಂದು ಜಾರ್ಖಂಡ್ ಕಾಂಗ್ರೆಸ್ ಉಸ್ತುವಾರಿ ಕೆ. ರಾಜು ಮತ್ತು ಸಚಿವೆ ದೀಪಿಕಾ ಪಾಂಡೆ ಸಿಂಗ್ ನೇರವಾಗಿ ಆರೋಪಿಸಿದ್ದಾರೆ.

# ಪ.ಬಂಗಾಳ: ಎಸ್‌ಐಆರ್ ವಿರುದ್ಧ ಧ್ವನಿ ಎತ್ತಿದವರ ಮೇಲೆ ಎನ್‌ಐಎ ದಾಳಿ

**ಕೋಲ್ಕತ್ತಾ, ಜೂ.19:** ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿನ ಲೋಪದೋಷಗಳು ಹಾಗೂ ಮತದಾರರ ಹೆಸರು ಕೈಬಿಟ್ಟಿರುವುದರ ವಿರುದ್ಧ ಧ್ವನಿ ಎತ್ತಿದ ಸಾಮಾಜಿಕ ಹೋರಾಟಗಾರರು, ಕಾರ್ಯಕರ್ತರ ಮನೆಗಳ ಮೇಲೆ ರಾಷ್ಟ್ರೀಯ ತನಿಖಾ ದಳ ದಾಳಿ ನಡೆಸಿದೆ.

ಪ್ರಮುಖವಾಗಿ ಫೆಮಿನಿಸ್ಟ್ಸ್ ಇನ್ ರೆಸಿಸ್ಟೆನ್ಸ್ ಸಂಘಟನೆಯ ಪ್ರಮುಖ ಸದಸ್ಯೆ ಮತ್ತು ಸಂಶೋಧಕಿ ಝಿಲಮ್ ರಾಯ್, ರೆವಲ್ಯೂಷನರಿ ಸ್ಟೂಡೆಂಟ್ಸ್ ಫ್ರಂಟ್ ಸಂಘಟನೆಯ ಪ್ರಧಾನ ಕಾರ್ಯದರ್ಶಿ ತಥಾಗತ ರಾಯ್ ಚೌಧರಿ ಹಾಗೂ ಶಿಕ್ಷಕ ಸುಕುಮಾರ್ ಕಯಾಲ್ ಅವರ ನಿವಾಸಗಳ ಮೇಲೆ ದಾಳಿ ನಡೆದಿದೆ. ಈ ಕಾರ್ಯಕರ್ತರು ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಪ್ರಕ್ರಿಯೆಯಡಿ ಮತದಾರರ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ ಎಂದು ಆರೋಪಿಸಿ ಕೋಲ್ಕತ್ತಾದ ಪಾರ್ಕ್ ಸರ್ಕಸ್ ಸೇರಿದಂತೆ ಹಲವು ಕಡೆಗಳಲ್ಲಿ ನಡೆದ ಪ್ರತಿಭಟನೆಗಳನ್ನು ಮುನ್ನಡೆಸಿದ್ದರು.

2022ರಲ್ಲಿ ಜಾರ್ಖಂಡ್‌ನ ರಾಂಚಿಯಲ್ಲಿ ದಾಖಲಾಗಿದ್ದ ಮಾವೋವಾದಿ ಚಳವಳಿಯ ಮರುಸಂಘಟನೆಗೆ ಸಂಬಂಧಿಸಿದ ತನಿಖೆಯ ಭಾಗವಾಗಿ ದಾಳಿ ನಡೆಸಲಾಗಿದೆ ಎಂದು ಎನ್‌ಐಎ ಅಧಿಕಾರಿಗಳು ಹೇಳಿಕೊಂಡಿದ್ದಾರೆ. ಹಾಗೆಯೇ ತಥಾಗತ ರಾಯ್ ಚೌಧರಿ ಅವರಿಗೆ ರಾಂಚಿಯಲ್ಲಿರುವ ಎನ್‌ಐಎ ಕಚೇರಿಗೆ ಹಾಜರಾಗುವಂತೆ ಸಮನ್ಸ್ ನೀಡಿದ್ದಾರೆ.

ಇನ್ನು ದಾಳಿಯ ವೇಳೆ ಯಾವುದೇ ನಿಷೇಧಿತ ವಸ್ತುಗಳು ಸಿಕ್ಕಿಲ್ಲ ಎಂದು ಸಾಮಾಜಿಕ ಕಾರ್ಯಕರ್ತರು ತಿಳಿಸಿದ್ದಾರೆ. ಬದಲಿಗೆ, ಸಾರ್ವಜನಿಕವಾಗಿ ಲಭ್ಯವಿರುವ ಕೆಲವು ನಿಯತಕಾಲಿಕೆಗಳು ಎಸ್‌ಐಆರ್ ಮತ್ತು ಎನ್‌ಆರ್‌ಸಿ ವಿರುದ್ಧದ ಕರಪತ್ರಗಳು ಹಾಗೂ ರಾಜಕೀಯ ಕೈದಿಗಳ ಸಹಾಯಕ್ಕಾಗಿ ಹಣ ಸಂಗ್ರಹಿಸಿದ ರಶೀದಿ ಪುಸ್ತಕಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣಾ ಸಂಸ್ಥೆ (ಎಪಿಡಿಆರ್) ಸೇರಿದಂತೆ ಹಲವು ಸಂಘಟನೆಗಳು ಈ ದಾಳಿಯನ್ನು ತೀವ್ರವಾಗಿ ಖಂಡಿಸಿವೆ. ಎಸ್‌ಐಆರ್ ಮತದಾರರ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ನಡೆಯುತ್ತಿರುವ ಅಕ್ರಮಗಳ ವಿರುದ್ಧ ಧ್ವನಿ ಎತ್ತುತ್ತಿರುವ ಜನಸಾಮಾನ್ಯರ ಮತ್ತು ಹೋರಾಟಗಾರರ ಧ್ವನಿಯನ್ನು ಅಡಗಿಸಲು ಕೇಂದ್ರ ಸಂಸ್ಥೆಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದೆ.

ಇನ್ನು 2022ರಲ್ಲಿ ರಾಂಚಿಯಲ್ಲಿ ದಾಖಲಾಗಿದ್ದ ಮಾವೋವಾದಿ ಮರುಸಂಘಟನೆ ಪ್ರಕರಣದಲ್ಲಿ ಈಗಾಗಲೇ ಪ್ರಮುಖ ನಾಯಕರ ಬಂಧನವಾಗಿದೆ. ಆದರೆ ಇಷ್ಟು ವರ್ಷಗಳ ನಂತರ ಬಂಗಾಳದ ಈ ತಳಮಟ್ಟದ ಹೋರಾಟಗಾರರನ್ನು ಅದಕ್ಕೆ ಲಿಂಕ್ ಮಾಡಿರುವುದು ಕೇವಲ ತನಿಖಾ ಸಂಸ್ಥೆಗಳ ಸಮರ್ಥನೆಗಾಗಿ ಮಾತ್ರ. ಯಾವುದೇ ಗಂಭೀರ ಆಧಾರಗಳಿಲ್ಲದಿದ್ದರೂ, ಕಠಿಣವಾದ ಯುಎಪಿಎ ಕಾಯ್ದೆಯಡಿಯಿರುವ ಹಳೆಯ ಪ್ರಕರಣವನ್ನು ಬಳಸಿಕೊಂಡರೆ ನ್ಯಾಯಾಲಯಗಳಿಂದ ತಕ್ಷಣಕ್ಕೆ ಪರಿಹಾರ ಸಿಗುವುದಿಲ್ಲ, ಹೋರಾಟಗಾರರನ್ನು ದೀರ್ಘಕಾಲ ಸಿಲುಕಿಸಬಹುದು ಎಂಬ ತಂತ್ರ ಇದರ ಹಿಂದಿದೆ ಎಂದು ಎಪಿಡಿಆರ್ ದೂರಿದೆ.

# ಬಂಡವಾಳ ಹೂಡಿಕೆ, ಉದ್ಯೋಗ ಸೃಷ್ಟಿಗೆ ಪಾಲುದಾರರ ಜತೆ ಚರ್ಚಿಸಿ ಕ್ರಮ: ಸಚಿವ ಪ್ರಿಯಾಂಕ್ ಖರ್ಗೆ



**ಬೆಂಗಳೂರು, ಜೂ.19:** ರಾಜ್ಯಕ್ಕೆ ಅಗತ್ಯವಾಗಿರುವ ಉದ್ಯೋಗ ಸೃಷ್ಟಿ ಹಾಗೂ ಬಂಡವಾಳ ಹೂಡಿಕೆಗೆ ಸರ್ಕಾರ ಆದ್ಯತೆ ನೀಡುತ್ತಿದ್ದು, ಸಂಬಂಧಪಟ್ಟ ಪಾಲುದಾರರ ಜೊತೆ ಚರ್ಚಿಸಿ ನೀತಿ ರೂಪಿಸಲಾಗುವುದು ಎಂದು ಗೃಹ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ಇ-ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಿಂದ ಹಿಡಿದು ಹವಾಮಾನ ಬದಲಾವಣೆ, ಮೂಲಸೌಕರ್ಯ ಅಭಿವೃದ್ಧಿವರೆಗೆ ವಿವಿಧ ವಿಷಯಗಳ ಕುರಿತು ಸಮಗ್ರ ಚರ್ಚೆ ನಡೆಸುವ ಉದ್ದೇಶದಿಂದ ಇಂಟಿಗ್ರೇಟೆಡ್ ವರ್ಕ್ ಸ್ಪೇಸಸ್ ಫೋರಂ ಸಿಸಿಐಆರ್ ಇ ಆಯೋಜಿಸಿದ್ದ ಬೆಂಗಳೂರು ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ ಕುರಿತ ಸಂವಾದದಲ್ಲಿ ಮಾತನಾಡಿದ ಸಚಿವರು, ಸರ್ಕಾರ ಸಮುದಾಯ, ನಾಗರಿಕರು, ಸಾಂಸ್ಥಿಕ ವಲಯ, ಕೈಗಾರಿಕಾ ಕ್ಷೇತ್ರದ ಜೊತೆ ಸರ್ಕಾರ ನಿರಂತರವಾಗಿ ಸಂವಾದ ನಡೆಸುತ್ತಿದೆ.

ಪ್ರತಿಯೊಬ್ಬರನ್ನೂ ಸರ್ಕಾರ ತನ್ನ ಪಾಲುದಾರರು ಎಂದು ಭಾವಿಸಿದೆ. ಎಲ್ಲಾ ಅಭಿಪ್ರಾಯಗಳನ್ನು ಆಲಿಸಿ ನಂತರ ನೀತಿ, ನಿರೂಪಣೆಗೆ ಆದ್ಯತೆ ನೀಡಲಾಗುವುದು. ರಾತ್ರಿ ಬೆಳಗಾಗುವುದರೊಳಗೆ ದೊಡ್ಡ ಮಟ್ಟದ ಮೂಲ ಸೌಕರ್ಯ ಕಲ್ಪಿಸಲು ಸಾಧ್ಯವಿಲ್ಲ. ಪ್ರತಿಯೊಂದಕ್ಕೂ ವಿನ್ಯಾಸ, ಪ್ರಮಾಣ ಮತ್ತು ಯೋಜನೆಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಬದಲಾವಣೆ ಮಾಡಬೇಕಾಗುತ್ತದೆ ಎಂದರು.

ಸಂಚಾರ ದಟ್ಟಣೆ ನಿವಾರಣೆಗೆ ದೈನಂದಿನ ಸಂಚಾರ ವ್ಯವಸ್ಥೆಯ ಮಾಹಿತಿಯನ್ನು ಸಮರ್ಪಕವಾಗಿ ಪಡೆದುಕೊಳ್ಳುವುದು ಅಗತ್ಯವಾಗಿದೆ. ಇಂತಹ ನಿಖರ ಮಾಹಿತಿಯಿಂದ ಎಲ್ಲಿ ಸಮಸ್ಯೆ ಇರುತ್ತದೆಯೋ ಅಂತಹ ಕಡೆಗಳಲ್ಲಿ ಸಾರ್ವಜನಿಕ ಸಂಚಾರಿ ವ್ಯವಸ್ಥೆಯನ್ನು ಮತ್ತಷ್ಟು ಚುರುಕುಗೊಳಿಸುವ ಹಾಗೂ ಇತರ ಪರಿಣಾಮಕಾರಿ ಕ್ರಮಗಳನ್ನು ಜಾರಿಗೊಳಿಸಲು ಸಾಧ್ಯವಾಗಲಿದೆ.

ಎಲೆಕ್ಟ್ರಾನಿಕ್ ಸಿಟಿ, ಮಾನ್ಯತಾ ಟೆಕ್‌ಪಾರ್ಕ್ ಸೇರಿ ಪ್ರಮುಖ ಐಟಿ ವಲಯಗಳಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಒತ್ತು ನೀಡಲಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಇತರ ನಾಗರಿಕ ಸಂಘಟನೆಗಳ ಜೊತೆಗೂಡಿ ಸಮಸ್ಯೆ ಬಗೆಹರಿಸಲಾಗುವುದು. ಬೆಂಗಳೂರಿನಲ್ಲಿ ಮೂಲ ಸೌಕರ್ಯ ವೃದ್ಧಿಗೆ ಅತ್ಯುತ್ತಮ ನಗರ ಯೋಜನಾ ಚಿಂತಕರು, ನಾಗರಿಕ ಸಂಘಟನೆಗಳೊಂದಿಗೆ ಪರಸ್ಪರ ಸಮಾಲೋಚನೆ ಮಾಡುತ್ತಿದ್ದು, ಇಂತಹ ಸಂವಾದದಿಂದ ಎಲ್ಲರಿಗೂ ಅನುಕೂಲವಾಗಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಡಾ. ಮಹೇಶ್ವರ ರಾವ್ ಮಾತನಾಡಿ, ಬೆಂಗಳೂರು ನಗರ ತ್ವರಿತವಾಗಿ ಬೆಳವಣಿಗೆಯಾಗುತ್ತಿದ್ದು, ನಗರದ ಜನಸಂಖ್ಯೆಗೆ ಅನುಗುಣವಾಗಿ ಮೂಲ ಸೌಕರ್ಯ ಮೇಲ್ದರ್ಜೆಗೇರಿಸಲಾಗುತ್ತಿದೆ. ಹೆಬ್ಬಾಳ, ಕೆ.ಆರ್.ಪುರಂ, ಗೊರಗುಂಟೆಪಾಳ್ಯ ಮತ್ತಿತರ ಭಾಗಗಳಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಒತ್ತು ನೀಡಲಾಗಿದೆ. ಮಳೆಗಾಲ ಆರಂಭವಾಗಿದ್ದು, ಮಳೆ ನೀರು ಸುಗಮವಾಗಿ ಹರಿದುಹೋಗುವಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದರು.

ಸಿಸಿಐಆರ್‌ಇ ಸಂಸ್ಥಾಪಕ ಜಯರಾಂ ಮಾತನಾಡಿ, ಉದ್ಯಮದ ಮುಂಚೂಣಿ ನಾಯಕರು ಒಂದೇ ವೇದಿಕೆಯಲ್ಲಿ ಸೇರಿ ಭವಿಷ್ಯದ ಕಾರ್ಯಯೋಜನೆಗಳು, ನಗರ ಮೂಲಸೌಕರ್ಯಕ್ಕೆ ಸಂಬಂಧಿಸಿದ ಮಹತ್ವದ ವಿಚಾರಗಳ ಕುರಿತು ಚರ್ಚಿಸಿ, ಅನುಷ್ಠಾನಗೊಳಿಸಬಹುದಾದ ಕಾರ್ಯತಂತ್ರಗಳನ್ನು ರೂಪಿಸುವ ಕುರಿತು ಚರ್ಚಿಸಿದ್ದೇವೆ. ಇದು ಚರ್ಚೆಗಷ್ಟೇ ಸೀಮಿತವಾಗದೆ, ಕಾರ್ಯರೂಪಕ್ಕೆ ತರಲು ಒತ್ತು ನೀಡುತ್ತಿದ್ದೇವೆ.

ಆಡಳಿತದಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಕೆ, ತಂತ್ರಜ್ಞಾನ ಆಧಾರಿತ ಮಾದರಿಗಳು, ನಗರ ಸಂಚಾರ ಸಮಸ್ಯೆಗಳು, ಸ್ಮಾರ್ಟ್ ಕಟ್ಟಡಗಳ ಆರ್ಥಿಕ ಮಾದರಿಗಳು ಕುರಿತು ಚರ್ಚಿಸಲಾಗಿದೆ ಎಂದರು.



12ನೇ ಅಂತರರಾಷ್ಟ್ರೀಯ ಯೋಗದಿನದ ಅಂಗವಾಗಿ ಚಿಕ್ಕಮಗಳೂರಿನಲ್ಲಿ ಶುಕ್ರವಾರ ವಿದ್ಯಾರ್ಥಿಗಳು ಮತ್ತು ಯೋಗ ಉತ್ಸಾಹಿಗಳು ಯೋಗ ನಡಿಗೆಯಲ್ಲಿ ಭಾಗವಹಿಸಿದರು.

### ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಭಾವಂತರಿಗೆ ಮಾತ್ರ ಯಶಸ್ಸು

# ಪ್ರಾಥಮಿಕ ಹಂತದಲ್ಲಿ ಗುಣಾತ್ಮಕ ಶಿಕ್ಷಣ ಮಹತ್ವ: ಈಶ್ವರ ಖಂಡ್ರೆ ಅಭಿಮತ



**ಬೆಂಗಳೂರು, ಜೂ.19:** ವಿದ್ಯಾರ್ಥಿಗಳ ಭವ್ಯ ಭವಿಷ್ಯಕ್ಕೆ ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಹಂತದ ಗುಣಾತ್ಮಕ ಶಿಕ್ಷಣ ಅತ್ಯಂತ ಮಹತ್ವದ್ದಾಗುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಗೋರಿನಬೆಲೆಯ ಗೋಲ್ಡನ್ ರೇ ಇಂಟರ್ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಅಕ್ಷರಾಭ್ಯಾಸ, ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಪರಿಸರ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬುನಾದಿ ಗಟ್ಟಿಯಾಗಿದ್ದರೆ ಭವ್ಯಸೌಧ ನಿರ್ಮಿಸಲು ಸಾಧ್ಯ. ಅದೇ ರೀತಿ ಮಕ್ಕಳಿಗೆ ಆರಂಭಿಕ ಹಂತದಲ್ಲೇ ಕಲಿಕೆಯ ಆಸಕ್ತಿ ಮೂಡಿಸಿದರೆ ಅವರು ಸಾಧಕರಾಗುತ್ತಾರೆ ಎಂದರು.

ಮಕ್ಕಳು ಕೇವಲ ವಿದ್ಯಾವಂತರಾದರಷ್ಟೇ ಸಾಲದು, ಬುದ್ಧಿವಂತರಾಗಬೇಕು, ಜ್ಞಾನವಂತರಾಗಬೇಕು. ಜ್ಞಾನಕ್ಕೆ ಮಿಗಿಲಾದ್ದು ಯಾವುದೂ ಇಲ್ಲ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಭಾವಂತರು ಮಾತ್ರ ಯಶಸ್ಸು ಸಾಧಿಸುತ್ತಾರೆ. ಹೀಗಾಗಿ ಮಕ್ಕಳು ಬಾಹ್ಯ ಪ್ರಭಾವಕ್ಕೆ ಒಳಗಾಗದೆ ಕಲಿಕೆಗೆ ಒತ್ತು ನೀಡಬೇಕು. ಮಕ್ಕಳಿಗೆ ಲೌಕಿಕ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣವನ್ನೂ ಕಲಿಸಬೇಕು. ರಾಷ್ಟ್ರಕವಿ ಕುವೆಂಪು ಅವರು ಎಲ್ಲ ಮಕ್ಕಳೂ ವಿಶ್ವ ಮಾನವರಾಗಿ ಹುಟ್ಟುತ್ತಾರೆ, ಬೆಳೆಯುವಾಗ ಅಲ್ಪ ಮಾನವರಾಗುತ್ತಾರೆ ಎಂದು ಹೇಳಿದ್ದಾರೆ. ನಾವು ಮೇಲು, ಕೀಳುಭಾವನೆ ಬಿಟ್ಟು ವಿಶ್ವ ಮಾನವರಾಗಿಯೇ ಉಳಿಯಬೇಕು, ಈ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಮೇಲಿದೆ ಎಂದರು.

ಸಂಪತ್ತು ಹೋದರೆ ಮತ್ತೆ ಗಳಿಸಬಹುದು, ಆರೋಗ್ಯ ಹೋದರೆ ಸ್ವಲ್ಪ ನಷ್ಟ ಆಗುತ್ತದೆ. ಆದರೆ ಚಾರಿತ್ರ್ಯ ಹೋದರೆ ಸರ್ವಸ್ವವೂ ಹೋದಂತೆ ಎಂದ ಈಶ್ವರ ಖಂಡ್ರೆ, ಮಕ್ಕಳನ್ನು ಚಾರಿತ್ರ್ಯವಂತರನ್ನಾಗಿ ಬೆಳೆಸುವ ಹೊಣೆ ಪಾಲಕರು ಮತ್ತು ಶಿಕ್ಷಕರ ಮೇಲಿದೆ ಎಂದು ಪ್ರತಿಪಾದಿಸಿದರು.

ಇಂದು ವಿದ್ಯಾರ್ಥಿಗಳು ಮೊಬೈಲ್ ಫೋನ್‌ಗಳಲ್ಲಿ ಕಳೆದು ಹೋಗುತ್ತಿದ್ದಾರೆ, ದುಶ್ಚಟದುರ್ಗುಣಗಳ ದಾಸರಾಗುತ್ತಿದ್ದಾರೆ. ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದಾರೆ. ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವ ಮತ್ತು ಸದ್ಗುಣಿಗಳನ್ನಾಗಿ ಮಾಡುವ ಕಾರ್ಯವನ್ನು ತಂದೆ–ತಾಯಿ ಹಾಗೂ ಶಿಕ್ಷಕರು ಮಾಡಬೇಕು ಎಂದರು.

ಇಂದು ನಾವು ಜಾಗತಿಕ ತಾಪಮಾನ, ಹವಾಮಾನ ಬದಲಾವಣೆಯ ಪರಿಣಾಮ ಎದುರಿಸುತ್ತಿದ್ದು, ನಮ್ಮ ಸುತ್ತಲ ಪರಿಸರ ಪ್ರಕೃತಿಯನ್ನು ಸಂರಕ್ಷಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಅದು ನಮ್ಮ ಹೊಣೆ ಎಂದು ಈಶ್ವರ ಖಂಡ್ರೆ ಹೇಳಿದರು.

ಭಾರತದಲ್ಲಿ ಅದ್ಭುತ ಮಾನವ ಸಂಪನ್ಮೂಲವಿದೆ. ಭಾರತೀಯರ ಬುದ್ಧಿಗೆ ಬಂಗಾರದ ಬೆಲೆ ಇದೆ. ಇಂದು ಮೆಷಿನ್ ಲರ್ನಿಂಗ್, ಕೃತಕ ಬುದ್ಧಿಮತ್ತೆಯಂತಹ ಆಧುನಿಕ ತಂತ್ರಜ್ಞಾನ ಅಭಿವೃದ್ಧಿ ಯಾಗುತ್ತಿದ್ದು, ಇಂದಿನ ಯುಗಮಾನದ ಅಗತ್ಯಕ್ಕೆ ಅನುಗುಣವಾಗಿ ವಿದ್ಯಾರ್ಥಿ ಗಳು ಹೊಸ ಕಲಿಕೆಯ ಕಡೆಗೆ ಗಮನ ಕೊಡಬೇಕು. ಮಕ್ಕಳ ಆರೋಗ್ಯದ ಕಡೆಗೂ ಪಾಲಕರು ಗಮನ ಹರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಶಿವಸಿದ್ದೇಶ್ವರ ಮಹಾಸ್ವಾಮೀಜಿ, ಡಾ.ಎಸ್. ಪರಮೇಶ್, ಎಂ.ಎಸ್. ಮೃತ್ಯುಂಜಯ, ನಟರಾಜ್ ಸಾಗರನಹಳ್ಳಿ, ಸಚ್ಚಿದಾನಂದ ಮೂರ್ತಿ ಮೊದಲಾದವರು ಪಾಲ್ಗೊಂಡಿದ್ದರು.

# ಬಿಜೆಪಿ ನಾಯಕರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಪ್ರಕರಣ ವಜಾ




**ಬೆಂಗಳೂರು, ಜೂ.19:** ಆಕ್ಷೇಪಾರ್ಹ ಹೇಳಿಕೆಗಳನ್ನು ಒಳಗೊಂಡ ಬಿಜೆಪಿ ನಾಯಕರ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದ ಮೇಲೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿದೆ.

ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ರದ್ದತಿ ಕೋರಿ ಕೆಪಿಸಿಸಿ ಅಧ್ಯಕ್ಷ ಡಿ ಕೆ ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಪುರಸ್ಕರಿಸಿದೆ.

ಶಿವಕುಮಾರ್ ಅವರನ್ನು ಪ್ರತಿನಿಧಿಸಿದ್ದ ವಕೀಲ ಎಚ್ ವಿ ಪ್ರವೀಣ್ ಗೌಡ ಅವರು ಶಿವಕುಮಾರ್ ಅವರ ಸಾಮಾಜಿಕ ಜಾಲತಾಣ ಖಾತೆಯ ಮೂಲಕ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಾಕಲಾಗಿದೆ ಎಂಬ ಏಕೈಕ ಕಾರಣಕ್ಕೆ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಕಾಂಗ್ರೆಸ್ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥರು ಪೋಸ್ಟ್ ಅಪ್‌ಲೋಡ್ ಮಾಡಿದ್ದಾರೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರು ಎಂಬ ಕಾರಣಕ್ಕೆ ಅವರನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರು.

**ಪ್ರಕರಣದ ಹಿನ್ನೆಲೆ:** ಮೂರು ದಶಕಗಳ ಹಿಂದೆ ರಾಮ ಜನ್ಮಭೂಮಿ ವಿಚಾರವಾಗಿ ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಶ್ರೀಕಾಂತ್ ಪೂಜಾರಿಯನ್ನು ಅಲ್ಲಿನ ಪೊಲೀಸರು ಬಂಧಿಸಿದ್ದರು.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ನಡೆ ಖಂಡಿಸಿ ಬಿಜೆಪಿಯು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿತ್ತು. ಇದನ್ನು ಟೀಕಿಸುವ ಉದ್ದೇಶದಿಂದ ಕಾಂಗ್ರೆಸ್ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ ವೈ ವಿಜಯೇಂದ್ರ ಅವರ ಫೋಟೊ ಬಳಸಿ 'ನಾನು ಆರ್‌ಟಿಜಿಎಸ್ ಮೂಲಕ ಲಂಚ ಪಡೆದಿದ್ದೇನೆ. 40,000 ಕೋಟಿ ಅಕ್ರಮದಲ್ಲಿ ಪಾಲುದಾರ ನನ್ನನ್ನು ಬಂಧಿಸಿ', ಶಾಸಕ ವಿ. ಸುನೀಲ್ ಕುಮಾರ್ ಫೋಟೊ ಬಳಸಿ 'ನಾನು ಪರಶುರಾಮ ಮೂರ್ತಿ ಕಂಚನ್ನು ಕದ್ದಿದ್ದೇನೆ; ಸಿಮೆಂಟ್ ಕದ್ದಿದ್ದೇನೆ ನನ್ನನ್ನು ಬಂಧಿಸಿ' ಎಂಬ ಒಕ್ಕಣೆಯ ಚಿತ್ರಗಳನ್ನು ಕೆಪಿಸಿಸಿ ಅಧಿಕೃತ ಫೇಸ್‌ಬುಕ್ ಪೇಜ್‌ನಲ್ಲಿ ಪೋಸ್ಟ್ ಮಾಡಲಾಗಿತ್ತು.

ಈ ಹಿನ್ನೆಲೆಯಲ್ಲಿ ಅಂದಿನ ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿಕೆ ಶಿವಕುಮಾರ್ ಹಾಗೂ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಬಿ ಆರ್ ನಾಯ್ಡು ವಿರುದ್ಧ ಬಿಜೆಪಿಯ ಕಾನೂನು ಘಟಕದ ಸಂಚಾಲಕ ಯೋಗೇಂದ್ರ ಹೊಡಘಟ್ಟ ನೀಡಿದ್ದ ಖಾಸಗಿ ದೂರು ಆಧರಿಸಿ ಹೈಗ್ರೌಂಡ್ಸ್ ಠಾಣೆಯ ಪೊಲೀಸರು ಪ್ರಕರಣ ಪ್ರಕರಣ ದಾಖಲಿಸಿದ್ದರು.

# ನಗರಾಭಿವೃದ್ಧಿ ಪ್ರಾಧಿಕಾರಗಳು ಪ್ರತಿತಿಂಗಳು ಸಭೆ ನಡೆಸುವುದು ಕಡ್ಡಾಯ: ಯತೀಂದ್ರ ಸಿದ್ದರಾಮಯ್ಯ



**ಬೆಂಗಳೂರು, ಜೂ.19:** ನಗರಾಭಿವೃದ್ಧಿ ಪ್ರಾಧಿಕಾರಗಳು ಕಾಲಕಾಲಕ್ಕೆ ಪ್ರಾಧಿಕಾರದ ಸಭೆ ನಡೆಸದಿರುವ ಹಿನ್ನೆಲೆಯಲ್ಲಿ ನಾಗರಿಕ ರಿಗೆ ಸರಿಯಾಗಿ ಸೌಲಭ್ಯ ಕೊಡಲು ಸಾಧ್ಯವಾಗುತ್ತಿಲ್ಲ. ಪ್ರತಿ ತಿಂಗಳು ಪ್ರಾಧಿಕಾರದ ಸಭೆ ನಡೆಸಬೇಕು ಎಂದು ನಗರಾಭಿವೃದ್ಧಿ ಸಚಿವರಾದ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದ 34 ಅಭಿವೃದ್ಧಿ ಪ್ರಾಧಿಕಾರಗಳ ಪ್ರಗತಿ ಪರಿಶೀಲನೆ ನಡೆಸಿದ ಅವರು, ಕೆಲವು ಪ್ರಾಧಿಕಾರಗಳು ವರ್ಷಕ್ಕೆ 2 ಅಥವಾ 3 ಸಭೆಗಳನ್ನು ಮಾತ್ರ ಮಾಡಿವೆ. ಇದರಿಂದ ಪ್ರಗತಿ ಸಾಧ್ಯವಿಲ್ಲ. ಸಭೆ ನಡೆಸದಿರುವುದನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೇನೆ. ವರ್ಷಕ್ಕೆ ಕನಿಷ್ಠ 8 ಸಭೆಗಳನ್ನಾದರೂ ಮಾಡಬೇಕು ಎಂದು ಅವರು ಸೂಚಿಸಿದರು.

ಜನಸಂಖ್ಯೆ ಬೆಳೆಯುತ್ತಿದೆ. ಅದಕ್ಕೆ ಅನುಗುಣವಾಗಿ ಸೌಲಭ್ಯಗಳನ್ನು ಪ್ರಾಧಿಕಾರಗಳು ಕೊಡಬೇಕು. ಲಭ್ಯವಿರುವ ಜಾಗಗಳನ್ನು ತೆಗೆದುಕೊಂಡು ಅಭಿವೃದ್ಧಿ ಪಡಿಸಬೇಕು. ವಸತಿ ಇಲಾಖೆಯಿಂದ ಬೇಡಿಕೆಗೆ ತಕ್ಕಷ್ಟು ಮನೆಗಳನ್ನು ನೀಡಲಾಗುತ್ತಿಲ್ಲ. ವಸತಿಗಳಿಗೆ ಬೇಡಿಕೆ ಇದೆ. ನಮ್ಮ ಪ್ರಾಧಿಕಾರಗಳಿಂದ ಖಾಸಗಿ ಅಪಾರ್ಟ್‌ಮೆಂಟ್‌ಗಳ ರೀತಿಯಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿ ಮನೆಗಳನ್ನು ಹಂಚುವ ಬಗ್ಗೆ ಪರಿಶೀಲಿಸಲು ಸಚಿವರು ತಿಳಿಸಿದರು.

ಹಳೆಯ ಮಾಸ್ಟರ್ ಪ್ಲಾನ್ ಅನ್ನು ಪರಿಷ್ಕರಿಸಿ ಎಲ್ಲಾ ಪ್ರಾಧಿಕಾರಗಳು ಜಿಐಎಸ್ ಆಧರಿಸಿ ಮಾಸ್ಟರ್ ಪ್ಲಾನ್ ತಯಾರಿಸಬೇಕು. ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಮಾಸ್ಟರ್ ಪ್ಲಾನ್ ಮಾಡಲಾಗಿದೆ. 2024ರಿಂದ ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಬಂದಿದೆ. ಈ ಪ್ರಾಧಿಕಾರದ ವ್ಯಾಪ್ತಿಯನ್ನು ಬಿಟ್ಟು ಮಾಸ್ಟರ್ ಪ್ಲಾನ್ ಮಾಡಬೇಕಿದೆ.ಎಲ್ಲಾ ಪ್ರಾಧಿಕಾರಗಳು ಪಾರದರ್ಶಕವಾಗಿ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಬೇಕು. ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆ ನೀಡುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದರು.

ಪ್ರಾಧಿಕಾರಗಳು ಕೆರೆಗಳ ಬ್ಯೂಟಿಫಿಕೇಷನ್‌ಗೆ ಒತ್ತು ನೀಡುತ್ತಿವೆ. ನೀರು ಸಂಗ್ರಹದ ಬಗ್ಗೆ ಗಮನ ಹರಿಸುತ್ತಿಲ್ಲ. ನೀರಿಲ್ಲದಿದ್ದರೆ ಕೆರೆಗಳು ಉಪಯೋಗವಿಲ್ಲ. ಕೊಳಚೆ ನೀರು ಹರಿಯದಂತೆ ಕ್ರಮವಹಿಸಬೇಕು. ಡಿ–ಸಿಲ್ಟಿಂಗ್, ಕುಡಿಯುವ ನೀರಿಗೆ ಕೆರೆ ಅಭಿವೃದ್ಧಿಪಡಿಸಲಾಗುತ್ತಿದೆ. ಕೆರೆಗಳ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಿರುವ ಮಾರ್ಗಸೂಚಿಗಳನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದು ಸಚಿವರು ತಿಳಿಸಿದರು.

### ಸಾಮಾಜಿಕ ಭದ್ರತಾ ಯೋಜನೆಗಳ ನೋಂದಣಿ ಗುರಿ ಸಾಧಿಸಲು ಬ್ಯಾಂಕ್‌ಗಳಿಗೆ ಸೂಚನೆ

# ಎಲ್‌ಆರ್‌ಸಿ, ಡಿಸಿಸಿ ಸಭೆಯಲ್ಲಿ ಅಧಿಕಾರಿಗಳಿಗೆ ಸಂಸದ ಪಿ.ಸಿ. ಮೋಹನ್ ತರಾಟೆ



**ಬೆಂಗಳೂರು, ಜೂ.19:** ಸಾಮಾಜಿಕ ಭದ್ರತಾ ಯೋಜನೆಗಳ ನೋಂದಣಿಯಲ್ಲಿ ಗುರಿ ಸಾಧನೆ ಮಾಡಲು ವಿಫಲವಾದ ಬ್ಯಾಂಕ್‌ಗಳ ವಿರುದ್ಧ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಸಂಸದ ಪಿ.ಸಿ. ಮೋಹನ್ ಅಸಮಾಧಾನ ವ್ಯಕ್ತಪಡಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬೆಂಗಳೂರು ನಗರ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಡಿಎಲ್‌ಆರ್‌ಸಿ ಮತ್ತು ಡಿಸಿಸಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಂಕಿ ಅಂಶಗಳಿಲ್ಲದೆ ಬಂದ ಬ್ಯಾಂಕ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಗೆ ಸಂಬಂಧಿಸಿದಂತೆ ಯಾವ ಬ್ಯಾಂಕ್ ಅಧಿಕಾರಿಗಳ ಬಳಿಯು ಸರಿಯಾದ ಮಾಹಿತಿ ಲಭ್ಯವಿಲ್ಲ. ಮಾಹಿತಿ ಇಲ್ಲದೆ ಸಭೆಗೆ ಹಾಜರಾಗಿದ್ದೀರಿ. ತಮ್ಮ ಬಳಿ ಮಾಹಿತಿ ಇಲ್ಲದಿದ್ದರೆ ಸಭೆಯನ್ನು ಮಾಡುವುದರಲ್ಲಿ ಅರ್ಥವಿಲ್ಲ. ಎಂದರು.

ಬ್ಯಾಂಕ್ ಅಧಿಕಾರಿಗಳೇ ಸಭೆಗೆ ಖುದ್ದಾಗಿ ಹಾಜರಾಗಬೇಕು ಯಾವುದೇ ಕಾರಣಕ್ಕೂ ತಮ್ಮ ಸಿಬ್ಬಂದಿಗಳನ್ನು ನಿಯೋಜಿಸುವಂತಿಲ್ಲ ಎಂದರು.ಪ್ರಧಾನಮಂತ್ರಿ ವಿಶ್ವ ಕರ್ಮ ಯೋಜನೆಗೆ ಸಂಬಂಧಿಸಿದಂತೆ ಬ್ಯಾಂಕ್ ಆಫ್ ಇಂಡಿಯಾ ಅಧಿಕಾರಿ ನೀಡಿದ ಮಾಹಿತಿಗೆ ಅತೃಪ್ತಿ ವ್ಯಕ್ತಪಡಿಸಿದ ಅವರು ಮುಂದಿನ ಸಭೆಯ ವೇಳೆ ಇನ್ನಷ್ಟು ಪ್ರಗತಿ ಸಾಧಿಸದೇ ಇದ್ದರೆ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಯತೀಶ್. ಆರ್ ಅವರು ಮಾತನಾಡಿ ಗೃಹನಿರ್ಮಾಣಕ್ಕೆ ಸಮರ್ಪಕವಾಗಿ ಸಾಲ ನೀಡುವಂತೆ ಬ್ಯಾಂಕ್‌ಗಳಿಗೆ ಸೂಚಿಸಿದರು.ಸರ್ಕಾರಿ ಸಾಲ ಸೌಲಭ್ಯ ಯೋಜನೆಗಳಿಗೆ ಬಂದ ಅರ್ಜಿಗಳನ್ನು ಸುಕಸುಮನೆ ತಿರಸ್ಕರ ಮಾಡಬೇಡಿ. ಅದರಲ್ಲೂ ವಿದ್ಯಾರ್ಥಿ ವೇತನ ಸಂಬಂಧಿಸಿದಂತೆ ಬಂದ ಸಂದರ್ಭದಲ್ಲಿ ನಿಯಮನುಸಾರ ಪರಿಶೀಲಿಸಿ ಸಾಲ ನೀಡಬೇಕು ಎಂದರು.

ಸ್ಥಳೀಯ ಉದ್ಯಮಿಗಳು ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಆರ್ಥಿಕ ನೆರವು ನೀಡುವಂತೆ ತಿಳಿಸಿದರು. ಇದೇ ಸಂದರ್ಭದಲ್ಲಿ 2025– 26ನೇ ಸಾಲಿನ ವಿವಿಧ ಬ್ಯಾಂಕ್‌ಗಳ ಸಾಲ ಯೋಜನೆಗಳ ಕುರಿತ . ಪುಸ್ತಕ ಬಿಡುಗಡೆ ಮಾಡಿದರು.ಸಭೆಯಲ್ಲಿ ಆರ್. ಬಿ. ಐ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಪ್ರಭಾಕರ್, ನಬಾರ್ಡ್‌ನ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರಾದ ಉದಯನ್, ಲೀಡ್ ಬ್ಯಾಂಕ್ ವ್ಯವಸ್ಥಾಪಕರಾದ ವಿಠ್ಠಲ್, ಜಿಲ್ಲಾ ಪಂಚಾಯತ್ ನ ಯೋಜನಾ ನಿರ್ದೇಶಕರಾದ ಮೋಹನ್ ಹಾಗೂ ವಿವಿಧ ಬ್ಯಾಂಕ್ ನ ಅಧಿಕಾರಿಗಳು ಉಪಸ್ಥಿತರಿದ್ದರು.

### ನಿಗದಿತ ಅವಧಿಯೊಳಗೆ ಮೆಟ್ರೋ ಕಾಮಗಾರಿ ಪೂರ್ಣಗೊಳಿಸುವುದು ಅನಿವಾರ್ಯ

# ಬಿಎಂಆರ್‌ಸಿಎಲ್ ಅಧಿಕಾರಿಗಳ ಜತೆಗಿನ ಸಭೆಯಲ್ಲಿ ಸಚಿವ ಕೃಷ್ಣ ಬೈರೇಗೌಡ

**ಬೆಂಗಳೂರು, ಜೂ.19:** ನಗರಾಭಿವೃದ್ಧಿ ಮತ್ತು ಮೆಟ್ರೋ ಕಾಮಗಾರಿಗಳಿಗೆ ವೇಗ ನೀಡುವ ನಿಟ್ಟಿನಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ನಮ್ಮ ಮೆಟ್ರೋ ಯೋಜನೆಗಳ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಇಂದು ಮಹತ್ವದ ಸಭೆ ನಡೆಸಿದ್ದಾರೆ.



ಶಾಂತಿನಗರದ ಬಿಎಂಆರ್‌ಸಿಎಲ್, ಬಿಎಂಟಿಸಿ ಕಾಂಪ್ಲೆಕ್ಸ್‌ನಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ, ರಾಜಧಾನಿಯ ಸಂಚಾರ ದಟ್ಟಣೆಗೆ ಪ್ರಮುಖ ಪರಿಹಾರವಾಗಿರುವ ನಮ್ಮ ಮೆಟ್ರೋ ರೈಲು ಯೋಜನೆಯ ಪ್ರಸ್ತುತ ಹಂತಗಳು, ವಿಸ್ತರಿತ ಮಾರ್ಗಗಳ ಪ್ರಗತಿ ಹಾಗೂ ಮುಂದಿನ ಯೋಜನೆಗಳ ಅನುಷ್ಠಾನದ ಕುರಿತು ಚರ್ಚೆ ನಡೆಸಿದ್ದಾರೆ.

ಬೆಂಗಳೂರು ನಗರದ ಜನಸಂಖ್ಯೆ ಮತ್ತು ವಾಹನ ದಟ್ಟಣೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ಮೆಟ್ರೋ ಕಾಮಗಾರಿಗಳನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸುವುದು ಅತ್ಯಂತ ಅನಿವಾರ್ಯವಾಗಿದೆ ಎಂದಿದ್ದಾರೆ.

ಸಭೆಯಲ್ಲಿ ಮಾತನಾಡಿದ ಸಚಿವ ಕೃಷ್ಣ ಬೈರೇಗೌಡ, ಸಾರ್ವಜನಿಕರಿಗೆ ತೊಂದರೆಯಾಗದಂತೆ ಮತ್ತು ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಕಾಮಗಾರಿಗಳಿಗೆ ಮತ್ತಷ್ಟು ವೇಗ ನೀಡಬೇಕು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ. ಗಡುವು ಮೀರಿದ ಯೋಜನೆಗಳ ಪ್ರಗತಿ ಹಾಗೂ ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ ಎದುರಾಗುತ್ತಿರುವ ಸವಾಲುಗಳನ್ನು ಶೀಘ್ರವಾಗಿ ಬಗೆಹರಿಸಿಕೊಳ್ಳುವಂತೆ ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

### ಎಲ್ಲರೂ ಆತ್ಮಸಾಕ್ಷಿಯಂತೆ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ

# ಅಡ್ಡಮತದಾನದ ಬಗ್ಗೆ ಎಚ್‌ಡಿಕೆ ಹೇಳಿಕೆಗೆ ಶಾಸಕ ಎಚ್.ಸಿ.ಬಾಲಕೃಷ್ಣ ತಿರುಗೇಟು



**ಬೆಂಗಳೂರು, ಜೂ.19:** ಜೆಡಿಎಸ್ ನಾಯಕ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿಗೆ 18 ಶಾಸಕರನ್ನು ವಿಶ್ವಾಸದಲ್ಲಿ ಇಟ್ಟುಕೊಳ್ಳೋಕೆ ಆಗಲಿಲ್ಲ ಇನ್ನೇನು ಮಾಡ್ತಾರೆ ಅವರು ಎಂದು ಮಾಗಡಿ ಕ್ಷೇತ್ರದ ಶಾಸಕ ಎಚ್ ಸಿ ಬಾಲಕೃಷ್ಣ ಟಾಂಗ್ ಕೊಟ್ಟಿದ್ದಾರೆ.

ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ನಲ್ಲಿ ಅಡ್ಡ ಮತದಾನದಿಂದ ಅಭ್ಯರ್ಥಿಗೆ ಸೋಲಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕುಮಾರಸ್ವಾಮಿ ಕೇಳಿದಂತೆ ಎಲ್ಲರೂ ಆತ್ಮಸಾಕ್ಷಿಯಿಂದ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ಆತ್ಮಸಾಕ್ಷಿಗೆ ಮತ ಕೇಳಿದ ಮೇಲೆ ಈಗ ಕುದುರೆ ವ್ಯಾಪಾರದ ಬಗ್ಗೆ ಮಾತನಾಡಬಾರದು. ಕುದುರೆ ವ್ಯಾಪಾರದ ಬಗ್ಗೆ ಮಾತನಾಡಿದರೆ ಅವರ ಶಾಸಕರಿಗೆ ಅವರೇ ಅವಮಾನ ಮಾಡಿದಂತೆ ಆಗುತ್ತದೆ. ಇರುವ 18 ಶಾಸಕರನ್ನು ವಿಶ್ವಾಸದಲ್ಲಿ ಇಟ್ಕೊಳ್ಳೊಕೆ ಆಗ್ಲಿಲ್ಲ ಇನ್ನೇನೂ ಮಾಡ್ತೀರಾ ಎಂದು ವ್ಯಂಗ್ಯವಾಡಿದರು. ಇಲ್ಲಿ ಯಾರದ್ದು ತಪ್ಪಿಲ್ಲ. ಕುಮಾರಸ್ವಾಮಿ ಕೇಳಿದಂತೆ ಎಲ್ಲರೂ ಆತ್ಮಸಾಕ್ಷಿಯಿಂದ ಮತ ಹಾಕಿದ್ದಾರೆ. ಶಾಸಕರು ಅವರ ಆತ್ಮಸಾಕ್ಷಿಗೆ ಅನ್ನಿಸಿದಂತೆ ಮತ ಹಾಕಿದ್ದಾರೆ. ಅದನ್ನು ಗೌರವಿಸಬೇಕು. ನಾವು ನಮ್ಮ ಶಾಸಕರನ್ನು ಭದ್ರವಾಗಿ ಇಟ್ಟುಕೊಳ್ಳುವ ಜವಾಬ್ದಾರಿ ಕೊಟ್ಟಿದ್ದರು. ಅದರಂತೆ ಸರಿಯಾಗಿ ಇಟ್ಟುಕೊಂಡು ಮತ ಹಾಕಿಸಿ ನಮ್ಮ ಅಭ್ಯರ್ಥಿಗಳೆಲ್ಲರನ್ನೂ ಗೆಲ್ಲಿಸಿದ್ದೇವೆ ಎಂದರು.

# ಬಿಎಂಟಿಸಿ ಬಸ್ ಡಿಕ್ಕಿ: ಗಾರೆ ಮೇಸ್ತ್ರಿ ಸಾವು

**ಬೆಂಗಳೂರು, ಜೂ.19:** ವೇಗವಾಗಿ ಮುನ್ನುಗ್ಗಿ ಬಂದ ಬಿಎಂಟಿಸಿ ಎಲೆಕ್ಟ್ರಿಕಲ್ ಬಸ್ ರಸ್ತೆ ದಾಟುತ್ತಿದ್ದ ಗಾರೆ ಮೇಸ್ತ್ರಿಗೆ ಡಿಕ್ಕಿ ಹೊಡೆದ ಪರಿಣಾಮ ಅವರು ಮೃತಪಟ್ಟ ಘಟನೆ ಜ್ಞಾನಭಾರತಿ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ನಡೆದಿದೆ. ಮೂಲತಃ ಮಂಡ್ಯ ಜಿಲ್ಲೆಯವರಾದ ರಾಜು (57) ಮೃತಪಟ್ಟ ಪಾದಚಾರಿ. ಇವರು ಗಾರೆ ಮೇಸ್ತ್ರಿ ಕೆಲಸ ಮಾಡುತ್ತಿದ್ದರು. ಉಲ್ಲಾಳ ಉಪನಗರದಲ್ಲಿ ವಾಸವಾಗಿದ್ದ ರಾಜು ಅವರು ರಾತ್ರಿ 7.20 ರ ಸುಮಾರಿನಲ್ಲಿ ಕೆಲಸ ಮುಗಿಸಿಕೊಂಡು ಉಲ್ಲಾಳ ರಸ್ತೆ, ಮಂಗನಹಳ್ಳಿ ಕ್ರಾಸ್ ಬಳಿ ರಸ್ತೆ ದಾಟುತ್ತಿದ್ದಾಗ ಅತಿ ವೇಗವಾಗಿ ಬಂದ ಬಿಎಂಟಿಸಿ ಎಲೆಕ್ಟ್ರಿಕಲ್ ಬಸ್ ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡು ಮೃತಪಟ್ಟಿದ್ದಾರೆ.

### ಮಹಿಳೆ ವಿವಸ್ತ್ರಗೊಳಿಸಿ ಚಿತ್ರೀಕರಿಸಿದ ಆರೋಪ

# ಜಾಮೀನು ಕೋರಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅರ್ಜಿ: ಎಸ್‌ಐಟಿಗೆ ಹೈಕೋರ್ಟ್ ನೋಟಿಸ್



**ಬೆಂಗಳೂರು, ಜೂ.19:** ಪುತ್ರನಿಗೆ ಹಾಸನದ ಕೇಂದ್ರೀಯ ವಿದ್ಯಾಲಯದಲ್ಲಿ ಸೀಟು ಕೊಡಿಸುವ ನೆಪದಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಚಿತ್ರೀಕರಿಸಿದ ಆರೋಪದ ಮೇಲೆ ದಾಖಲಾಗಿರುವ ಪ್ರಕರಣದಲ್ಲಿ ಜಾಮೀನು ಕೋರಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಅರ್ಜಿ ಸಂಬಂಧ ವಿಶೇಷ ತನಿಖಾ ದಳಕ್ಕೆ ಕರ್ನಾಟಕ ಹೈಕೋರ್ಟ್ ಶುಕ್ರವಾರ ನೋಟಿಸ್ ಜಾರಿಗೊಳಿಸಿದೆ.

ಪ್ರಜ್ವಲ್ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠದಿಂದ ವಿಚಾರಣೆ ನಡೆಸಿತು. ವಿಚಾರಣೆ ಆರಂಭವಾಗುತ್ತಿದ್ದಂತೆಯೇ ಪೀಠವು ಏನಿದು ಮತ್ತೆ ಬೇಲ್ ಎಂದಿತು. ಅದಕ್ಕೆ ಪ್ರಜ್ವಲ್ ಪರ ವಕೀಲ ಜಿ ಅರುಣ್ ಅವರು ಡಿಫಾಲ್ಟ್ ಜಾಮೀನು ಕೋರಿದ್ದೇವೆ. ಈಗ ಈ ಪ್ರಕರಣದಲ್ಲಿ ಆರೋಪ ಪಟ್ಟಿ ಸಲ್ಲಿಕೆಯಾಗಿದೆ ಎಂದರು.

ಆಗ ಪೀಠವು ಯಾವುದರಲ್ಲಿ ಡಿಫಾಲ್ಟ್ ಬೇಲ್ ಐಪಿಸಿ ಸೆಕ್ಷನ್ 354ಎ, ಬಿ.ಸಿ.ಡಿ ಪ್ರಕರಣವೇ ಎಂದಿತು. ಸ್ಥಳದಲ್ಲಿದ್ದ ವಿಶೇಷ ಸರ್ಕಾರಿ ಅಭಿಯೋಜಕ ಬಿ ಎನ್ ಜಗದೀಶ್ ಅವರು ಎಸ್‌ಐಟಿ ಪರವಾಗಿ ನೋಟಿಸ್ ಪಡೆಯುವುದಾಗಿ ತಿಳಿಸಿದರು. ಇದನ್ನು ಆಲಿಸಿದ ಪೀಠವು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿ, ಜುಲೈ 3ರ ಒಳಗೆ ಆಕ್ಷೇಪಣೆ ಸಲ್ಲಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

2019ರಲ್ಲಿ ಸಂಸದರ ಕೋಟಾದಲ್ಲಿ ತನ್ನ ಪುತ್ರನಿಗೆ ಕೇಂದ್ರೀಯ ವಿದ್ಯಾಲಯದಲ್ಲಿ ಸೀಟು ಕೊಡಿಸುವಂತೆ ಮಹಿಳೆಯು ಪ್ರಜ್ವಲ್‌ನನ್ನು ಸಂಪರ್ಕಿಸಿದ್ದರು. ಈ ಸಂದರ್ಭದಲ್ಲಿ ಆಕೆಯ ಮೊಬೈಲ್ ನಂಬರ್ ಸಂಗ್ರಹಿಸಿದ್ದ ಪ್ರಜ್ವಲ್ ಪದೇಪದೇ ಆಕೆಗೆ 2019 ಮತ್ತು 2021ರ ನಡುವೆ ಕರೆ ಮಾಡಿ ವಿವಸ್ತ್ರವಾಗಿ ಮೊಬೈಲ್ ಕ್ಯಾಮೆರಾದ ಮುಂದೆ ಬರುವಂತೆ ಪೀಡಿಸಿದ್ದನು. ಆಕೆ ವಿವಸ್ತ್ರವಾಗಿ ಕ್ಯಾಮೆರಾ ಮುಂದೆ ಬಂದಾಗ ಆಕೆಯ ಅನುಮತಿ ಇಲ್ಲದೇ ವಿಡಿಯೊ ರೆಕಾರ್ಡ್ ಮಾಡಿ, ಫೋಟೊಗಳನ್ನು ಸಂಗ್ರಹಿಸಿದ್ದರು. ತಾನು ಕರೆ ಮಾಡಿದಾಗ ಫೋನ್ ತೆಗೆಯದಿದ್ದರೆ ಅವುಗಳನ್ನು ಬಹಿರಂಗಗೊಳಿಸುವುದಾಗಿ ಬೆದರಿಸಿದ್ದ.

ಈ ಆರೋಪದ ಮೇಲೆ ಐಪಿಸಿ ಸೆಕ್ಷನ್‌ಗಳಾದ 354ಎ (ಲೈಂಗಿಕ ಕಿರುಕುಳ), 354ಬಿ (ವಿವಸ್ತ್ರಗೊಳಿಸಲು ಬೆದರಿಕೆ), 354ಡಿ (ಹಿಂಬಾಲಿಸುವುದು) ಮತ್ತು 506 (ಕ್ರಿಮಿನಲ್ ಬೆದರಿಕೆ) ಜೊತೆಗೆ ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್‌ಗಳಾದ 66ಇ ಮತ್ತು 67 ಅಡಿ ಪ್ರಕರಣ ದಾಖಲಿಸಲಾಗಿದೆ. ಪ್ರಜ್ವಲ್ ವಿರುದ್ಧ ಮೂರು ಅತ್ಯಾಚಾರ ಮತ್ತು ಮಹಿಳೆಯನ್ನು ವಿವಸ್ತ್ರಗೊಳಿಸಿದ ಪ್ರಕರಣ ಸೇರಿ ಒಟ್ಟು ನಾಲ್ಕು ಪ್ರಕರಣ ದಾಖಲಾಗಿದ್ದು, ಒಂದರಲ್ಲಿ ಪೂರ್ಣಗೊಂಡು ಶಿಕ್ಷೆಯಾಗಿದೆ.

# ಯುವಮೋರ್ಚಾದ ಹೋರಾಟವೇ ಬಿಜೆಪಿಯ ಶಕ್ತಿ: ರವೀಂದ್ರ ಕರೆ

## ವಿಜಯನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವಮೋರ್ಚಾ ಸದಸ್ಯರಿಗೆ ಹೆಚ್ಚಿನ ಜವಾಬ್ದಾರಿ





**ಬೆಂಗಳೂರು:** ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಯುವಮೋರ್ಚಾ ಸಂಘಟನೆ ಹೊಸ ಉತ್ಸಾಹ, ಹೊಸ ದಿಕ್ಕು ಮತ್ತು ಶಕ್ತಿಶಾಲಿ ಕಾರ್ಯತಂತ್ರದೊಂದಿಗೆ ಮುನ್ನಡೆಯುತ್ತಿದ್ದು, ಮಂಡಲ ಮಟ್ಟದಲ್ಲಿ ಸರ್ವ ಸದಸ್ಯರಿಗೆ ಜವಾಬ್ದಾರಿಗಳನ್ನು ಹಂಚಿಕೆ ಮಾಡುವ ಮೂಲಕ ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಸಂಘಟನೆಯ ಬಲವನ್ನು ಬಹುಪಟ್ಟು ಹೆಚ್ಚಿಸಲಾಗಿದೆ. ಹಾಗಾಗಿ ಬಿಜೆಪಿ ಯುವ ಮೋರ್ಚಾದ ಹೊಣೆಗಾರಿಕೆ ಜವಾಬ್ದಾರಿಗಳಿಗೆ ಉತ್ಸಾಹಿ ಯುವಕರಿಗೆ ವಹಿಸಲಾಗಿದೆ. ಅಧ್ಯಕ್ಷರಾಗಿ ರವಿರಾಜ್, ಉಪಾಧ್ಯಕ್ಷರಾಗಿ ನವೀನ್.ಎನ್, ಆಶಿಶ್ ಬಿ.ಎಚ್ (ಅನೂಪ್), ಶ್ರೀನಿವಾಸ್.ಎಂ, ಕಾರ್ತಿಕ್.ಯು, ಪ್ರದೀಪ್. ಆರ್, ಅವಿನಾಶ್, ಎಂ, ಪ್ರಧಾನ ಕಾರ್ಯದರ್ಶಿಗಳಾಗಿ ಮೋಹನ್, ಅಭಿಷೇಕ್, ಕಾರ್ಯದರ್ಶಿಗಳಾಗಿ ಮನೋಜ್.ಎಚ್.ಎ, ಚಂದ್ರಶೇಖರ್. ಎಂ, ಅಭಿಷೇಕ್.ಪಿ, ಆಕಾಶ್.ಆರ್, ಕಾರ್ತಿಕ್ ಆರ್.ಎಸ್.ಟಿ, ವೀರಭದ್ರ.ಎಂ, ಅಕ್ಷಯ್. ಆರ್, ಕಾರ್ಯಕಾರಿಣಿ ಸದಸ್ಯರಾಗಿ ಹೇಮಂತ್ ನಾಯಕ್.ಎಂ, ರಾಘವೇಂದ್ರ. ಎನ್, ಚಂದನ್.ಆರ್. ಶ್ರೇಯಸ್.ಆರ್. ಅವರಿಗೆ ಬಿಜೆಪಿ ಮುಖಂಡರಾದ ಎಚ್. ರವೀಂದ್ರ, ವಿಜಯನಗರ ಕ್ಷೇತ್ರದ ಬಿಜೆಪಿ ಅಧ್ಯಕ್ಷ ವಿ.ರಾಮಾಂಜನಿ ಮತ್ತು ಪ್ರಧಾನ ಕಾರ್ಯದರ್ಶಿ ಎ.ಜಿ.ಆನಂದ್‌ಗೌಡ ಅವರು ಹೆಚ್ಚಿನ ಜವಾಬ್ದಾರಿ ನೀಡಿ ಕ್ಷೇತ್ರದಲ್ಲಿ ಪಕ್ಷ ಸಂಘಟನೆಗೆ ನಿಯುಕ್ತಿ ಮಾಡಿ ಆದೇಶ ಪ್ರತಿ ನೀಡಿದರು.

ಈ ಕರ್ತವ್ಯ ಹಂಚಿಕೆ ಸಾಮಾನ್ಯ ಆಡಳಿತಾತ್ಮಕ ಕ್ರಮವಲ್ಲ ; ಇದು ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆಯನ್ನು ಬೂತ್ ಮಟ್ಟದಿಂದಲೇ ಬಲಿಷ್ಠಗೊಳಿಸುವ ದಿಟ್ಟ ಹೆಜ್ಜೆಯಾಗಿದೆ. ಪ್ರತಿಯೊಬ್ಬ ಕಾರ್ಯಕರ್ತನಿಗೂ ಸ್ಪಷ್ಟವಾದ ಜವಾಬ್ದಾರಿ ನೀಡಲಾಗಿದ್ದು, ಪಕ್ಷದ ಕಾರ್ಯಚಟುವಟಿಕೆಗಳನ್ನು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೆ ತರುವ ವ್ಯವಸ್ಥೆ ರೂಪುಗೊಂಡಿದೆ ಎಂದು ಎಚ್.ರವೀಂದ್ರ ಯುವಮೋರ್ಚಾದ ಅಧ್ಯಕ್ಷರಿಗೆ ಪ್ರೋತ್ಸಾಹಿಸಿದ್ದಾರೆ.

ಯುವ ಮೋರ್ಚಾ ಕಾರ್ಯಕರ್ತರು ಈಗ ಕೇವಲ ಹೆಸರಿನ ಸದಸ್ಯರಲ್ಲ. ಅವರು ಕ್ಷೇತ್ರದ ಪ್ರತಿಯೊಂದು ಭಾಗದಲ್ಲೂ ಸಕ್ರಿಯ ಯೋಧರಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಘಟನೆಯ ಒಳಬಲ ಹೆಚ್ಚಿದಂತೆ, ಕ್ಷೇತ್ರದಲ್ಲಿ ಬಿಜೆಪಿ ಪ್ರಭಾವವೂ ಗಣನೀಯವಾಗಿ ಏರಿಕೆಯಾಗುತ್ತಿದೆ. ಈ ಸಂಘಟಿತ ಚಟುವಟಿಕೆಗಳ ಹಿಂದೆ ಎಚ್. ರವೀಂದ್ರ ಅವರ ದಿಟ್ಟ ನಾಯಕತ್ವ ಪ್ರಮುಖ ಶಕ್ತಿಯಾಗಿದೆ. ಅವರ ಮಾರ್ಗ ದರ್ಶನದಲ್ಲಿ ಯುವಕರು ರಾಜಕೀಯ ಚಟುವಟಿಕೆಯಲ್ಲಿ ಉತ್ಸಾಹದಿಂದ ತೊಡಗಿಸಿಕೊಂಡು, ಪಕ್ಷದ ಧ್ಯೇಯವನ್ನು ಜನತೆಗೆ ತಲುಪಿಸುತ್ತಿದ್ದಾರೆ.

ಇದಕ್ಕೆ ಜೊತೆಯಾಗಿ, ವಿಜಯನಗರ ಮಂಡಲದ ಅಧ್ಯಕ್ಷ ವಿ. ರಾಮಾಂಜನಿ ಮತ್ತು ಪ್ರಧಾನ ಕಾರ್ಯದರ್ಶಿ ಎ.ಜಿ. ಆನಂದ್‌ಗೌಡ ಮಾರ್ಗದರ್ಶನ ಸಂಘಟನೆಯ ಬಲವರ್ಧನೆಗೆ ಬೆನ್ನೆಲುಬಾಗಿದೆ. ಇವರ ತಂತ್ರಜ್ಞಾನ, ಶಿಸ್ತು ಮತ್ತು ಸಮನ್ವಯದ ಫಲವಾಗಿ ಯುವ ಮೋರ್ಚಾ ಚಟುವಟಿಕೆಗಳು ಅತ್ಯಂತ ವೇಗದಲ್ಲಿ ವಿಸ್ತರಿಸುತ್ತಿವೆ.

# ಲೋಕಾಯುಕ್ತ ದಾಳಿ ವೇಳೆ ನಿವೃತ್ತ ಅಧಿಕಾರಿ ಬಳಿ 9 ಲಕ್ಷ ರೂ. ಹಳೆಯ ನೋಟುಗಳು ಪತ್ತೆ



**ಕಲಬುರಗಿ. ಜೂ. 19:** ಲೋಕಾಯುಕ್ತ ದಾಳಿಗೆ ಒಳಗಾದ ನಿವೃತ್ತ ಇಂಜಿನಿಯರ್ ಮಾಣಿಕ್ ಕನಕಟ್ಟಿ ಅವರ ಬ್ಯಾಂಕ್ ಲಾಕರ್‌ನಲ್ಲಿ 2016ರಲ್ಲಿ ಅಮಾನ್ಯೀಕರಣಗೊಂಡ 1000 ರೂ. ಮುಖಬೆಲೆಯ 9 ಲಕ್ಷ ರೂ. ಬಂಡಲ್‌ಗಳು ಪತ್ತೆಯಾಗಿವೆ.

ಕಲಬುರಗಿಯ ಸಂಗಮೇಶ್ವರ ಬಡಾವಣೆಯ ಎಸ್.ಬಿ.ಐ. ಶಾಖೆಯ ಲಾಕರ್ ನಲ್ಲಿ ಈ ನೋಟುಗಳ ಬಂಡಲ್ ಹಾಗೂ 20 ತೊಲ ಚಿನ್ನಾಭರಣ ಪತ್ತೆಯಾಗಿದೆ. 10 ವರ್ಷದ ಹಿಂದೆ ಅಮಾನ್ಯೀಕರಣಗೊಂಡ ನೋಟುಗಳು ಇಷ್ಟು ದಿನ ಇಟ್ಟಿದ್ದು ಏಕೆ ಎನ್ನುವುದು ಅಚ್ಚರಿ ಮೂಡಿಸಿದೆ.

ಲೋಕಾಯುಕ್ತ ದಾಳಿಯ ವೇಳೆ ನಿವೃತ್ತ ಅಧಿಕಾರಿಯ ಬ್ಯಾಂಕ್ ಲಾಕರ್ ನಲ್ಲಿ ಹಳೆಯ ನೋಟುಗಳು ಚಿನ್ನಾಭರಣ ಪತ್ತೆಯಾಗಿದೆ. ಆದಾಯ ಮೀರಿದ ಆಸ್ತಿ ಗಳಿಕೆಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕಲಬುರಗಿ ವೃತ್ತದ ನಿವೃತ್ತ ಅಧೀಕ್ಷಕ ಅಭಿಯಂತರ ಮಾಣಿಕ್ ಕನಕಟ್ಟಿ ಅವರ ಮನೆಯ ಮೇಲೆ ಮಂಗಳವಾರ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದರು.

ಕಲಬುರಗಿಯ ಸಂಗಮೇಶ್ವರ ಕಾಲೋನಿಯ ಎಸ್.ಬಿ.ಐ. ಬ್ಯಾಂಕ್ ನಲ್ಲಿರುವ ಅವರ ಲಾಕರ್ ಪರಿಶೀಲಿಸಿದಾಗ 1000 ರೂ. ಮುಖಬೆಲೆಯ 9 ಲಕ್ಷ ರೂ. ಹಳೆಯ ನೋಟುಗಳು, ಉಂಗುರ ಸೇರಿದಂತೆ 20 ತೊಲ ಚಿನ್ನಾಭರಣ ಪತ್ತೆಯಾಗಿದೆ.

ಕಲಬುರಗಿಯ ಗೋದುತಾಯಿ ನಗರದ ಎರಡು ಮನೆಗಳು, ಬೀದರ್ ಜಿಲ್ಲೆಯ ಹಳ್ಳಿಖೇಡಾ ಬಿ ಗ್ರಾಮದ ಮನೆ, ತೋಟಗಳು, ಹುಮ್ನಾಬಾದ್‌ನಲ್ಲಿರುವ ಎರಡು ಕಾಂಪ್ಲೆಕ್ಸ್‌ಗಳ ಮೇಲೂ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿ ಪರಿಶೀಲಿಸಿದ್ದರು.

# ಎಪಿಎಂಸಿ ಶುಲ್ಕದ ಗುರಿಯನ್ನು ಮೀರಿ ಸಾಧನೆ



**ಬಳ್ಳಾರಿ ಜೂ 19.** ಬಳ್ಳಾರಿ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಶುಲ್ಕ ಗುರಿಯನ್ನು ಮೀರಿ ಸಾಧನೆ ಮಾಡಿದ್ದೇವೆ ಎಂದು ಎಪಿಎಂಸಿ ಅಧ್ಯಕ್ಷರಾದ ಕಟ್ಟೆಮನೆ ನಾಗೇಂದ್ರ ಮತ್ತು ಕಾರ್ಯದರ್ಶಿಗಳಾದ ಜಯಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2024–25 ನೇ ಸಾಲಿನ ಮಾರುಕಟ್ಟೆ ಶುಲ್ಕ ಗುರಿ ರೂ. 7 ಕೋಟಿ ಆಗಿತ್ತು, ಆದರೇ ಗುರಿಯನ್ನು ಮೀರಿ ರೂ. 8,60,25,305/– ಸಾಧನೆಯನ್ನು ಮಾಡಿದ್ದೇವೆ, 2025–26 ನೇ ಸಾಲಿನ ಮಾರುಕಟ್ಟೆ ಶುಲ್ಕ ಗುರಿ ರೂ. 11.5 ಕೋಟಿ ಆಗಿತ್ತು, ಆದರೇ ಗುರಿಯನ್ನು ಮೀರಿ ರೂ. 15,09,07,367/– ಸಾಧನೆ ಕಂಡಿದ್ದೇವೆ ಎಂದು, ಸಮಿತಿಯ ಅಭಿವೃದ್ಧಿ ಪಡೆಸಲು ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು, ಕಾರ್ಯದರ್ಶಿಯವರು ಹಾಗೂ ಕಛೇರಿ ಸಿಬ್ಬಂದಿಯವರೆಲ್ಲರು ಹಗಲು ರಾತ್ರಿ ತಾಲ್ಲೂಕಿನಾದ್ಯಂತ ಸಂಚರಿಸಿ ಮಾರುಕಟ್ಟೆ ಶುಲ್ಕ ವಂಚನೆಯಾಗದಂತೆ ಬಿಗಿಯಾದ ಕಟ್ಟುನಿಟ್ಟಿನ ನಿಯಂತ್ರಣ ಕ್ರಮಗಳನ್ನು ಕೈಗೊಂಡಿರುವ ಪ್ರಯುಕ್ತ ಮಾರುಕಟ್ಟೆ ಶುಲ್ಕ ಹೆಚ್ಚಿಗೆ ಸಾದಿಸಲು ಸಾಧ್ಯವಾಗಿರುತ್ತದೆ ಎಂದು ಅವರು ತಿಳಿಸಿದ್ದಾರೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬಳ್ಳಾರಿ 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಅಭಿವೃದ್ಧಿ ಕಾಮಗಾರಿಗಳು:–ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬಳ್ಳಾರಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ರಸ್ತೆ ಸಂ. 4 ಹಾಗೂ 5 ರ ಮಧ್ಯದಲ್ಲಿರುವ ಒಣಗಿಸುವ ಕಟ್ಟೆಯ ಜಾಗದಲ್ಲಿ ಮುಚ್ಚು ಹರಾಜು ಕಟ್ಟೆ ನಿರ್ಮಿಸುವ ಕಾಮಗಾರಿ 250 ಲಕ್ಷ ರೂ ಟೆಂಡರನ್ನು ಕರೆಯಲಾಗಿದೆ. ಮುಖ್ಯ ಮಾರುಕಟ್ಟೆ ಪ್ರಾಂಗಣದ ರಸ್ತೆಯಲ್ಲಿರುವ ಶ್ರಮಿಕ ಭವನ ನವೀಕರಿಸುವ ಕಾಮಗಾರಿ 5 ಲಕ್ಷ ರೂ ಟೆಂಡರನ್ನು ಕರೆಯಲಾಗಿದೆ. ಕೃ.ಉ.ಮಾ.ಸ ಬಳ್ಳಾರಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ರಸ್ತೆ ಸಂಖ್ಯೆ 01 ರ ಸಿ ಬ್ಲಾಕ್ನ ನಿವೇಶನ ಸಂಖ್ಯೆ 23 ಮತ್ತು 24 ಹಾಗೂ 29 ಮತ್ತು 30 ರ ಮಧ್ಯದಲ್ಲಿ ಖಾಲಿ ಇರುವ ಜಾಗವನ್ನು ವಾಣಿಜ್ಯ ಜಿಂಕ್ ಶೆಡ್ ಮಳಿಗೆಗಳನ್ನು ನಿರ್ಮಿಸುವ ಕಾಮಗಾರಿ 10 ಲಕ್ಷ ರೂ ಟೆಂಡರ್ ಕರೆಯಲಾಗಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಳ್ಳಾರಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ಶೌಚಾಲಯವನ್ನು ಮೇಲ್ದರ್ಜೆಗೆ ಏರಿಸುವುದು ಹಾಗೂ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನವೀನ ಮಾದರಿಯ ಸುಸಜ್ಜಿತ ಶೌಚಾಲಯ ನಿರ್ಮಾಣ ಕಾಮಗಾರಿ 17 ಲಕ್ಷ ರೂ ಟೆಂಡರ್ ಕರೆಯಲಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಳ್ಳಾರಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಾಲಿ ಇರುವ ಶುದ್ಧ ಕುಡಿಯುವ ನೀರಿನ ಘಟಕ ಕಟ್ಟಡಗಳ ದುರಸ್ಥಿ ಮಾಡಿ ನೀರು ಸರಬರಾಜು ಮಾಡುವ ಕಾಮಗಾರಿಯನ್ನು 7 ಲಕ್ಷ ರೂ ಟೆಂಡರನ್ನು ಕರೆಯಲಾಗಿದೆ.

ಲೀಟ್ ಅಂಡ್ ಲೈಸನ್ಸ್ ವಿಭಾಗ:ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಲೀವ್ ಅಂಡ್ ಲೈಸನ್ಸ್ ಆಧಾರದ ಮೇಲೆ ಹಂಚಿಕೆಯಾದ ಮಳಿಗೆಗಳ ಬಾಕಿ ಇದ್ದ ಲೀವ್ ಅಂಡ್ ಲೈಸನ್ಸ್ ಶುಲ್ಕವು ಎಲ್ಲಾ ವ್ಯಾಪಾರಸ್ಥರಿಗೆ ನೋಟಿಸ್ ಜಾರಿಗೊಳಿಸಿ ಸುಮಾರು ರೂ. 50,00,000/– ಲೀವ್ ಅಂಡ್ ಲೈಸನ್ಸ್ ಶುಲ್ಕ ವಸೂಲಾತಿ ಮಾಡಲಾಗಿರುತ್ತದೆ.

# ಸಾಧಕರ ಹೆಜ್ಜೆ ಗುರುತು ಸ್ಮರಣೆ ನಮ್ಮ ಕರ್ತವ್ಯ




**ಕನ್ನಡ ಸಂಘರ್ಷ ಸಮಿತಿ ಆಯೋಜಿಸಿದ್ದ ಡಾ.ಅನುಪಮಾ ನಿರಂಜನ ಹಾಗೂ ಡಾ.ಕೋ.ವೆಂ.ರಾಮಕೃಷ್ಣೇಗೌಡ ಅವರ ಹುಟ್ಟುಹಬ್ಬ, ಪ್ರಶಸ್ತಿ ಪ್ರದಾನ ಹಾಗೂ ಕಥಾಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ದು. ಸರಸ್ವತಿ ಅವರಿಗೆ ಡಾ. ಅನುಪಮಾ ನಿರಂಜನ ಪ್ರಶಸ್ತಿ ಹಾಗೂ ಆರ್. ಸದಾಶಿವಯ್ಯ ಜರಗನಹಳ್ಳಿ ಅವರಿಗೆ ಡಾ. ಕೋ.ವೆಂ.ರಾ. ಕನ್ನಡ ಪರಿಚಾರಕ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಗಾಯತ್ರಿ ರಾಮಣ್ಣ, ಡಾ. ಎಚ್. ಎಲ್. ಪುಷ್ಪ, ರಾಮಣ್ಣ ಎಚ್. ಕೋಡಿಹೊಸಹಳ್ಳಿ, ದಯಾನಂದ ಕಟ್ಟೆ, ಡಾ. ಮಾನಸ, ಎ.ಎಸ್. ನಾಗರಾಜಸ್ವಾಮಿ, ತಾ.ಸಿ. ತಿಮ್ಮಯ್ಯ, ಪಿ. ಆರ್. ಪ್ರಭು ಹಾಗೂ ಡಾ. ಇಂದಿರಾ ಶರಣ್ ಜಮ್ಮಲದಿನ್ನಿ ಇದ್ದಾರೆ.**

**ಬೆಂಗಳೂರು, ಜೂ. 19:** ಸಾಧಕರು ಬಿಟ್ಟುಹೋದ ಹೆಜ್ಜೆ ಗುರುತುಗಳು ಸದಾ ನಮ್ಮನ್ನು ಆಕರ್ಷಿಸುತ್ತವೆ. ಹಾಗಾಗಿ ನಾವು ಸದಾ ಅವರನ್ನು ನೆನಪಿಸಿಕೊಳ್ಳುತ್ತೇವೆ. ಅದು ನಮ್ಮ ಕರ್ತವ್ಯ ಕೂಡ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಅಭಿಪ್ರಾಯ ಪಟ್ಟಿದ್ದಾರೆ.

ನಮ್ಮಲ್ಲಿ ಸುಕೃತ ಮನಸ್ಸುಳ್ಳವರು ಸಿಕ್ಕ ಅವಕಾಶ ಸದುಪಯೋಗಪಡಿಸಿಕೊಂಡು ಉತ್ತಮ ಹಾಗೂ ಶಾಶ್ವತವಾಗಿ ಉಳಿಯುವ ಕೆಲಸಗಳನ್ನು ಮಾಡುತ್ತಾರೆ. ಆದರೆ ಇವರು ಸದ್ದು –ಗದ್ದಲ ಮಾಡುವವರಲ್ಲ ಹಾಗೂ ಸ್ವಾರ್ಥ ಇವರಲ್ಲಿರುವುದಿಲ್ಲ. ಇವರು ಸಿಕ್ಕ ಅವಕಾಶದಲ್ಲಿ ಏನನ್ನಾದರೂ ಸಮಾಜಕ್ಕೆ ಕೊಡುಗೆ ಕೊಡಲೇಬೇಕೆಂದು ಶ್ರಮಿಸುತ್ತಾರೆ. ಇಂತಹವರು ಸದಾ ಆದರ್ಶಪ್ರಾಯರಾಗಿ ನೆನಪಲ್ಲಿ ಉಳಿಯುತ್ತಾರೆ.

ಇಂತಹ ಸುಕೃತ ಮನಸ್ಸಿನ ಡಾ. ಅನುಪಮಾ ನಿರಂಜನ ವೈದ್ಯ ಲೋಕಕ್ಕೆ ಮಾದರಿ. ಅವರು ವೈದ್ಯರಾಗಿದ್ದುಕೊಂಡು ಸಾಹಿತ್ಯದಲ್ಲಿಯೂ ಸಾಧನೆ ಗೈದವರು. ಅವರ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆ ಹಾಗೂ ಮಕ್ಕಳಿಗಾಗಿ ರಚಿಸಿದ ದಿನಕ್ಕೊಂದು ಕಥೆಗಳು ಇಂದಿಗೂ ಪ್ರಸ್ತುತವಾಗಿವೆ. ಆ ಕಾರಣಕ್ಕಾಗಿಯೇ ನಾವು ಅವರುನ್ನು ನೆನೆಯುತ್ತೇವೆ ಎಂದು ಮಾನಸ ಅಭಿಪ್ರಾಯ ಪಟ್ಟರು.

ಕೋ.ವೆಂ. ರಾಮಕೃಷ್ಣೇಗೌಡ ಅವರು ನಿಷ್ಠುರವಾದಿಯೂ ಹಾಗೂ ಉತ್ತಮ ಕನ್ನಡ ಹೋರಾಟಗಾರರಾಗಿದ್ದರು. ಅವರನ್ನು ನೆನಪು ಮಾಡಿಕೊಡುವ ಈ ಕಾರ್ಯಕ್ರಮ ಆಯೋಜನೆ ಮಾಡಿದ ಸಂಘರ್ಷ ಸಮಿತಿ ಉತ್ತಮ ಕಾರ್ಯ ಮಾಡುತ್ತಿರುವುದಕ್ಕೆ ಸಾಕ್ಷಿ ಎಂದು ಅಭಿಪ್ರಾಯಪಟ್ಟರು.

ಅಂತೆಯೇ ನಮ್ಮಲ್ಲಿ ರೋದಕ ಮನಸ್ಸುಳ್ಳವರು ಸದ್ದು–ಗದ್ದಲದಲ್ಲಿ ಮುಳುಗಿ, ಸ್ವಾರ್ಥ ಮೆರೆದು ಸಿಕ್ಕ ಅವಕಾಶ ದುರ್ಬಳಕೆ ಮಾಡಿಕೊಂಡು ಕಣ್ಮರೆಯಾಗುತ್ತಾರೆ. ಇವರು ಸಿಕ್ಕ ಅವಕಾಶದಲ್ಲಿ ಏನೆಲ್ಲ ದಕ್ಕಿಸಿಕೊಳ್ಳಲು ಸಾಧ್ಯ ಎಂದು ಹಪಾಹಪಿಸುತ್ತಿರುತ್ತಾರೆ. ಇಂತಹ ರೋದಕ ವರ್ಗ ಜೀವಂತ ಇದ್ದರೂ ನೈಜವಾಗಿ ಅವರು ಸತ್ತಂತೆಯೇ ಸರಿ ಎಂದರು.

**ಮಹಾನ್ ಚೇತನಗಳು :**

ಕರ್ನಾಟಕ ಲೇಖಕಿಯರ ಸಂಘದ ನಿಕಟಪೂರ್ವ ಅಧ್ಯಕ್ಷೆ ಡಾ. ಎಚ್. ಎಲ್. ಪುಷ್ಪ ಮಾತನಾಡಿ, , ಡಾ. ಅನುಪಮಾ ನಿರಂಜನ ಅವರು ಅಂತರ್ಜಾತಿ ವಿವಾಹವಾಗಿ ಸಮಾಜಕ್ಕೆ ಮಾದರಿಯಾದ ಚೇತನ. ಅವರು ಮನೆಯಲ್ಲಿ ಸ್ತ್ರೀಗಾಗಿ ಪ್ರತ್ಯೇಕ ಕೊಠಡಿ ಇರಬೇಕು. ಅವರ ಓದು ಬರಹಕ್ಕೆ ಪೂರಕವಾದ ವ್ಯವಸ್ಥೆ ಕಡ್ಡಾಯವಾಗಿ ಇರಬೇಕೆಂದು ಪ್ರತಿಪಾದಿಸಿ, ಮಹಿಳಾಪರವಾದ ಧ್ವನಿಯಾಗಿ ಗುರುತಿಸಿಕೊಂಡಿದ್ದರು. ಅಂತೆಯೇ ಕೋ.ವೆಂ. ರಾಮಕೃಷ್ಣೇಗೌಡ ಅವರು ಪ್ರಾಧ್ಯಾಪಕರಾಗಿದ್ದುಕೊಂಡು ಕನ್ನಡ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು. ಅಲ್ಲದೇ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿದ್ದರು ಎಂದರು.

# ಎಂಇಎಸ್ ಪ್ರತಿಭಟನೆಗೆ ಅವಕಾಶ ಬೇಡ: ಕನ್ನಡಪರ ಸಂಘಟನೆಗಳಿಂದ ಪೊಲೀಸ್ ಆಯುಕ್ತರಿಗೆ ಮನವಿ

**ಬೆಳಗಾವಿ, ಜೂ.19:** ಕನ್ನಡ ಹಾಗೂ ಕರ್ನಾಟಕದ ವಿರುದ್ಧ ಜೂ.22ರಂದು ಎಂಇಎಸ್ ಹಮ್ಮಿಕೊಳ್ಳಲು ಮುಂದಾಗಿರುವ ಪ್ರತಿಭಟನೆಗೆ ಯಾವುದೇ ಅನುಮತಿ ನೀಡಬಾರದು ಎಂದು ಆಗ್ರಹಿಸಿ ವಿವಿಧ ಕನ್ನಡಪರ ಸಂಘಟನೆಗಳಿಂದ ಶುಕ್ರವಾರ ನಗರ ಪೊಲೀಸ್ ಆಯುಕ್ತ ಭೂಷಣ ಬೋರಸೆಗೆ ಮನವಿ ಸಲ್ಲಿಸಲಾಯಿತು.

ಗಡಿನಾಡು ಕನ್ನಡಿಗರ ಸೇನೆ, ಕರ್ನಾಟಕ ಯವ ರಕ್ಷಣಾ ವೇದಿಕೆ ಯುವ ಸೇನೆ, ಕರವೇ ಶಿವರಾಮೇಗೌಡ ಬಣ ಮತ್ತು ಸ್ವಾಭಿಮಾನಿ ಬಣ, ಕರುನಾಡು ರಕ್ಷಣಾ ವೇದಿಕೆ, ಕಿತ್ತೂರು ಕರ್ನಾಟಕ ಸೇನೆ ಸೇರಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ಕರ್ನಾಟಕದ ವಿರುದ್ಧ ಪ್ರತಿಭಟನೆ ಮಾಡಲು ಮುಂದಾಗಿರುವ ವರನ್ನು ಮಾತುಕತೆಗೆ ಕರೆಯುವ ಅಥವಾ ಅವರೊಂದಿಗೆ ಚರ್ಚಿಸುವುದಾಗಿ ಯಾವ ಕೆಲಸವನ್ನೂ ಅಧಿಕಾರಿಗಳು ಮಾಡಬಾರದು. ಮಹಾರಾಷ್ಟ್ರಕ್ಕೆ ಹೋಲಿಸಿದರೆ ಕರ್ನಾಟಕದ ಗಡಿಭಾಗದಲ್ಲಿ ಭಾಷಾ ಅಲ್ಪಸಂಖ್ಯಾತರಿಗೆ ಸರ್ಕಾರ ಹಲವಾರು ಸೌಕರ್ಯ ನೀಡಿದೆ. ಆದರೆ ಮಹಾರಾಷ್ಟ್ರದ ಅಚ್ಚ ಕನ್ನಡ ಪ್ರದೇಶಗಳಾದ ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ ಮತ್ತು ಸಾಂಗ್ಲಿ ಜಿಲ್ಲೆಯ ಹಲವಾರು ಕಡೆ ಕನ್ನಡ ಶಾಲೆಗಳನ್ನು ಮುಚ್ಚುವ ಕೆಲಸ ಅಲ್ಲಿನ ಸರ್ಕಾರ ಮಾಡುತ್ತಿದೆ. ಅಲ್ಲಿ ಕನ್ನಡದಲ್ಲಿ ಒಂದು ನಾಮಫಲಕವೂ ಸಿಗುವುದಿಲ್ಲ. ಆದರೆ, ನಮ್ಮ ಗಡಿಭಾಗದಲ್ಲಿ ಎಲ್ಲವನ್ನು ಸರಿಯಾಗಿ ಕೊಟ್ಟಾಗಲೂ ಎಂಇಎಸ್, ಮರಾಠಿಗರನ್ನು ಪ್ರಚೋದಿಸುವ ಕೆಲಸ ಮಾಡುತ್ತಿದೆ. ಅದರ ಒಂದು ಭಾಗವಾಗಿ ಈಗ ಪ್ರತಿಭಟನೆ ಮಾಡುತ್ತಿದ್ದು, ಇದಕ್ಕೆ ಯಾವುದೇ ಕಾರಣಕ್ಕೂ ಅನುಮತಿ ಕೊಡಬಾರದು ಎಂದು ಕೋರಿದರು.

ಈಶ್ವರಗೌಡ ಪಾಟೀಲ, ಮಹಾದೇವ ತಳವಾರ, ಎಸ್.ಎಸ್. ಮೂಕನವರ, ಪರೀಧಾ ನದಾಫ್, ಸಲೀಂ ಕಾಲೇಕಾನ, ರಾಹುಲ ಭೋಸಲೆ, ಲಕ್ಷ್ಮಣ ಲಮಾಣಿ, ಆನಂದ ಬಿಲಾವರ, ಸಂತೊಷ ತಳ್ಳಿಮನಿ ಇತರರಿದ್ದರು.

# ವಕೀಲರ ಸಂಘದ ಅಧ್ಯಕ್ಷರಾಗಿ ವಿನಾಯಕ ನಾಯ್ಕ ಆಯ್ಕೆ



**ಅಂಕೋಲಾ, ಜೂ.19 :** ತಾಲೂಕು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ವಿನಾಯಕ ಶಂಕರ ನಾಯ್ಕ ಬೊಬ್ರುವಾಡ, ಕಾರ್ಯದರ್ಶಿಯಾಗಿ ಆರ್.ಪಿ.ಗೌಡ ಅವಿರೋಧವಾಗಿ ಆಯ್ಕೆಗೊಂಡರು. ಹಿರಿಯ ವಕೀಲ ವಿ.ಎಸ್.ನಾಯಕ ಅಧ್ಯಕ್ಷತೆಯಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆಯಿತು. ಗೌರವಾಧ್ಯಕ್ಷರಾಗಿ ನಿತ್ಯಾನಂದ ಕವರಿ, ಉಪಾಧ್ಯಕ್ಷರಾಗಿ ನಾರಾಯಣ ಆರ್. ನಾಯಕ, ಖಜಾಂಚಿಯಾಗಿ ಪ್ರಕೃತಿ ನಾಯಕ, ಸಹಕಾರ್ಯದರ್ಶಿಯಾಗಿ ತೇಜಾ ಬಂಟ ಆಯ್ಕೆಯಾದರು.

## ಮಂತ್ರಿಗಿರಿಗಿಂತ ಜನಬೆಂಬಲ ಹೆಚ್ಚು ಸಂತೋಷ ನೀಡಿದೆ

# ಹೈಕಮಾಂಡ್ ನಿರ್ಧಾರವೇ ಅಂತಿಮ, ಸಚಿವ ಸ್ಥಾನ ಸಿಗದಿದ್ದಕ್ಕೆ ನಿರಾಸೆಯಾಗಿಲ್ಲ: ಎಚ್.ಸಿ.ಮಹದೇವಪ್ಪ



**ಮೈಸೂರು, ಜೂ.19:** ಸಚಿವ ಸ್ಥಾನ ಕೈತಪ್ಪಿರುವ ವಿಚಾರದಲ್ಲಿ ನಿರಾಸೆಯಾಗಿಲ್ಲ. ಈ ವಿಚಾರದಲ್ಲಿ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ಸಚಿವ ಸಂಪುಟ ವಿಸ್ತರಣೆ ಮತ್ತು ಬೆಂಬಲಿಗರ ಪ್ರತಿಭಟನೆಯ ಕುರಿತು ಮಾತನಾಡಿದ ಅವರು, ತಮ್ಮ ನಿಲುವುಗಳನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ಮಾರ್ಮಿಕವಾಗಿ ತೆರೆದಿಟ್ಟರು. "ಸಚಿವ ಸಂಪುಟ ವಿಸ್ತರಣೆ ಪ್ರಕ್ರಿಯೆ ಇನ್ನು ಕೂಡ ಸಂಪೂರ್ಣವಾಗಿ ಮುಗಿದಿಲ್ಲ.

ಹೀಗಾಗಿ ಯಾರೊಬ್ಬರೂ ನಿರಾಸೆಯಾಗುವ ಅವಶ್ಯಕತೆಯಿಲ್ಲ. ಆದರೆ, ಬೀದರ್‌ನಿಂದ ಚಾಮರಾಜನಗರದವರೆಗಿನ ಜನ ಸ್ವಯಂಪ್ರೇರಿತರಾಗಿ ಬಂದು ನನ್ನ ಪರವಾಗಿ ನಿಂತಿದ್ದಾರೆ. ನಾನು ತೆಗೆದುಕೊಂಡ ಸಾಂವಿಧಾನಿಕ ನಿಲುವಿಗೆ ಮೆಚ್ಚುಗೆ ವ್ಯಕ್ತಪಡಿಸಿ, ಬೆಂಬಲ ಸೂಚಿಸಿದ್ದಾರೆ. ಮಂತ್ರಿಗಿರಿಗಿಂತ ಇದು ನನಗೆ ಬಹಳ ಸಂತೋಷ ನೀಡಿದೆ ಎಂದರು.

ಮಂತ್ರಿಗಿರಿಗಿಂತ ದೇಶದಲ್ಲಿ ಸಂವಿಧಾನ ರಕ್ಷಣೆಯಾಗಬೇಕು ಹಾಗೂ ಪ್ರಜಾಪ್ರಭುತ್ವ ಉಳಿಯಬೇಕು ಎನ್ನುವುದು ನನ್ನ ಆದ್ಯತೆ. ನನ್ನ ಸೈದ್ಧಾಂತಿಕ ನಿಲುವು ಯಾವುದೇ ಅಧಿಕಾರ ಅಥವಾ ಮಂತ್ರಿಗಿರಿಗಿಂತ ಮೀರಿದ್ದಾಗಿದೆ. ನಾನೊಬ್ಬ ಉತ್ತಮ ನಾಯಕ, ಸಂವಿಧಾನವನ್ನು ರಕ್ಷಣೆ ಮಾಡುತ್ತೇನೆ ಮತ್ತು ನನ್ನ ನಾಯಕತ್ವ ಸಮಾಜಕ್ಕೆ ಅಗತ್ಯ ಎಂದು ಭಾವಿಸಿ ಜನ ಸ್ವಯಂ ಪ್ರೇರಿತರಾಗಿ, ಶಾಂತಿಯುತವಾಗಿ ಪ್ರತಿಭಟನೆ ಮಾಡಿದ್ದಾರೆ. ದಲಿತ ಸಂಘಟನೆಗಳು ಕರ್ನಾಟಕದ ಇತಿಹಾಸದಲ್ಲಿ ಈ ರೀತಿ ಪ್ರತಿಭಟನೆ ಮಾಡಿಲ್ಲ, ಅವರು ಸದಾ ಸಂವಿಧಾನವನ್ನು ಗೌರವಿಸು ವವರು. ಸಮಾಜದ ಕಲ್ಯಾಣಕ್ಕಾಗಿ ದುಡಿಯುವ ಆ ಸಂಘಟನೆಗಳು ಬೇಸರ ಮಾಡಿಕೊಂಡು ನನಗೆ ಬೆಂಬಲ ನೀಡುತ್ತಿವೆ ಎಂದರೆ, ಅವರ ಸೈದ್ಧಾಂತಿಕ ನಿಲುವಿನ ಪರವಾಗಿ ಈ ನಾಯಕನಿದ್ದಾನೆ ಎಂಬುದು ಅದರ ಒಳ ಅರ್ಥ ಎಂದು ತಿಳಿಸಿದ್ದಾರೆ.

ಹೋರಾಟವನ್ನು ಸಮರ್ಥಿಸಿಕೊಂಡ ಅವರು, ಹೀಗಾಗಿ ಇದನ್ನು ಕೇವಲ ಪ್ರತಿಭಟನೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಬದಲಿಗೆ ಪ್ರಶ್ನಿಸುವುದು ಎನ್ನಬಹುದು. ಇದೊಂದು ಒಳ್ಳೆಯ ಪ್ರಜಾಸತ್ತಾತ್ಮಕ ನಡವಳಿಕೆ. ಜನರ ಈ ಭಾವನೆ ಮತ್ತು ಹೋರಾಟ ಎಲ್ಲರ ಗಮನಕ್ಕೂ ಹೋಗಿದೆ. ಇಂತಹ ಸಂವಿಧಾನ ಬಲವರ್ಧನೆಯ ನಿಲುವಿನ ಹೋರಾಟ ಮುಂದೆಯೂ ಅತ್ಯಗತ್ಯ. ಆದರೆ ಅಂತಿಮವಾಗಿ ಹೈಕಮಾಂಡ್ ಹೇಳಿದ್ದನ್ನೇ ನಾವು ಕೇಳುತ್ತೇವೆ, ಹೈಕಮಾಂಡ್ ನಿರ್ಧಾರವೇ ಫೈನಲ್ ಎಂದು ಮಹದೇವಪ್ಪ ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಪರವಾಗಿ ನಿಲ್ಲಲಿಲ್ಲ ಎಂಬ ಊಹಾಪೋಹಗಳ ಬಗ್ಗೆಯೂ ಪ್ರತಿಕ್ರಿಯಿಸಿದ ಮಹದೇವಪ್ಪ, "ನಾನು ಹಾಗೂ ಸಿದ್ದರಾಮಯ್ಯ ಅವರು ಮೊದಲಿನಿಂದಲೂ ಆಪ್ತರು. ನಾವಿಬ್ಬರೂ ಒಂದೇ ಆಗಿದ್ದು, ಈಗಲೂ ಜೊತೆಯಾಗಿಯೇ ಇದ್ದೇವೆ.ನನ್ನ ಇಡೀ ರಾಜಕೀಯ ಜೀವನದಲ್ಲಿ ನನಗೆ ಮಂತ್ರಿಗಿರಿ ಕೊಡಿ ಎಂದು ನಾನು ಯಾರ ಬಳಿಯೂ ಕೇಳಿಲ್ಲ. ಅಷ್ಟಕ್ಕೂ ಮಂತ್ರಿ ಸ್ಥಾನ ಎಂಬುದು ಕೇಳಿ, ಬೇಡಿ ಪಡೆಯುವಂತಹದ್ದಲ್ಲ; ಅದಕ್ಕೆ ಅದರದೇ ಆದ ಘನತೆ ಮತ್ತು ಗೌರವವಿದೆ" ಎಂದು ಈ ಮೂಲಕ ವದಂತಿಗಳಿಗೂ ತೆರೆ ಎಳೆದರು.

### ನಾನು-ಸಿದ್ದರಾಮಯ್ಯ ಬೇರೆ ಅಲ್ಲ

ಎಲ್ಲವೂ ಮುಗಿದು ಹೋಗಿಲ್ಲ, ಇನ್ನೂ ಸಮಯ ಇದೆ. ಯಾರೂ ಏನೂ ಬೇಸರ ಮಾಡಿಕೊಳ್ಳಬೇಡಿ. ಸಿದ್ದರಾಮಯ್ಯ ನಮ್ಮ ಪರವಾಗಿ ಮಾತನಾಡಿದ್ದಾರೆ ಎಂದು ಶಾಸಕ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು. ಸಚಿವ ಸ್ಥಾನ ಕೊಡದಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ದಲಿತ ಮುಖಂಡರನ್ನು ಉದ್ದೇಶಿಸಿ ಮಾತನಾಡಿ, ನಾನು– ಸಿದ್ದರಾಮಯ್ಯ ಯಾವತ್ತೂ ಬೇರೆ ಬೇರೆ ಅಲ್ಲ. ನನ್ನ ಪರವಾಗಿ ಅವರು, ಅವರ ಪರವಾಗಿ ನಾನು ಇರುತ್ತೇವೆ. ನಮ್ಮದು ಸುದೀರ್ಘ 40 ವರ್ಷಗಳ ಸಂಬಂಧ. ಎಂದಿಗೂ ಒಬ್ಬರನ್ನೊಬ್ಬರು ಬಿಟ್ಟು ಕೊಟ್ಟಿಲ್ಲ ಎಂದರು.

# ಕೊಳಗೇರಿ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿ: ನರಸಿಂಹಮೂರ್ತಿ ಒತ್ತಾಯ



**ರಾಯಚೂರು, ಜೂ. 19:** 2023ರ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಕೊಳಗೇರಿ ನಿವಾಸಿಗಳಿಗೆ ನೀಡಿದ್ದ ಭರವಸೆಗಳನ್ನು ತಕ್ಷಣವೇ ಈಡೇರಿಸಬೇಕು ಎಂದು ಸ್ಲಂ ಜನಾಂದೋಲನ ಕರ್ನಾಟಕ ಸಂಘಟನೆಯ ರಾಜ್ಯ ಘಟಕದ ಸಂಚಾಲಕ ಎ.ನರಸಿಂಹಮೂರ್ತಿ ಒತ್ತಾಯಿಸಿದರು.

ಮೂರು ವರ್ಷಗಳಲ್ಲಿ ಸ್ಲಂ ನಿವಾಸಿಗಳ ಅಭಿವೃದ್ಧಿಗೆ ಸರ್ಕಾರ ನಿರೀಕ್ಷಿತ ಮಟ್ಟದಲ್ಲಿ ಶ್ರಮಿಸಿಲ್ಲ. ಸ್ಲಂ ಜನರಿಗೆ ಹಕ್ಕುಪತ್ರ ವಿತರಣೆ, ಪ್ರಧಾನಮಂತ್ರಿ ವಸತಿ ಯೋಜನೆಯ ಅನುಷ್ಠಾನ, ಮೂಲ ಸೌಕರ್ಯಗಳ ಅಭಿವೃದ್ಧಿ ಸೇರಿ ಹಲವು ಪ್ರಮುಖ ಯೋಜನೆಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ' ಎಂದು ಅಸಮಾಧಾನ ಹೊರಹಾಕಿದರು.

'ನಗರ ಉದ್ಯೋಗ ಖಾತರಿ ಯೋಜನೆ, ಸ್ಲಂ ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯ, ನಗರ ಲ್ಯಾಂಡ್ ಬ್ಯಾಂಕ್, ಉಚಿತ ಮನೆಗಳ ನಿರ್ಮಾಣ ಹಾಗೂ ಬಡಜನರ ಕಲ್ಯಾಣಕ್ಕೆ ಸಂಬಂಧಿಸಿದ ಭರವಸೆಗಳನ್ನು ಸರ್ಕಾರ ಮರೆತಂತಿದೆ. ಜೂನ್ 20ರಂದು ಗದಗದಲ್ಲಿ ನಡೆಯಲಿರುವ ಸ್ಲಂ ಜನಾಂದೋಲನ ಕರ್ನಾಟಕ ಸಂಘಟನೆಯ ರಾಜ್ಯ ಪ್ರತಿನಿಧಿಗಳ ಸಮಾವೇಶದಲ್ಲಿ ಈ ಬೇಡಿಕೆಗಳನ್ನು ಸರ್ಕಾರದ ಮುಂದಿಡಲಾಗುವುದು.

ಸ್ಲಂ ನಿವಾಸಿಗಳ ಕ್ರಿಯಾ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಜನಾರ್ಧನ ಹಳ್ಳಿಬೆಂಚಿ ಮಾತನಾಡಿ, ಇದುವರೆಗೆ ಸುಮಾರು 4 ಸಾವಿರ ಸ್ಲಂ ನಿವಾಸಿಗಳಿಗೆ ಹಕ್ಕುಪತ್ರ ದೊರಕಿಸುವಲ್ಲಿ ವೇದಿಕೆ ಯಶಸ್ವಿಯಾಗಿದೆ.

# ಕಾಳಗಿ-ಚಿತ್ತಾಪುರಕ್ಕೆ ಡಿ.ಸಿ. ಭೇಟಿ: ಸೂರ್ಯನಾರಾಯಣ, ನಾಗಾಯಲ್ಲಮ್ಮ ದೇವಸ್ಥಾನಗಳ ಅಭಿವೃದ್ಧಿ ಪರಿಶೀಲನೆ



**ಕಲಬುರಗಿ, ಜೂ. 19:** ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರು ಜಿಲ್ಲೆಯ ಕಾಳಗಿ ಮತ್ತು ಚಿತ್ತಾಪುರ ತಾಲೂಕುಗಳಿಗೆ ಭೇಟಿ ನೀಡಿ ಐತಿಹಾಸಿಕ ಸೂರ್ಯನಾರಾಯಣ ದೇವಸ್ಥಾನ, ಜೈನ್ ಸ್ಮಾರಕಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಕಾರ್ಯಗಳ ಕುರಿತು ಖುದ್ದಾಗಿ ಪರಿಶೀಲಿಸಿದರು.

ಮೊದಲು ಕಾಳಗಿ ಪಟ್ಟಣದ ಕಾಳೇಶ್ವರ ದೇವಸ್ಥಾನ ಪಕ್ಕದಲ್ಲಿನ ಅನಂತ ಪದ್ಮನಾಭ ಪುಷ್ಕರಣಿ ವೀಕ್ಷಿಸಿದ ಅವರು ನಂತರ ಸುಮಾರು 4.17 ಕೋಟಿ ರೂ. ಕೆ.ಕೆ.ಆರ್.ಡಿ.ಬಿ. ಅನುದಾನದಡಿ ಪುನರ್ ನಿರ್ಮಾಣ ಕಾರ್ಯ ನಡೆಯುತ್ತಿರುವ ಸೂರ್ಯನಾರಾಯಣ ದೇವಸ್ಥಾನಕ್ಕೆ ಭೇಟಿ ನೀಡಿ ಅಲ್ಲಿ ಡಿಸ್ಮೆಂಟಲ್ ಕಾರ್ಯ ಪರಿಶೀಲಿಸಿದರು. ಕಾಲಮಿತಿಯಲ್ಲಿ ದೇವಸ್ಥಾನ ಜೀರ್ಣೋದ್ಧಾರ ಕಾರ್ಯ ಮುಗಿಯಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಿದರು.

ಸ್ಥಳೀಯ ಮುಖಂಡರಾದ ರಾಜೇಶ ಗುತ್ತೇದಾರ ಮತ್ತು ಸಂತೋಷ ಪತಂಗೆ ಅವರು ಡಿ.ಸಿ. ಅವರಿಗೆ ಸ್ಥಳೀಯ ಐತಿಹಾಸಿಕ ದೇವಸ್ಥಾನಗಳ ಮಹತ್ವ ತಿಳಿಸಿದಲ್ಲದೆ ನೀಲಕಂಠೇಶ್ವರ ದೇವಸ್ಥಾನದ ಸಮಗ್ರ ಅಭಿವೃದ್ಧಿಪಡಿಸುವುದರ ಜೊತೆಗೆ ಅಲ್ಲಿನ ಒತ್ತುವರಿ ಜಮೀನು ತೆರವು, ರಸ್ತೆ, ಇನ್ನಿತರ ಮೂಲಸೌಕರ್ಯ ಬಲಪಡಿಸುವಂತೆ ಡಿ.ಸಿ. ಅವರಿಗೆ ಮನವಿ ಪತ್ರ ಸಲ್ಲಿಸಿದರು.

**ನಾಗಾವಿ ಅಭಿವೃದ್ಧಿಯ ಬ್ಲೂಪ್ರಿಂಟ್ ವೀಕ್ಷಣೆ:**

ಕಾಳಗಿ ಪ್ರವಾಸದ ನಂತರ ಐತಿಹಾಸಿಕ ನಾಗಾವಿ ನಾಡು ಚಿತ್ತಾಪುರಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಪಟ್ಟಣದ ನಾಗಾವಿ ಯಲ್ಲಮ್ಮ ದೇವಸ್ಥಾನಕ್ಕೆ ತೆರಳಿ ಪೂಜೆಮಾಡಿ ತಾಯಿಯ ದರ್ಶನ ಪಡೆದರು. ಕೆ.ಕೆ.ಆರ್.ಡಿ.ಬಿ. ಅನುದಾನದಲ್ಲಿ ಸುಮಾರು 6.25 ಕೋಟಿ ರೂ. ವೆಚ್ಚದಲ್ಲಿ ನಾಗಾವಿ ದೇವಸ್ಥಾನ, ನಂದೇಶ್ವರ ದೇವಸ್ಥಾನ, ಸಂಜೀವಿನಿ ಆಂಜನೇಯ ದೇವಸ್ಥಾನ, ಕಾಲಿ ಮಸೀದಿ ಸೇರಿದಂತೆ ಒಟ್ಟು 13 ಸ್ಮಾರಕಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಕಾರ್ಯದ ಬ್ಲೂಪ್ರಿಂಟ್ ವೀಕ್ಷಿಸಿ ವಾಸ್ತುಶಿಲ್ಪಿಗಳಿಂದ ಸಂರಕ್ಷಣಾ ಕಾರ್ಯದ ಕುರಿತು ಸಮಗ್ರ ಮಾಹಿತಿ ಪಡೆದುಕೊಂಡರು.

ಕಾಮಗಾರಿಗೆ ಈಗಾಗಲೇ ಆಡಳಿತಾತ್ಮಕ ಮಂಜೂರಾತಿ ದೊರೆತಿರುವುದರಿಂದ ಕೂಡಲೆ ಜಿಲ್ಲಾ ಉಸ್ತುವಾರಿ ಸಚಿವರಿಂದ ದಿನಾಂಕ ಪಡೆದು ಸಂರಕ್ಷಣಾ ಕಾರ್ಯಕ್ಕೆ ಚಾಲನೆ ನೀಡಬೇಕು ಎಂದು ಕರ್ನಾಟಕ ಪುರಾತತ್ವ ಸಂಗ್ರಹಾಲಯಗಳ ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕಿ ಮಂಜುಳಾ ಅವರಿಗೆ ನಿರ್ದೇಶನ ನೀಡಿದ ಡಿ.ಸಿ. ಅವರು, ನಂತರ ನಂದೇಶ್ವರ ದೇವಸ್ಥಾನ, 60 ಕಂಬಗಳ ದೇವಸ್ಥಾನ, ಕಾಲಿ ಮಸೀದಿಗೂ ಭೇಟಿ ಕೊಟ್ಟರು.

# ನಾಳೆ ನೀಟ್ ಯುಜಿ ಮರುಪರೀಕ್ಷೆಗೆ ಸಕಲ ಸಿದ್ಧತೆ

## ಪರೀಕ್ಷೆ ಸುಸೂತ್ರವಾಗಿ ನಡೆಸುವಂತೆ ಕಲಬುರಗಿ ಜಿಲ್ಲಾಧಿಕಾರಿ ಸೂಚನೆ

**ಕಲಬುರಗಿ, ಜೂ. 19:** ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ದೇಶಾದ್ಯಂತ ಸಂಚಲನ ಮೂಡಿಸಿದ್ದ ವೈದ್ಯಕೀಯ ಕೋರ್ಸ್ ಪ್ರವೇಶದ ನೀಟ್ ಮರು ಪರೀಕ್ಷೆ ಇದೇ ಜೂನ್ 21ರಂದು ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳ ಸಭೆ ಕರೆದು, ಎಲ್ಲಿಯೂ ಲೋಪವಾಗದಂತೆ ಪರೀಕ್ಷೆ ಸುಸೂತ್ರವಾಗಿ ಹಾಗೂ ಕಟ್ಟುನಿಟ್ಟಾಗಿ ನಡೆಸುವಂತೆ ಅಧಿಕಾರಿಗಳಿಗೆ ಡಿ.ಸಿ ಇಕ್ರಮ್ ಶರೀಫ್ ಸೂಚನೆ ನೀಡಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪರೀಕ್ಷೆ ಹಿನ್ನೆಲೆಯಲ್ಲಿ ಅಧಿಕಾರಿಗಳು ಮತ್ತು ಪರೀಕ್ಷಾ ಕೇಂದ್ರದ ಮುಖ್ಯಸ್ಥರೊಂದಿಗೆ ಪೂರ್ವಭಾವಿಸಭೆ ನಡೆಸಿದ ಅವರು ನಗರದಾದ್ಯಂತ 20 ಕೇಂದ್ರಗಳಲ್ಲಿ ಅಂದು ಪರೀಕ್ಷೆ ನಡೆಯಲಿದ್ದು, ಸುಮಾರು 9 ಸಾವಿರಕ್ಕೂ ಹೆಚ್ಚಿನ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಹೆಸರು ನೊಂದಾಯಿಸಿ ಕೊಂಡಿದ್ದಾರೆ ಎಂದರು.

ಪರೀಕ್ಷೆಗೆ ಮುನ್ನವೇ ನಿಗದಿತ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ, ಅಭ್ಯರ್ಥಿ ಬರೆಯಲು ಅನುಕೂಲವಾಗುವಂತೆ ಆಸನ ವ್ಯವಸ್ಥೆ, ವಿದ್ಯುತ್, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಲಭ್ಯ ಇರುವಂತೆ ನೋಡಿಕೊಳ್ಳಬೇಕು ಎಂದರು.

ಪರೀಕ್ಷೆ ಹಿನ್ನೆಲೆಯಲ್ಲಿ ಕೇಂದ್ರದ ಸುತ್ತ 200 ಮೀಟರ್ ಪ್ರದೇಶ ನಿಷೇಧಾಜ್ಞೆ ಇರಲಿದ್ದು, ಎಲ್ಲಿಯೂ ಅಕ್ರಮಕ್ಕೆ ಅವಕಾಶವಿಲ್ಲ. ಪೊಲೀಸ್ ಇಲಾಖೆ ಕೇಂದ್ರಗಳ ಸುತ್ತ ಹೆಚ್ಚಿನ ಭದ್ರತೆ ಒದಗಿಸಬೇಕು. ವಿದ್ಯಾರ್ಥಿಗಳು ಮೊಬೈಲ್ ಸೇರಿದಂತೆ ಯಾವುದೇ ಎಲೆಕ್ಟ್ರಾನಿಕ್ ಉಪಕರಣ ಪರೀಕ್ಷಾ ಕೇಂದ್ರಕ್ಕೆ ತರುವಂತಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

# ಕ್ಷೀರಭಾಗ್ಯ, ಮಧ್ಯಾಹ್ನ ಉಪಾಹಾರಕ್ಕೆ ಬೃಹತ್ ಅನುದಾನ

## 2026-27ನೇ ಸಾಲಿನ ಮೊದಲ ತ್ರೈಮಾಸಿಕಕ್ಕೆ 21822 ಲಕ್ಷ ಹಂಚಿಕೆ ಮಾಡಿ ಸರ್ಕಾರ ಆದೇಶ





**ಬೆಂಗಳೂರು, ಜೂ.19:** ರಾಜ್ಯ ಸರ್ಕಾರವು 2026–27ನೇ ಸಾಲಿನಲ್ಲಿ ಕ್ಷೀರಭಾಗ್ಯ ಯೋಜನೆ ಹಾಗೂ 9ರಿಂದ 10ನೇ ತರಗತಿ ಮಕ್ಕಳಿಗೆ ಮಧ್ಯಾಹ್ನ ಉಪಹಾರ ಯೋಜನೆ ಸೇರಿದಂತೆ ಶಾಲಾ ಶಿಕ್ಷಣ ಇಲಾಖೆಯಡಿ ನಡೆಯುತ್ತಿರುವ ವಿವಿಧ ಪೌಷ್ಟಿಕ ಆಹಾರ ಕಾರ್ಯಕ್ರಮಗಳಿಗೆ ಮೊದಲ ತ್ರೈಮಾಸಿಕ ಅವಧಿಗೆ ಅಗತ್ಯವಿರುವ ಒಟ್ಟು 21,822.37 ಲಕ್ಷ ರೂ. ಅನುದಾನ ಹಂಚಿಕೆ ಮಾಡಿ ಆದೇಶ ಹೊರಡಿಸಿದೆ.

ಈ ಅನುದಾನವು ಶಾಲಾ ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಜ್ಯ ಸರ್ಕಾರದ ಪ್ರಮುಖ ಸಾಮಾಜಿಕ ಕಲ್ಯಾಣ ಯೋಜನೆಗಳ ಭಾಗವಾಗಿದೆ. ಕ್ಷೀರಭಾಗ್ಯ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರತಿದಿನ ಹಾಲು ವಿತರಣೆ ಮಾಡಲಾಗುತ್ತದೆ. ಮಧ್ಯಾಹ್ನ ಉಪಹಾರ ಯೋಜನೆಯಡಿ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ಒದಗಿಸಲಾಗುತ್ತದೆ.

ರಾಜ್ಯ ಸರ್ಕಾರದ ಆದೇಶದ ಪ್ರಕಾರ, ಬೆಂಗಳೂರು ನಗರಕ್ಕೆ 7,466.90 ಲಕ್ಷ ರೂ., ಮೈಸೂರು ಜಿಲ್ಲೆಗೆ 4,128.87 ಲಕ್ಷ ರೂ., ತುಮಕೂರು ಜಿಲ್ಲೆಗೆ 4,528.53 ಲಕ್ಷ ರೂ., ಬಿದರ್ ಜಿಲ್ಲೆಗೆ 3,431.35 ಲಕ್ಷ ರೂ., ಕೋಲಾರ ಜಿಲ್ಲೆಗೆ 2,161.96 ಲಕ್ಷ ರೂ., ಚಿಕ್ಕಮಗಳೂರು ಜಿಲ್ಲೆಗೆ 3,552.97 ಲಕ್ಷ ರೂ. ಹಾಗೂ ಬೆಂಗಳೂರು ಗ್ರಾಮಾಂತರಕ್ಕೆ 1,516.65 ಲಕ್ಷ ರೂ.ಅನುದಾನ ನೀಡಲಾಗಿದೆ. ರಾಜ್ಯ ಸರ್ಕಾರದ ಈ ಕ್ರಮವು ಶಾಲಾ ಮಕ್ಕಳ ಪೌಷ್ಟಿಕತೆ, ಆರೋಗ್ಯ ಮತ್ತು ಹಾಜರಾತಿ ಪ್ರಮಾಣವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಈ ಯೋಜನೆಗಳ ಅನುಷ್ಠಾನಕ್ಕಾಗಿ ಜಿಲ್ಲಾ ಪಂಚಾಯತ್‌ಗಳು, ತಾಲೂಕು ಪಂಚಾಯತ್‌ಗಳು ಹಾಗೂ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ.

ರಾಜ್ಯ ಸರ್ಕಾರವು ಈ ಯೋಜನೆಗಳ ಅನುಷ್ಠಾನದಲ್ಲಿ **New Decision Support System** ತಂತ್ರಾಂಶವನ್ನು ಬಳಸುವ ನಿರ್ಧಾರ ಕೈಗೊಂಡಿದ್ದು, ಇದರ ಮೂಲಕ ಪ್ರಗತಿ ವರದಿಗಳನ್ನು **Key Performance Indicator** ಆಧಾರದ ಮೇಲೆ ಸಂಗ್ರಹಿಸಲಾಗುತ್ತದೆ.

ಶಾಲಾ ಶಿಕ್ಷಣ ಇಲಾಖೆ, ಪ್ರಾಥಮಿಕ ಶಿಕ್ಷಣ ನಿರ್ದೇಶನಾಲಯ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಪ್ರತಿ ತಿಂಗಳು ಯೋಜನೆಗಳ ಪ್ರಗತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. ಈ ವರದಿಗಳು **SATS** ತಂತ್ರಾಂಶದ ಮೂಲಕ ಸಂಗ್ರಹಿಸಲ್ಪಡುತ್ತವೆ.

ಅಧಿಕಾರಿಗಳು ಶಾಲಾ ಮಟ್ಟದಲ್ಲಿ ಹಾಲು ವಿತರಣೆ, ಆಹಾರ ತಯಾರಿ, ವಿದ್ಯಾರ್ಥಿಗಳ ಹಾಜರಾತಿ ಮತ್ತು ಪೌಷ್ಟಿಕತೆ ಪ್ರಮಾಣದ ಮಾಹಿತಿಯನ್ನು **Facial Attendance System** ಮೂಲಕ ದಾಖಲಿಸಬೇಕಾಗಿದೆ. ರಾಜ್ಯ ಸರ್ಕಾರದ ಆದೇಶದ ಪ್ರಕಾರ, ಈ ಯೋಜನೆಗಳ ಅನುಷ್ಠಾನದಲ್ಲಿ ಯಾವುದೇ ವಿಳಂಬವಾಗದಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ನಿಗಾ ವಹಿಸಬೇಕಾಗಿದೆ. ಶಾಲಾ ಶಿಕ್ಷಣ ಇಲಾಖೆ ಈ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ ಪ್ರತಿ ಶಾಲೆಗೆ ಅಗತ್ಯವಾದ ಸಾಮಗ್ರಿಗಳು, ಹಾಲು ಪೂರೈಕೆ, ಆಹಾರ ಪದಾರ್ಥಗಳ ಖರೀದಿ ಮತ್ತು ವಿತರಣೆ ಪ್ರಕ್ರಿಯೆಗಳನ್ನು **Indent Monitoring System** ಮೂಲಕ ನಿಗಾ ವಹಿಸಲಿದೆ. ಅಧಿಕಾರಿಗಳು ಈ ಯೋಜನೆಗಳ ಪ್ರಗತಿಯನ್ನು ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಪರಿಶೀಲಿಸಿ, ವರದಿಗಳನ್ನು ಶಿಕ್ಷಣ ಇಲಾಖೆಗೆ ಸಲ್ಲಿಸಬೇಕಾಗಿದೆ. ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು, ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಈ ಯೋಜನೆಗಳ ಅನುಷ್ಠಾನಕ್ಕೆ ನೇರವಾಗಿ ಹೊಣೆಗಾರರಾಗಿದ್ದಾರೆ.

# ವಿದ್ಯಾವಂತ ವಂಚಕರ ಹೆಚ್ಚಳ: ಉಪಲೋಕಾಯುಕ್ತ ನ್ಯಾ. ವೀರಪ್ಪ ಕಳವಳ



ಬೀದರ್, ಜೂ.19: ಸಮಾಜದಲ್ಲಿ ವಿದ್ಯಾವಂತ ಮೋಸಗಾರರೇ ಹೆಚ್ಚುತ್ತಿದ್ದು ಭ್ರಷ್ಟ ಅಧಿಕಾರಿಗಳಿಗೆ ಲೋಕಾಯುಕ್ತ ಸಂಸ್ಥೆ ತಕ್ಕಶಿಕ್ಷೆ ನೀಡುತ್ತಿದೆ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅಭಿಪ್ರಾಯಪಟ್ಟರು.

ನಗರದ ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಜಿಲ್ಲೆಯಲ್ಲಿ ದಾಖಲಾಗಿರುವ ದೂರುಗಳ ವಿಚಾರಣೆ ಕಾರ್ಯಕ್ರಮ ವನ್ನು ಉದ್ಘಾಟಿಸಿ ಮಾತನಾಡಿದರು.

ಲೋಕಾಯುಕ್ತ ಸಂಸ್ಥೆ ಇಡೀ ರಾಷ್ಟ್ರದಲ್ಲಿ ಬಲಿಷ್ಠ ಹಾಗೂ ಸ್ವಾಯತ್ತ ಸಂಸ್ಥೆ. ಈ ಹಿಂದೆ ರಾಜ್ಯದ ಮುಖ್ಯಮಂತ್ರಿ ಹಾಗೂ ಸಚಿವರನ್ನು ಜೈಲಿಗೆ ಕಳುಹಿಸಿದ ಸಂಸ್ಥೆ. ಸಾರ್ವಜನಿಕರಿಗೆ ಯಾವುದೇ ತೊಂದರೆಯಾದಲ್ಲಿ ಲೋಕಾಯುಕ್ತ ಎದುರು ದೂರು ದಾಖಲಿಸಿದಲ್ಲಿ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಸಾರ್ವಜನಿಕ ಹಿತಾಸಕ್ತಿ ಇದ್ದಲ್ಲಿ ಸ್ವಯಂಪ್ರೇರಿತ ದೂರು ದಾಖಲಿಸಿ ನ್ಯಾಯ ಒದಗಿಸಿದ ಅನೇಕ ಉದಾಹರಣೆಗಳಿವೆ ಎಂದರು.

ಭ್ರಷ್ಟಚಾರದಲ್ಲಿ ತೊಡಗಿರುವ ಹಾಗೂ ಆದಾಯ ಮೀರಿ ಆಸ್ತಿ ಗಳಿಸಿರುವ ಅನೇಕ ಅಧಿಕಾರಿಗಳಿಗೆ ಲೋಕಾಯುಕ್ತ ಸಂಸ್ಥೆಯು ದಾಳಿ ನಡೆಸಿದೆ. ಅಧಿಕಾರಿಗಳು ತಮ್ಮ ಕಾರ್ಯಗಳನ್ನು ಜವಾಬ್ದಾರಿಯುತವಾಗಿ ಮಾಡದಿದ್ದಲ್ಲಿ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಕೆ ನೀಡಿದರು.ತಾವು ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಈವರೆಗೆ ಊರೂರು ಸಂಚರಿಸಿ 1.8 ಕೋಟಿ ಪ್ರಕರಣಗಳನ್ನು ಬಗೆಹರಿಸಲಾಗಿದೆ, ಅಧಿಕಾರಿಗಳು ಹಾಗೂ ಸಾರ್ವಜನಿಕರು ಸರಿಯಾಗಿ ಸ್ಪಂದಿಸಿದರೆ ಸಮಸ್ಯೆಗಳನ್ನು ಬಗೆಹರಿಸ ಬಹುದಾಗಿದೆ ಎಂದರು.

ಸಾರ್ವಜನಿಕರು ಹಾಗೂ ಅಧಿಕಾರಿಗಳು ತಮ್ಮ ಹಕ್ಕುಗಳು ಹಾಗೂ ಕರ್ತವ್ಯಗಳನ್ನು ನಿಭಾಯಿಸ ಬೇಕು. ಸಾರ್ವಜನಿಕರು ದೂರು ದಾಖಲಿಸಿದ ನಂತರ ಹೆದರದೆ ತಾರ್ಕಿಕ ಅಂತ್ಯದವರೆಗೆ ಸ್ಪಂದಿಸಬೇಕು. ಕೆಲ ದೂರುದಾರರು ಅರ್ಧಕ್ಕೆ ಹಿಂಜರಿಯುತ್ತಾರೆ. ಅನ್ಯಾಯದ ವಿರುದ್ಧ ಸಂಘ–ಸಂಸ್ಥೆಗಳು ಹೋರಾಡ ಬೇಕು ಎಂದು ಕರೆ ನೀಡಿದರು.

# ನೊಂದ ಕುಟುಂಬಕ್ಕೆ ಶಾಸಕ ಚವ್ಹಾಣ ಸಾಂತ್ವನ



**ಬೀದರ್, ಜೂ. 19:** ಜಿಲ್ಲೆಯ ಔರಾದ್ ತಾಲೂಕಿನ ಶೆಂಬೆಳ್ಳಿ ಗ್ರಾಮದ ವೈಜಿನಾಥ ಮೆತ್ರೆ ಅವರ ಕುಟುಂಬದ ಇಬ್ಬರು ಮಕ್ಕಳ ಸಾವು ಸಂಭವಿಸಿದ ದುರ್ಘಟನೆಯ ಹಿನ್ನೆಲೆ ಶಾಸಕ ಪ್ರಭು ಚವ್ಹಾಣ ಅವರು ಕುಟುಂಬದ ಸದಸ್ಯರಿಗೆ ಭೇಟಿ ನೀಡಿ ಸಾಂತ್ವನ ಹೇಳಿದರು.

ಈ ಕುಟುಂಬವು ಜೀವನೋಪಾಯಕ್ಕಾಗಿ ಕಳೆದ 8–10 ವರ್ಷಗಳಿಂದ ಹೈದರಾಬಾದ್‌ನಲ್ಲಿ ನೆಲೆಸಿದೆ. ವೈಜಿನಾಥ ಮೆತ್ರೆ ಅವರ ಪತ್ನಿ ಹಾಗೂ ಐವರು ಮಕ್ಕಳು ಮಾವಿನ ಹಣ್ಣು ಸೇವಿಸಿದ ಬಳಿಕ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದರು. ಅವರಲ್ಲಿ ಪುತ್ರಿಯರಾದ ಭುವನೇಶ್ವರಿ ಮತ್ತು ಸುಧಾರಾಣಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಉಳಿದ ಮೂವರು ಬಾಲಕಿಯರು ಚೇತರಿಸಿಕೊಂಡಿದ್ದಾರೆ.

ದುಃಖಿತ ಕುಟುಂಬದ ಮನೆಗೆ ಭೇಟಿ ನೀಡಿದ ಶಾಸಕ ಪ್ರಭು ಚವ್ಹಾಣ ಅವರು ಕುಟುಂಬದ ಸದಸ್ಯರೊಂದಿಗೆ ಮಾತನಾಡಿ, ಘಟನೆಯ ಬಗ್ಗೆ ವಿವರಣೆ ಪಡೆದರು. ಮನೆಯವರು ಮುಕ್ತವಾಗಿ ಮಾಹಿತಿಯನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಶಾಸಕರು ಕುಟುಂಬಸ್ಥರಿಗೆ ಆಸ್ಪತ್ರೆಯ ಖರ್ಚು ವೆಚ್ಚ ಮತ್ತು ಕುಟುಂಬ ನಿರ್ವಹಣೆಗೆ ವೈಯಕ್ತಿಕ ಧನಸಹಾಯ ನೀಡಿದರು. ಉಳಿದ ಮೂವರು ಬಾಲಕಿಯರ ಶಿಕ್ಷಣ, ಮದುವೆ ಹಾಗೂ ಇತರೆ ಅಗತ್ಯಗಳ ಜವಾಬ್ದಾರಿಯನ್ನು ವಹಿಸಿಕೊಂಡು ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು. "ಈ ಘಟನೆ ತಿಳಿದು ನನಗೆ ತುಂಬಾ ನೋವಾಗಿದೆ. ಬಾಲಕಿಯರ ತಾಯಿಯ ಆರೋಗ್ಯವು ಚೆನ್ನಾಗಿರುತ್ತಿಲ್ಲವೆಂದು ಗೊತ್ತಾಗಿದೆ. ಇಬ್ಬರು ಮಕ್ಕಳನ್ನು ಕಳೆದುಕೊಂಡಿರುವ ಈ ಕುಟುಂಬ ತೀವ್ರ ದುಃಖದಲ್ಲಿದೆ. ಭಗವಂತನು ಕುಟುಂಬಸ್ಥರಿಗೆ ಈ ದುಃಖವನ್ನು ಸಹಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ನಾನು ಸದಾ ನಿಮ್ಮ ಕುಟುಂಬದೊಂದಿಗೆ ಇರುತ್ತೇನೆ. ಯಾವುದೇ ಕಾರಣಕ್ಕೂ ಹೆದರಬೇಡಿ" ಎಂದು ಧೈರ್ಯ ತುಂಬಿದರು.

ತೀವ್ರ ಅಸ್ವಸ್ಥಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಾಲಕಿಯ ಆರೋಗ್ಯದ ಕುರಿತು ವೈದ್ಯರಿಂದ ಮಾಹಿತಿ ಪಡೆದಿದ್ದೇನೆ. ಅಗತ್ಯ ಚಿಕಿತ್ಸೆಯನ್ನು ಸಮರ್ಪಕವಾಗಿ ನೀಡುವಂತೆ ಸೂಚಿಸಿದ್ದೇನೆ. ಕುಟುಂಬದ ಸದಸ್ಯರೊಂದಿಗೆ ದೂರವಾಣಿ ಮೂಲಕವೂ ಮಾತನಾಡಿ ಧೈರ್ಯ ತುಂಬುವ ಕೆಲಸ ಮಾಡಿದ್ದೇನೆ. ಮುಂದೆಯೂ ಉಳಿದ ಮಕ್ಕಳನ್ನು ವೈಯಕ್ತಿಕವಾಗಿ ದತ್ತು ಸ್ವರೂಪದಲ್ಲಿ ನೋಡಿಕೊಳ್ಳುತ್ತೇನೆ. ಅವರ ಶಿಕ್ಷಣ, ಮದುವೆ ಸೇರಿದಂತೆ ಎಲ್ಲ ಅಗತ್ಯ ಕಾರ್ಯಗಳಿಗೆ ನೆರವಾಗುತ್ತೇನೆ.

ಹೈದರಾಬಾದ್‌ನಲ್ಲಿ ವಾಸವಾಗಿದ್ದ ಕಾರಣ ಕುಟುಂಬಕ್ಕೆ ಸ್ವಂತ ಮನೆ ಇಲ್ಲ ಎಂಬ ಮಾಹಿತಿ ದೊರೆತಿದ್ದು, ಅವರಿಗೆ ಸರ್ಕಾರದಿಂದ ಮನೆ ನಿರ್ಮಿಸಿಕೊಡಲು ಕ್ರಮ ವಹಿಸುವುದಾಗಿ ಹೇಳಿದರು.

# ಗ್ಯಾರಂಟಿ ಪರಿಶೀಲನಾ ಸಮಿತಿ, ಶಕ್ತಿ ಯೋಜನೆ ಅನುಷ್ಠಾನ ಪರಿಶೀಲನೆ



**ಕಲಬುರಗಿ, ಜೂ. 19:** ಕೇಂದ್ರ ಹಾಗೂ ಸೂಪರ್ ಮಾರ್ಕೆಟ್ ಬಸ್‌ನಿಲ್ದಾಣಗಳಿಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷೆ ಚಂದ್ರಿಕಾ ಪರಮೇಶ್ವರ್ ಹಾಗೂ ಉಪಾಧ್ಯಕ್ಷ ವಿಜಯಕುಮಾರ ಕಟ್ಟಿಮನಿ ನೇತೃತ್ವದಲ್ಲಿ ಸದಸ್ಯರ ತಂಡ ಭೇಟಿ ನೀಡಿ, ಶಕ್ತಿ ಯೋಜನೆ ಜಾರಿ ಹಾಗೂ ಪ್ರಯಾಣಿಕರ ಮೂಲಸೌಲಭ್ಯ ಪರಿಶೀಲನೆ ನಡೆಸಿತು.

ಕೇಂದ್ರ ಬಸ್ ನಿಲ್ದಾಣದ ಆವರಣದಲ್ಲಿ ಸಿಸಿಟಿವಿ ಕ್ಯಾಮರಾಗಳ ಕಾರ್ಯನಿರ್ವಹಣೆ, ಮಹಿಳೆಯರ ವಿಶ್ರಾಂತಿ ಕೊಠಡಿ, ಶಿಶುಗಳಿಗೆ ಹಾಲುಣಿಸುವ ಕೊಠಡಿ (ಫೀಡಿಂಗ್ ರೂಮ್), ಮಹಿಳಾ ಶೌಚಗೃಹಗಳ ವ್ಯವಸ್ಥೆ ಅವಲೋಕಿಸಿತು. ಜತೆಗೆ ನಿಲ್ದಾಣದ ಕ್ಯಾಂಟೀನ್ ಮತ್ತು ಬೇಕರಿ ಮಳಿಗೆಗಳಿಗೆ ಭೇಟಿ ನೀಡಿ ಆಹಾರ ಪದಾರ್ಥಗಳ ಗುಣಮಟ್ಟ, ಸ್ವಚ್ಛತೆ ಹಾಗೂ ನೈರ್ಮಲ್ಯದ ಮಾನದಂಡ ಪರಿಶೀಲಿಸಿತು.

ಶಕ್ತಿ ಯೋಜನೆಯಡಿ ಉಚಿತ ಪ್ರಯಾಣದ ಸೌಲಭ್ಯ ಪಡೆಯುತ್ತಿರುವ ಮಹಿಳಾ ಪ್ರಯಾಣಿಕರೊಂದಿಗೆ ಪದಾಧಿಕಾರಿಗಳು ನೇರ ಸಂವಾದ ನಡೆಸಿ, ಯೋಜನೆ ಉಪಯುಕ್ತತೆಯ ಕುರಿತು ಅಭಿಪ್ರಾಯ ಆಲಿಸಿದರು.

**ಶಕ್ತಿ ಯೋಜನೆ ಇನ್ನಷ್ಟು ಪರಿಣಾಮಕಾರಿ ಜಾರಿಗೊಳಿಸಲು ಹಾಗೂ ಅರ್ಹ ಫಲಾನುಭವಿಗಳಿಗೆ ಯಾವುದೇ ತೊಂದರೆಯಾಗದಂತೆ ಮತ್ತು ಸುಗಮವಾಗಿ ಯೋಜನೆ ತಲುಪಲು ಅಗತ್ಯ ಕ್ರಮ ಕೈಗೊಳ್ಳಬೇಕು.**

**– ಚಂದ್ರಿಕಾ ಪರಮೇಶ್ವರ್, ಜಿಲ್ಲಾಧ್ಯಕ್ಷೆ, ಗ್ಯಾರಂಟಿ ಸಮಿತಿ.**

# ಪ್ರಜಾಪ್ರಭುತ್ವಕ್ಕೆ ಶಕ್ತಿ ತುಂಬಿದ ಎಸ್‌ಐಆರ್: ಶಾಸಕ ಡಾ.ಬೆಲ್ದಾಳೆ



**ಬೀದರ್, ಜೂ. 19:** ಕೇಂದ್ರ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರ ಪಟ್ಟಿಯ ತೀವ್ರ ವಿಶೇಷ ಪರಿಷ್ಕರಣೆಯು (ಎಸ್‌ಐಆರ್) ಮತಪಟ್ಟಿ ಶುದ್ಧೀಕರಣ ಮಾಡುವ ಅತ್ಯಂತ ಪ್ರಮುಖ ಪ್ರಕ್ರಿಯೆಯಾಗಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಶಕ್ತಿ ತುಂಬುವ ಹಾಗೂ ಸಂವಿಧಾನ ಆಶಯಗಳನ್ನು ಮತ್ತಷ್ಟು ಗಟ್ಟಿಗೊಳಿಸುವ ಮಹತ್ತರ ಅಭಿಯಾನವಾಗಿದೆ ಎಂದು ದಕ್ಷಿಣ ಶಾಸಕ ಹಾಗೂ ಬಿಜೆಪಿ ರಾಜ್ಯ ಕಾರ್ಯ ದರ್ಶಿ ಡಾ.ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ನಗರದ ಬೆಲ್ದಾಳೆ ಫಂಕ್ಷನ್ ಹಾಲ್‌ನಲ್ಲಿ ಬಿಜೆಪಿ ದಕ್ಷಿಣ ಮಂಡಲ ಆಯೋಜಿಸಿದ್ದ ಎಸ್‌ಐಆರ್ ಕುರಿತು ಬೂತ್ ಮಟ್ಟದ ಪ್ರಮುಖರ ವಿಶೇಷ ಸಭೆ ಉದ್ಘಾಟಿಸಿದ ಅವರು, ಪ್ರಜಾಪ್ರಭುತ್ವಕ್ಕೆ ಮತದಾರರ ಪಟ್ಟಿಯೇ ಆಧಾರಸ್ತಂಭ ವಾಗಿರುತ್ತದೆ. ಈ ಪಟ್ಟಿಯಲ್ಲಿ ದೋಷಗಳು, ನಕಲಿ ಹೆಸರುಗಳು, ದ್ವಂದ್ವ ಅಥವಾ ಡಬಲ್ ನೋಂದಣಿ, ಅನ ರ್ಹರ ಹೆಸರುಗಳು ಇದ್ದರೆ ಚುನಾ ವ ಣೆಯ ಪಾರದರ್ಶಕತೆ ಹಾಗೂ ನೈತಿಕತೆ ಮೇಲೆ ಪ್ರಶ್ನೆ ಚಿಹ್ನೆ ಮೂಡುತ್ತದೆ. ಹೀಗಾಗಿ ಎಸ್‌ಐಆರ್ ಅಗತ್ಯವಿದೆ. ಇದು ಸಂವಿಧಾನಬದ್ಧ ಮತದಾನದ ಹಕ್ಕಿನ ಗೌರವ ಕಾಪಾಡುವ ಪವಿತ್ರ ಕಾರ್ಯ ವಾಗಿದೆ. ಮತದಾರರ ಪಟ್ಟಿ ಶುದ್ಧವಾಗಿದ್ದರೆ ಮಾತ್ರ ಸರಿಯಾದ ಪ್ರತಿನಿಧಿಗಳು ಆಯ್ಕೆಯಾಗುತ್ತಾರೆ ಎಂದರು.

ಪ್ರತಿ ಮತದಾರರ ಮತಕ್ಕೂ ಸಮಾನ ಮೌಲ್ಯ ಇರಬೇಕು. ಅನರ್ಹ ಮತದಾರರು ಪಟ್ಟಿಯಲ್ಲಿ ಉಳಿದರೆ ಅರ್ಹರ ಹಕ್ಕು ಹಾನಿಯಾಗುತ್ತದೆ. ಇದನ್ನು ತಡೆಯಲು ಎಸ್ ಐಆರ್ ಪರಿಣಾ ಮಕಾರಿ ಸಾಧನವಾಗಿದೆ. ಹೀಗಾಗಿ ಅರ್ಹರಿಗೆ ಮತದಾನದ ಹಕ್ಕು ಸಿಗಬೇಕು. ಅನರ್ಹರಿಗೆ ಕೊಕ್ ಆಗ ಬೇಕು. ಇದು ನಮ್ಮೆಲ್ಲರ ಘೋಷಣೆ, ಧ್ಯೇಯ ವಾಕ್ಯ ಆಗಬೇಕು ಎಂದು ಅವರು ಹೇಳಿದರು.

ಕೇಂದ್ರ ಚುನಾವಣಾ ಆಯೋಗ ಕೈಗೊಂಡ ಎಸ್‌ಐಆರ್ ಬಹಳ ದಿಟ್ಟ ಹಾಗೂ ಶ್ಲಾಘನೀಯ ಕಾರ್ಯವಾಗಿದೆ. ಈಗಾಗಲೇ ದೇಶದ ಹಲವು ರಾಜ್ಯಗಳಲ್ಲಿ ಇದು ಬಹಳ ಯಶಸ್ವಿಯಾಗಿ ನಡೆದಿದೆ. ಇದು ನಮ್ಮಲ್ಲಿಯೂ ಯಶಸ್ವಿಯಾಗಿ ನಡೆಯುವಲ್ಲಿ ಪ್ರತಿ ಬೂತ್ ಮಟ್ಟದ ಕಾರ್ಯಕರ್ತರ ಪಾತ್ರ ಬಹಳ ಮುಖ್ಯವಾಗಿದೆ. ಮತಪಟ್ಟಿ ಶುದ್ಧೀ ಕರಣದ ಮೂಲಕ ಅನರ್ಹ ಮತದಾರರಿಗೆ 'ಕೊಕ್' ನೀಡುವ ಕ್ರಮ ಜನತಂತ್ರದ ಹಿತದಿಂದ ಕೂಡಿದೆ. ಎಸ್‌ಐಆರ್‌ನಿಂದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ಜನರ ವಿಶ್ವಾಸ ಹೆಚ್ಚಾಗಲಿದೆ. ತಂತ್ರಜ್ಞಾನ ಬಳಸಿಕೊಂಡು ಮತದಾರರ ನಿಖರ ಪರಿಶೀಲನೆ ನಡೆಸಲಾಗುತ್ತಿದೆ. ಮನೆ ಮನೆಗೆ ಭೇಟಿ, ದಾಖಲೆಗಳ ಪರಿಶೀಲನೆ, ಆನ್‌ಲೈನ್ ತಿದ್ದುಪಡಿ ವ್ಯವಸ್ಥೆ, ಇವೆಲ್ಲವೂ ಪಾರದರ್ಶಕತೆ ತೋರಿಸು ತ್ತದೆ. "ಶುದ್ಧ ಮತಪಟ್ಟಿ ಎಂದರೆ ಶುದ್ಧ ಚುನಾವಣೆ" ಎಂಬುದು ಪ್ರತಿ ಯೊಬ್ಬರೂ ಅರಿಯಬೇಕು. ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಆಶಯ ಸಹ ಇದೇ ಆಗಿತ್ತು ಎಂದರು.

ಶುದ್ಧ ಚುನಾವಣೆ ಎಂದರೆ ಬಲಿಷ್ಠ ಪ್ರಜಾಪ್ರಭುತ್ವ. ಇದಕ್ಕೆ ಎಸ್‌ಐಆರ್ ಪ್ರಮುಖ ಕೊಂಡಿಯಾಗಿದೆ. ನಮ್ಮ ಸಂವಿಧಾನ ಸಮಾನತೆ, ನ್ಯಾಯ ಮತ್ತು ಪಾರದರ್ಶಕತೆ ಒತ್ತಿ ಹೇಳುತ್ತದೆ. ಎಸ್‌ಐಆರ್ ಸಹ ಈ ಮೌಲ್ಯಗಳನ್ನು ಜಾರಿಗೆ ತರುತ್ತದೆ. ಪ್ರತಿ ನಾಗರಿಕನು ತನ್ನ ಮತದಾರರ ವಿವರಗಳನ್ನು ಪರಿಶೀಲಿಸಿ, ಯಾವುದೇ ತಪ್ಪುಗಳಿದ್ದರೆ ತಿದ್ದುಪಡಿ ಮಾಡಿಸಿಕೊಳ್ಳಬೇಕು. ಹೊಸ ಮತದಾರರು ನೋಂದಣಿ ಮಾಡಿಸಿಕೊಳ್ಳಬೇಕು. ಇದು ಕೇವಲ ಹಕ್ಕಲ್ಲ. ಇದು ನಮ್ಮ ಹೊಣೆಗಾರಿಕೆಯೂ ಆಗಿದೆ. ನಾವು ಪ್ರಜಾಪ್ರಭುತ್ವದ ಲಾಭ ಪಡೆಯುತ್ತಿದ್ದೇವೆ ಎಂದರೆ ಅದರ ಸಂರಕ್ಷಣೆಯಲ್ಲೂ ನಮ್ಮ ಪಾತ್ರ ಇರಲೇಬೇಕು. ಎಸ್‌ಐಆರ್ ಪ್ರಕ್ರಿಯೆಗೆ ಸಹಕರಿಸುವುದು ದೇಶಸೇವೆ ಕೆಲಸವಾಗಿದೆ ಎಂದರು.

ಎಸ್‌ಐಆರ್ ಕುರಿತು ಕಾಂಗ್ರೆಸ್ ವಿನಾಕಾರಣ ಸಮಾಜದಲ್ಲಿ ಗೊಂದಲ ಸೃಷ್ಟಿಸುತ್ತಿದೆ. ಈ ವಿಷಯದಲ್ಲಿ ಸುಳ್ಳು ವಿಷಯ ಹರಡುತ್ತ ಕೆಲ ಸಂಘ, ಸಂಸ್ಥೆಯವರಿಗೂ ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ ಎಂದು ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಕಿಡಿಕಾರಿದರು.

ಎಸ್‌ಐಆರ್ ಮೂಲಕ ಬಡವರ, ಹಿಂದುಳಿದವರ ಮತದ ಹಕ್ಕು ಕಸಿದು ಕೊಳ್ಳಲಾಗುತ್ತಿದೆ ಎಂದು ಬೊಬ್ಬೆ ಹಾಕಿ ಜನರಿಗೆ ದಿಶಾಭೂಲ್ ಮಾಡುವ ಜೊತೆಗೆ ಪ್ರಜಾಪ್ರಭುತ್ವ ಹಾಗೂ ಸಂವಿಧಾನಕ್ಕೂ ದುರ್ಬಲ ಮಾಡುವ ಕೆಲಸ ಕಾಂಗ್ರೆಸ್ ಮಾಡುತ್ತಿದೆ. ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತಷ್ಟು ಗಟ್ಟಿಗೊಳಿಸುವ ಉದ್ದೇಶದಿಂದ ಎಸ್‌ಐಆರ್ ನಡೆಯುತ್ತಿದೆ. ಇದಕ್ಕೂ ವಿರೋಧಿಸಿದರೆ ಹೇಗೆ? ಮತದಾರರ ಪಟ್ಟಿ ಪಾರದರ್ಶಕ ಹಾಗೂ ಶುದ್ಧವಾಗಿ ಇರುವುದು ಬೇಡವೆ? ಎಸ್‌ಐಆರ್‌ಗೆ ವಿರೋಧಿಸುವವರು ಪರೋಕ್ಷವಾಗಿ ಈ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನಕ್ಕೆ ವಿರೋಧಿಸಿದಂತಾಗಲಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಅವರು ಮಾತನಾಡಿ, ಎಸ್‌ಐಆರ್ ಬಗ್ಗೆ ಕಾಂಗ್ರೆಸ್ ಕೀಳು ಮಟ್ಟ ದ ರಾಜಕೀಯ ಮಾಡುತ್ತಿದೆ. ದೇಶದಲ್ಲಿ ಯಾವುದೇ ಸುಧಾರಣೆ ಬೇಕಿಲ್ಲ ಎಂಬುದನ್ನು ಈ ಮೂಲಕ ಕಾಂಗ್ರೆಸ್ ಸಾಬೀತು ಮಾಡುತ್ತಿದೆ. ಸಮಾಜದ ಜವಾಬ್ದಾರಿಯುತ ಪ್ರತಿಯೊಬ್ಬ ನಾಗರಿಕರು ಎಸ್‌ಐಆರ್‌ಗೆ ವಿರೋಧ ಮಾಡುತ್ತಿ ರುವವರ ಬಣ್ಣ ಬಯಲು ಮಾಡಬೇಕು ಎಂದರು.

ಶಿವಾನಂದ್ ಮಂಠಾ ಳಕರ್ ಅವರು ಮಾತನಾಡಿ, ಎಸ್‌ಐಆರ್ ಬಹಳ ಮಹತ್ವದ ಅಭಿಯಾನವಾಗಿದೆ. ಯಾರೂ ಇದನ್ನು ಲಘುವಾಗಿ ಪರಿಗಣಿಸಬಾರದು. ಮತದಾರರ ಪಟ್ಟಿ ಶುದ್ಧಗೊಳಿಸಿ, ಪ್ರಜಾ ಪ್ರಭುತ್ವ ವ್ಯವಸ್ಥೆ ಮತ್ತಷ್ಟು ಬಲಪಡಿಸುವ ಈ ಅಭಿಯಾನ ಯಶಸ್ವಿಗೊಳಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

# ಬಗರ್‌ಹುಕುಂ ಜಮೀನು ಅಕ್ರಮ ಮಂಜೂರು ಜೆಡಿಎಸ್ ಮಾಜಿ ಶಾಸಕ ಲಿಂಗೇಶ್ ಸಿಐಡಿ ವಶಕ್ಕೆ



**ಹಾಸನ, ಜೂ.19:** ಬಗರ್‌ಹುಕುಂ ಜಮೀನನ್ನು ಅಕ್ರಮವಾಗಿ ಮಂಜೂರಾತಿ ಮಾಡಿದ ಆರೋಪದಲ್ಲಿ ಹಾಸನ ಜಿಲ್ಲೆ ಬೇಲೂರಿನ ಜೆಡಿಎಸ್ ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರನ್ನು ಸಿಐಡಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬೇಲೂರು ಬಗರ್‌ಹುಕುಂ ಸಮಿತಿ ಅಧ್ಯಕ್ಷರಾಗಿದ್ದ ವೇಳೆ 2016 ರಿಂದ 2022ರ ನಡುವೆ ಬರೋಬ್ಬರಿ 2,750 ಎಕರೆ ಸರ್ಕಾರಿ ಜಮೀನುಗಳನ್ನು ನಿಯಮ ಬಾಹಿರವಾಗಿ ಮಂಜೂರು ಮಾಡಲಾಗಿದೆ ಎಂದು ಕೋಲಾರದ ಸಾಮಾಜಿಕ ಕಾರ್ಯಕರ್ತ ರಮೇಶ್ ಕುಮಾರ್ ದಾಖಲಿಸಿದ್ದ ದೂರಿನ ಮೇರೆಗೆ ಸಿಐಡಿ ಅಧಿಕಾರಿಗಳು, ಹಳೇಬೀಡಿನ ಅವರ ನಿವಾಸದಲ್ಲೇ ಸಿಐಡಿ ಅಧಿಕಾರಿಗಳು ಲಿಂಗೇಶ್ ಅವರನ್ನು ವಶಕ್ಕೆ ಪಡೆದಿದ್ದಾರೆ.

ಜೆಡಿಎಸ್‌ನಿಂದ 2018ರಲ್ಲಿ ಗೆದ್ದು ಶಾಸಕರಾಗಿದ್ದ ಕೆ.ಎಸ್.ಲಿಂಗೇಶ್, ಬಗರ್ ಹುಕುಂ ಕಮಿಟಿಯ ಅಧ್ಯಕ್ಷರಾಗಿದ್ದರು.

ಬರೋಬ್ಬರಿ 2,750 ಎಕರೆ ಸರ್ಕಾರಿ ಜಮೀನು ಗಳನ್ನು ನಿಯಮಬಾಹಿರವಾಗಿ ಮಂಜೂರು ಮಾಡಲಾಗಿದೆ ಎಂದು ಕೋಲಾರದ ಸಾಮಾಜಿಕ ಕಾರ್ಯಕರ್ತ ರಮೇಶ್ ಕುಮಾರ್ ಎಂಬುವರು ನೀಡಿದ ದೂರಿನ ಹಿನ್ನೆಲೆಯಲ್ಲಿ ಬೇಲೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಬಳಿಕ ಈ ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸಲಾಗಿತ್ತು. ದೂರಿನಲ್ಲಿ ಸುಮಾರು 2750 ಎಕರೆ ಸರ್ಕಾರಿ ಜಮೀನನನ್ನು ನಕಲಿ ದಾಖಲೆಗಳ ಆಧಾರದ ಮೇಲೆ 1430 ಬೋಗಸ್ ಫಲಾನುಭವಿಗಳಿಗೆ ಮಂಜೂರು ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು. ಈ ಸಂಬಂಧ ಮಾಜಿ ಶಾಸಕ ಲಿಂಗೇಶ್ ಸೇರಿದಂತೆ ಇತರರ ವಿರುದ್ಧ ವಿವಿಧ ಸೆಕ್ಷನ್ ಗಳಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ನಂತರದ ಬಂಧನ ಭೀತಿ ಎದುರಾಗುತ್ತಿದ್ದಂತೆಯೇ ಲಿಂಗೇಶ್ ಹಾಗೂ ಇತರರು ಅವರು ತಮ್ಮ ವಿರುದ್ಧ ಪ್ರಕರಣ ರದ್ದತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾ ಮಾಡಿತ್ತು. ಇದರ ಬೆನ್ನಲ್ಲೇ ಇದೀಗ ಸಿಐಡಿ ಪೊಲೀಸರು ಲಿಂಗೇಶ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

# 3.5 ಲಕ್ಷ ರೂ ಲಂಚ: ಬುಡಾ ಸರ್ವೇಯರ್ ಶಾಂತಮೂರ್ತಿ ಲೋಕಾಯುಕ್ತ ಬಲೆಗೆ



**ಬಳ್ಳಾರಿ, ಜೂ.19.** ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಸರ್ವೆಯರ್ ಶಾಂತಮೂರ್ತಿ 3.5 ಲಕ್ಷ ರೂ ಲಂಚ ಪಡೆಯುವಾಗ ಶುಕ್ರವಾರ ಲೋಕಾಯುಕ್ತ ಬಲೆಗೆ ಸಿಕ್ಕಿ ಬಿದ್ದಿದ್ದಾರೆ. ಖಾಸಗೀ ಲೇಔಟ್‌ನ ನಕ್ಷೆಗೆ ಮಂಜೂರಾತಿ ನೀಡಲು ಲಂಚದ ಹಣದ ಬೇಡಿಕೆ ಇಟ್ಟಿದ್ದರೆಂದು ಆರೋಪಿಸಲಾಗಿದೆ.

ಈರೇಶ್ ಎನ್ನುವರಿಂದ ಶಾಂತಮೂರ್ತಿ ವಿರುದ್ಧ ದೂರು ದಾಖಲಾಗಿತ್ತು. ಶಾಂತಮೂರ್ತಿ ಪರವಾಗಿ ಮಹಮ್ಮದ್ ಸಾಜೀದ್ ಎನ್ನುವ ವ್ಯಕ್ತಿ ಈರೇಶ್‌ನಿಂದ ಹಣ ಪಡೆಯುತ್ತಿದ್ದಾಗ ಸಾಕ್ಷಿ ಸಮೇತ ಲೋಕಾಯುಕ್ತ ಪೊಲೀಸರು ಹಿಡಿದಿದ್ದಾರೆ ಎಂದು ತಿಳಿದು ಬಂದಿದೆ.

# ಕಲೆ, ಸಾಹಿತ್ಯ, ನಾಟಕ ಶಕ್ತಿಶಾಲಿ ಮಾಧ್ಯಮ: ಕೃಷ್ಣ ಶಾವಂತಗೆರೆ



**ರಾಯಚೂರು, ಜೂ. 19:** ಸಂಗೀತ, ಕಲೆ, ಸಾಹಿತ್ಯ, ನೃತ್ಯ ಹಾಗೂ ನಾಟಕಗಳು ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ಶಕ್ತಿಶಾಲಿ ಮಾಧ್ಯಮಗಳಾಗಿವೆ ಎಂದು ಸರ್ಕಾರಿ ನೌಕರರ ಸಂಘದ ವಿಭಾಗೀಯ ಉಪಾಧ್ಯಕ್ಷ ಕೃಷ್ಣ ಶಾವಂತಗೆರೆ ಹೇಳಿದರು.

ಸಾಂಸ್ಕೃತಿಕ ಚಟುವಟಿಕೆಗಳು ನಮ್ಮ ಸಂಸ್ಕೃತಿಯನ್ನು ಉಳಿಸುವುದರ ಜೊತೆಗೆ ಅಜ್ಞಾನವನ್ನು ದೂರ ಮಾಡಿ, ಅಂತರಂಗದ ಸಾಕ್ಷಿ ಪ್ರಜ್ಞೆಯನ್ನು ಜಾಗೃತಗೊಳಿಸುತ್ತವೆ.

ಭ್ರಾತೃತ್ವ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ ರಂಗ ಕನಸು ಸಂಸ್ಥೆಯ ಮೂಲಕ ಲಕ್ಷ್ಮಣ ಮಂಡಲಗೇರಾ ಅವರು ರಾಯಚೂರಿನಲ್ಲಿ ನಿರಂತರವಾಗಿ ವಿಶಿಷ್ಟ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಸಂಗೀತ, ನೃತ್ಯ ಹಾಗೂ ಕುಂಟ ಕುಂಟ ಕುರುವತ್ತಿ' ನಾಟಕದಂತಹ ಪ್ರದರ್ಶನಗಳ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

# ಸ್ವಿಜರ್ಲೆಂಡ್ ಮಾತುಕತೆ ರದ್ದುಗೊಳಿಸಿದ ಇರಾನ್

**ಟೆಹ್ರಾನ್, ಜೂ.19:** ಇಸ್ರೇಲ್ ಮತ್ತು ಹಿಜ್ಬುಲ್ಲಾ ನಡುವಿನ ನಿರಂತರ ಹೋರಾಟ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಹೇಳಿಕೆ ಅಮೆರಿಕದೊಂದಿಗಿನ ಮಧ್ಯಂತರ ಒಪ್ಪಂದವನ್ನು ಉಲ್ಲಂಘಿಸಿವೆ ಎಂದು ವಾದಿಸಿರುವ ಇರಾನ್, ಸ್ವಿಜರ್ಲೆಂಡ್‌ನಲ್ಲಿ ಅಮೆರಿಕದ ಅಧಿಕಾರಿಗಳೊಂದಿಗೆ ನೇರ ಮಾತುಕತೆ ಪ್ರಾರಂಭಿಸುವ ಯೋಜನೆಯನ್ನು ಇರಾನ್ ಸ್ಥಗಿತಗೊಳಿಸಿದೆ ಎಂದು ವರದಿಯಾಗಿದೆ. ಈ ವಾರದ ಆರಂಭದಲ್ಲಿ ಎರಡೂ ದೇಶಗಳು ಸಹಿ ಮಾಡಿದ ಒಡಂಬಡಿಕೆ ಪತ್ರದಲ್ಲಿ ವಿವರಿಸಿರುವ ಮುಂದಿನ ಹಂತದ ಮಾತುಕತೆಗಳ ಭಾಗವಾಗಿ ಶುಕ್ರವಾರ ಮಾತುಕತೆ ಪ್ರಾರಂಭವಾಗಬೇಕಿತ್ತು. ಅಮೆರಿಕದ ನಿಯೋಗವನ್ನು ಮುನ್ನಡೆಸುವ ನಿರೀಕ್ಷೆಯಿದ್ದ ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಗುರುವಾರ ತಮ್ಮ ಸ್ವಿಜರ್ಲೆಂಡ್‌ಗೆ ತಮ್ಮ ಪ್ರವಾಸವನ್ನು ಮುಂದೂಡಿದರು, ಶ್ವೇತಭವನವು ಲಾಜಿಸ್ಟಿಕ್ ಸಮಸ್ಯೆಗಳಿಗೆ ವಿಳಂಬವನ್ನು ಕಾರಣವೆಂದು ಹೇಳಿತು ಮತ್ತು ಒಪ್ಪಂದದ ಅಡಿಯಲ್ಲಿ ಸ್ಥಾಪಿಸಲಾದ 60 ದಿನಗಳ ಚೌಕಟ್ಟಿನೊಳಗೆ ಮಾತುಕತೆಗಳು ಇನ್ನೂ ನಡೆಯುವ ನಿರೀಕ್ಷೆಯಿದೆ ಎಂದು ಸ್ಪಷ್ಟಪಡಿಸಿತು. ಇರಾನ್ ಸಂಸತ್ತಿನ ಸ್ಪೀಕರ್ ಮತ್ತು ಮುಖ್ಯ ಸಮಾಲೋಚಕ ಮೊಹಮ್ಮದ್ ಬಘರ್ ಘಾಲಿಬಾಫ್, ವಾಷಿಂಗ್ಟನ್‌ಜೊತೆಗಿನ ಯಾವುದೇ ಭವಿಷ್ಯದ ನೇರ ಮಾತುಕತೆಗಳು ಟೆಹ್ರಾನ್ ಷರತ್ತುಗಳು ಮತ್ತು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಒಳಪಟ್ಟಿರುತ್ತವೆ ಎಂದು ಹೇಳಿದರು. "ನಾವು ಮಾತುಕತೆ ಪ್ರಕ್ರಿಯೆಯ ಉದ್ದಕ್ಕೂ ತೋರಿಸಿರುವಂತೆ, ನಮ್ಮ ಷರತ್ತುಗಳು ಮತ್ತು



ಕೆಂಪು ರೇಖೆಗಳಿಗೆ ಮತ್ತು ಇರಾನ್ ರಾಷ್ಟ್ರದ ಹಿತಾಸಕ್ತಿಗಳನ್ನು ಭದ್ರಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ" ಎಂದು ಇರಾನ್ನ ಅಧಿಕೃತ ಐಆರ್‌ಎನ್‌ಎ ಸುದ್ದಿ ಸಂಸ್ಥೆ ಪ್ರಕಟಿಸಿದ ಹೇಳಿಕೆಗಳಲ್ಲಿ ಗಾಲಿಬಾಫ್ ಹೇಳಿದ್ದಾರೆ. "ಶತ್ರು ಆ ಮಿತಿಗಳನ್ನು ಮೀರಲು ಪ್ರಯತ್ನಿಸಿದರೆ, ನಮ್ಮ ಬೆರಳು ಪ್ರಚೋದಕದಲ್ಲಿದೆ ಮತ್ತು ನಾವು ದಮನಕಾರಿ ಪ್ರತಿಕ್ರಿಯೆ ನೀಡಲು ಹಿಂಜರಿಯುವುದಿಲ್ಲ ಎಂದು ನಾವು ಈಗಾಗಲೇ ತೋರಿಸಿದ್ದೇವೆ" ಎಂದು ಅವರು ಹೇಳಿದರು. ಇಸ್ರೇಲ್ ಮತ್ತು ಹಿಜ್ಬುಲ್ಲಾ ನಡುವಿನ ಹೋರಾಟ ತೀವ್ರಗೊಂಡಿರುವುದರಿಂದ ವಿಳಂಬವಾಗಿದೆ, ಇದು ಯುಎಸ್–ಇರಾನ್ ಒಪ್ಪಂದಕ್ಕೆ ಮೊದಲ ಪ್ರಮುಖ ಸವಾಲನ್ನು ಸೃಷ್ಟಿಸಿದೆ. ದಕ್ಷಿಣ ಲೆಬನಾನ್‌ನಾದ್ಯಂತ 80 ಕ್ಕೂ ಹೆಚ್ಚು ಹಿಜ್ಬುಲ್ಲಾ ಗುರಿಗಳ ಮೇಲೆ ರಾತ್ರೋರಾತ್ರಿ ದಾಳಿ ನಡೆಸಿದೆ ಎಂದು ಇಸ್ರೇಲಿ ಮಿಲಿಟರಿ ಇಂದು ಹೇಳಿದೆ. ಇಸ್ರೇಲಿ ಮಿಲಿಟರಿಯ ಅಧಿಕೃತ ಹೇಳಿಕೆಯ ಪ್ರಕಾರ, ಲೆಬನಾನ್‌ನಲ್ಲಿನ ಅದರ ಇತ್ತೀಚಿನ ಆಕ್ರಮಣವು ಹೆಜ್ಬೊಲ್ಲಾ ಕಮಾಂಡ್ ಕೇಂದ್ರಗಳು, ಫೈಟರ್ ಔಟ್‌ಪೋಸ್ಟ್‌ಗಳು, ಉಡಾವಣಾ ಸ್ಥಾನಗಳು ಮತ್ತು ಇರಾನ್ ಬೆಂಬಲಿತ ಉಗ್ರಗಾಮಿ ಗುಂಪಿಗೆ ಸಂಬಂಧಿಸಿದ ಇತರ ನಿರ್ಣಾಯಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡಿದೆ. ಇಸ್ರೇಲ್ ರಕ್ಷಣಾ ಪಡೆಗಳ (ಐಡಿಎಫ್) ಪ್ರಕಾರ, ಡಜನ್ಗಟ್ಟಲೆ ಹಿಜ್ಬುಲ್ಲಾ ಕಾರ್ಯಕರ್ತರು ಕಾರ್ಯಾಚರಣೆಯಲ್ಲಿ ಕೊಲ್ಲಲ್ಪಟ್ಟರು, ಇದನ್ನು ಇಸ್ಲಾಮಿಸ್ಟ್ ಗುಂಪಿನ ಪದೇ ಪದೇ ಮತ್ತು ನಿರಂತರವಾಗಿ ಕದನ ವಿರಾಮ ಉಲ್ಲಂಘನೆ ಎಂದು ಹೇಳಿದ್ದಕ್ಕೆ ಪ್ರತೀಕಾರದ ಕ್ರಮ ಎಂದು ಅದು ವಿವರಿಸಿದೆ.

ದಾಳಿಗಳಲ್ಲಿ ಕನಿಷ್ಠ 18 ಜನರು ಸಾವನ್ನಪ್ಪಿದ್ದಾರೆ ಎಂದು ಲೆಬನಾನ್ನ ಸರ್ಕಾರಿ ರಾಷ್ಟ್ರೀಯ ಸುದ್ದಿ ಸಂಸ್ಥೆ ವರದಿ ಮಾಡಿದೆ. ನವೀಕರಿಸಿದ ಹಿಂಸಾಚಾರವು ಅಮೆರಿಕ ಮತ್ತು ಇರಾನ್ ನಡುವಿನ ರಾಜತಾಂತ್ರಿಕ ಪ್ರಕ್ರಿಯೆಯ ಸುತ್ತಲಿನ ಅನಿಶ್ಚಿತತೆಯನ್ನು ಹೆಚ್ಚಿಸಿದೆ, ಲೆಬನಾನ್‌ನಲ್ಲಿ ಐಡಿಎಫ್‌ನ ನಿರಂತರ ಮಿಲಿಟರಿ ಕಾರ್ಯಾಚರಣೆಗಳು ಒಪ್ಪಂದದಲ್ಲಿ ವಿವರಿಸಿರುವ ಅದರ ಬದ್ಧತೆಗಳ ಉಲ್ಲಂಘನೆಯಾಗಿದೆ ಎಂದು ಇರಾನಿನ ಅಧಿಕಾರಿಗಳು ವಾದಿಸುತ್ತಿದ್ದಾರೆ, ಇದು ಮಾತುಕತೆಗಳನ್ನು ಮುಂದಕ್ಕೆ ಸಾಗಿಸುವ ಪ್ರಯತ್ನಗಳನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತದೆ.

# ಅಮೆರಿಕ–ಇರಾನ್ ಮಾತುಕತೆ ಕದನ ವಿರಾಮಕ್ಕೆ ಟ್ರಂಪ್ ಕರೆ

**ವಾಷಿಂಗ್ಟನ್, ಜೂ.19 :** ವಾಷಿಂಗ್ಟನ್ "ಎಲ್ಲಾ ರಂಗಗಳಲ್ಲಿ ಸಂಪೂರ್ಣ ಕದನ ವಿರಾಮ"ವನ್ನು ನಿರೀಕ್ಷಿಸುತ್ತದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು, "ಮಧ್ಯಪ್ರಾಚ್ಯದ ಪ್ರತಿಯೊಬ್ಬರೂ" ತಮ್ಮ ಬದ್ಧತೆಗಳಿಗೆ ಬದ್ಧರಾಗಬೇಕೆಂದು ಒತ್ತಾಯಿಸಿದರು.

"ಲೆಬನಾನ್, ಹೆಜ್ಬೊಲ್ಲಾ ಮತ್ತು ಇಸ್ರೇಲ್ ಸೇರಿದಂತೆ ಎಲ್ಲಾ ರಂಗಗಳಲ್ಲಿ ಸಂಪೂರ್ಣ ಕದನ ವಿರಾಮವನ್ನು ನಾವು ನಿರೀಕ್ಷಿಸುತ್ತೇವೆ" ಎಂದು ಟ್ರಂಪ್ ಗುರುವಾರ ಟ್ರೂತ್ ಸೋಷಿಯಲ್‌ನಲ್ಲಿ ಹೇಳಿಕೆಯನ್ನು ಬರೆದಿದ್ದಾರೆ. ಅಮೆರಿಕ ಶಾಂತಿಗೆ ಬದ್ಧವಾಗಿದೆ ಮತ್ತು ಮಧ್ಯಪ್ರಾಚ್ಯ ಪ್ರದೇಶದ ಪ್ರತಿಯೊಬ್ಬರೂ ನಮ್ಮ ಮಾತುಕತೆಗಳನ್ನು ಸುಂದರವಾಗಿ ತೆರೆದುಕೊಳ್ಳಲು ಅವಕಾಶ ನೀಡುವ ಬದ್ಧತೆಯನ್ನು ಕಾಪಾಡಿಕೊಳ್ಳಲು ನಾವು ಪ್ರೋತ್ಸಾಹಿಸುತ್ತೇವೆ ಎಂದು ಅವರು ಹೇಳಿದರು.

ಟ್ರಂಪ್ ಬುಧವಾರ ಫ್ರಾನ್ಸ್‌ನಲ್ಲಿ ಇರಾನ್‌ಜೊತೆ ಒಡಂಬಡಿಕೆಗೆ ಸಹಿ ಹಾಕಿದರು, ಕ್ಸಿನ್ಹುವಾ ಪ್ರಕಾರ, ಅಂತಿಮ ಒಪ್ಪಂದವನ್ನು ತಲುಪುವ ಗುರಿಯನ್ನು ಹೊಂದಿರುವ ಗುರುವಾರದಿಂದ 60 ದಿನಗಳ ಮಾತುಕತೆ ಅವಧಿಯನ್ನು ಪ್ರಾರಂಭಿಸಿದರು. ಈ ಒಪ್ಪಂದವು "ಲೆಬನಾನ್ ಸೇರಿದಂತೆ ಎಲ್ಲಾ



ರಂಗಗಳಲ್ಲಿ ಮಿಲಿಟರಿ ಕಾರ್ಯಾಚರಣೆಗಳ ತಕ್ಷಣದ ಮತ್ತು ಶಾಶ್ವತ ಮುಕ್ತಾಯ"ಕ್ಕೆ ಕರೆ ನೀಡುತ್ತದೆ.

ಆದಾಗ್ಯೂ, ಇಸ್ರೇಲ್ ತನ್ನ ಪಡೆಗಳನ್ನು ಲೆಬನಾನ್ನಿಂದ ಹಿಂತೆಗೆದುಕೊಳ್ಳುವ ಉದ್ದೇಶವನ್ನು ಹೊಂದಿಲ್ಲ ಎಂದು ಹೇಳಿದೆ.

# ಕಚ್ಚಾತೈಲ ಉತ್ಪಾದನೆ ಹೆಚ್ಚಳ: ಕುವೈತ್ ಮಹತ್ವದ ಹೆಜ್ಜೆ

**ಕುವೈತ್ ಸಿಟಿ, ಜೂ.19:** ಮಧ್ಯಪ್ರಾಚ್ಯ ಸಂಘರ್ಷದಿಂದ ಸ್ಥಗಿತಗೊಂಡಿದ್ದ ಇಂಧನ ಕಾರ್ಯಾಚರಣೆಯನ್ನು ಮರುಸ್ಥಾಪಿಸುವ ನಿಟ್ಟಿನಲ್ಲಿ ಕುವೈತ್ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಇನ್ನು ಒಂದು ವಾರದೊಳಗೆ ಪ್ರತಿದಿನ 20 ಲಕ್ಷ ಬ್ಯಾರಲ್‌ಗಳಿಗಿಂತಲೂ ಹೆಚ್ಚು ಕಚ್ಚಾತೈಲ ಉತ್ಪಾದನೆಗೆ ಯೋಜಿಸಿರುವುದಾಗಿ ಕುವೈತ್ ಘೋಷಿಸಿದೆ.



ಸುರಕ್ಷತಾ ಪರಿಸ್ಥಿತಿಗಳು ಸುಧಾರಿಸಿರುವುದು, ಹಾರ್ಮುಜ್ ಜಲಸಂಧಿ ಪುನರಾರಂಭಗೊಂಡಿರುವುದು ಮತ್ತು ಅಂತರರಾಷ್ಟ್ರೀಯ ವಾಣಿಜ್ಯ ಹಡಗುಗಳ ಸಂಚಾರವು ಮತ್ತೆ ಶುರುವಾಗಿರುವುದನ್ನು ಉಲ್ಲೇಖಿಸಿ, ಅಮೆರಿಕ–ಇಸ್ರೇಲ್–ಇರಾನ್ ಸಂಘರ್ಷದ ಸಮಯದಲ್ಲಿ ಜಾರಿಗೊಳಿಸಲಾಗಿದ್ದ 'ಫೋರ್ಸ್ ಮೆಜರ್' ನೋಟಿಸ್‌ಗಳನ್ನು ಕುವೈತ್ ಹಿಂಪಡೆದಿದೆ ಎಂದು ಸರ್ಕಾರಿ ಸ್ವಾಮ್ಯದ ಕುವೈತ್ ಪೆಟ್ರೋಲಿಯಂ ಕಾರ್ಪೊರೇಷನ್ (ಕೆಪಿಸಿ) ಗುರುವಾರ ತಿಳಿಸಿದೆ.

ಹಾನಿಗೊಳಗಾಗಿದ್ದ ಮೂಲಸೌಕರ್ಯಗಳ ದುರಸ್ತಿ ಕಾರ್ಯವನ್ನು ಪೂರ್ಣಗೊಳಿಸಲಾಗಿದ್ದು, ಒಪ್ಪಂದದ ಪ್ರಕಾರ ಪೂರ್ಣ ಪ್ರಮಾಣದ ತೈಲ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಗ್ರಾಹಕರೊಂದಿಗೆ ಒಟ್ಟಾಗಿ ಕೆಲಸ ಮಾಡುತ್ತಿರುವುದಾಗಿ ಕೆಪಿಸಿ ತಿಳಿಸಿದೆ ಎಂದು ಕ್ಸಿನ್ಹುವಾ ವರದಿ ಮಾಡಿದೆ.

ಕುವೈತ್‌ನ ಇಂಧನ ಮೂಲಸೌಕರ್ಯ ಮತ್ತು ಸಾರಿಗೆ ಜಾಲಗಳನ್ನು ಗುರಿಯಾಗಿಸಿಕೊಂಡು ಸರಣಿ ದಾಳಿಗಳು ನಡೆದ ಹಿನ್ನೆಲೆಯಲ್ಲಿ, ಮುನ್ನೆಚ್ಚರಿಕೆ ಕ್ರಮವಾಗಿ ಕಳೆದ ಮಾರ್ಚ್ ತಿಂಗಳಲ್ಲಿ ತೈಲ ಉತ್ಪಾದನೆ ಮತ್ತು ಸಂಸ್ಕರಣಾ ಕಾರ್ಯಾಚರಣೆಯನ್ನು ಕಡಿತಗೊಳಿಸಲಾಗಿತ್ತು.

ಗಲ್ಫ್ ವಲಯದ ಪ್ರಮುಖ ತೈಲ ಉತ್ಪಾದಕ ದೇಶಗಳಲ್ಲಿ ಒಂದಾದ ಕುವೈತ್, ಜಾಗತಿಕ ತೈಲ ರಫ್ತಿಗೆ ಪ್ರಮುಖ ಮಾರ್ಗವಾಗಿರುವ ಹಾರ್ಮುಜ್ ಜಲಸಂಧಿಯ ಮೂಲಕ ಕಡಲ ಸಂಚಾರಕ್ಕೆ ಸಂಘರ್ಷದಿಂದ ಉಂಟಾಗಿದ್ದ ಅಡ್ಡಿ–ಆತಂಕಗಳನ್ನು ನಿವಾರಿಸಿ, ತನ್ನ ಇಂಧನ ಕಾರ್ಯಾಚರಣೆಯನ್ನು ಹಂತಹಂತವಾಗಿ ಸಹಜ ಸ್ಥಿತಿಗೆ ತರಲು ಶ್ರಮಿಸುತ್ತಿದೆ.

# ಹಾರ್ಮುಜ್ ಜಲಸಂಧಿಯಲ್ಲಿ ಹಡಗು ಸಂಚಾರ ಗಣನೀಯ ಏರಿಕೆ

**ಟೆಹ್ರಾನ್, ಜೂನ್ 19:** ಹಾರ್ಮುಜ್ ಜಲಸಂಧಿಯ ಮೂಲಕ ವಾಣಿಜ್ಯ ಹಡಗು ಸಂಚಾರ ಗುರುವಾರದಿಂದ ತೀವ್ರವಾಗಿ ಏರಿಕೆಯಾಗಿದ್ದು, 25 ಹಡಗುಗಳು ಜಲಮಾರ್ಗದಲ್ಲಿ ಸಂಚರಿಸಿವೆ, ಇದು ಏಪ್ರಿಲ್ ನಂತರದ ಅತ್ಯಧಿಕ ದೈನಂದಿನ ಮೊತ್ತವಾಗಿದೆ ಎಂದು ಸಾಗರ ಗುಪ್ತಚರ ಸಂಸ್ಥೆ ತಿಳಿಸಿದೆ. ತೈಲಸಾಗಣೆಗೆ ಪ್ರಮುಖವಾದ ಜಲಮಾರ್ಗವನ್ನು ತಕ್ಷಣವೇ ಪುನಃ ತೆರೆಯುವಂತೆ ಕರೆ ನೀಡಿದ ಬುಧವಾರ ಅಮೆರಿಕ ಮತ್ತು ಇರಾನ್ ನಡುವಿನ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಸಮುದ್ರ ಸಂಚಾರದಲ್ಲಿ ತೀವ್ರ ಏರಿಕೆ ಕಂಡುಬಂದಿದೆ. "ಗುರುವಾರ ಹಾರ್ಮುಜ್ ಜಲಸಂಧಿಯ ಮೂಲಕ 25 ಪರಿಶೀಲಿಸಿದ ವಾಣಿಜ್ಯ ಹಡಗು ದಾಟುವಿಕೆಯನ್ನು ನಾವು ಗಮನಿಸಿದ್ದೇವೆ" ಎಂದು ಸುದ್ದಿಸಂಸ್ಥೆ ಶುಕ್ರವಾರ ಸಾಮಾಜಿಕ ಮಾಧ್ಯಮ ನವೀಕರಣದಲ್ಲಿ ತಿಳಿಸಿದೆ. "ಏಪ್ರಿಲ್ 18ರ ನಂತರದ ಒಂದೇ ದಿನದ ಗರಿಷ್ಠ ಎಣಿಕೆ ಇದಾಗಿದೆ, ಆ ಸಮಯದಲ್ಲಿ ಜಲಸಂಧಿಯು ವಾಣಿಜ್ಯ ಸಂಚಾರಕ್ಕೆ ಮುಕ್ತವಾಗಿದೆ ಎಂದು ಇರಾನ್ ಘೋಷಿಸಿದ



ನಂತರ ಸಂಕ್ಷಿಪ್ತ ಪುನರಾರಂಭ ವಿಂಡೋದಲ್ಲಿ ಇದು ಬಂದಿತು. ಆ ವಿಂಡೋ ಅಲ್ಪಕಾಲಿಕವಾಗಿ ಸಾಬೀತಾಯಿತು, ಜೂನ್ 18 ರ ಎಣಿಕೆ ಆ ತಾತ್ಕಾಲಿಕ ಉಲ್ಬಣದ ನಂತರದ ಪ್ರಬಲ ದೈನಂದಿನ ಅಂಕಿ ಅಂಶವಾಗಿದೆ." ಇರಾನ್ ವಿರುದ್ಧದ ಅಮೆರಿಕ–ಇಸ್ರೇಲ್ ಯುದ್ಧವು ಜಾಗತಿಕ ತೈಲ ಹರಿವಿನ ಶೇಕಡಾ 20 ರಷ್ಟು ಪರಿಣಾಮಕಾರಿಯಾಗಿ ಸ್ಥಗಿತಗೊಂಡಿತು, ಇದು ಇಂಧನ ಬೆಲೆಗಳಲ್ಲಿ ಭಾರಿ ಏರಿಕೆ ಮತ್ತು ವಿಶ್ವಾದ್ಯಂತ ಇಂಧನ ಬಿಕ್ಕಟ್ಟಿಗೆ ಕಾರಣವಾಯಿತು. ಗುರುವಾರ ದಾಖಲಾದ 25 ಕ್ರಾಸಿಂಗ್‌ಗಳು ಜೂನ್ ಮೊದಲ 10 ದಿನಗಳಲ್ಲಿ ಕಂಡುಬರುವ ಸರಾಸರಿ ದೈನಂದಿನ ಸಂಚಾರಕ್ಕಿಂತ ಐದು ಪಟ್ಟು ಹೆಚ್ಚಾಗಿದ್ದರೂ, ಹಡಗಿನ ಪ್ರಮಾಣ ಯುದ್ಧ–ಪೂರ್ವ ಸಂಖ್ಯೆಗಳಿಗಿಂತ ಬಹಳ ಕಡಿಮೆಯಾಗಿದೆ, ಇದು ದಿನಕ್ಕೆ ಸರಾಸರಿ 110 ಹಡಗುಗಳಷ್ಟಿತ್ತು. ಂಫಿಖಜಚಿಡಿಟಜ ತನ್ನ ಡೇಟಾ ಹಡಗುಗಳ ಸ್ವಯಂಚಾಲಿತ ಗುರುತಿನ ವ್ಯವಸ್ಥೆ ಟ್ರಾನ್ಸ್‌ಪಾಂಡರ್‌ಗಳ ಸಂಕೇತಗಳನ್ನು ಅವಲಂಬಿಸಿರುವುದರಿಂದ ಮಾರ್ಗವನ್ನು ಬಳಸುವ ಹಡಗುಗಳ ನಿಜವಾದ ಸಂಖ್ಯೆ ವರದಿಗಿಂತ ಹೆಚ್ಚಿರಬಹುದು ಎಂದು ಗಮನಿಸಿದೆ. ಈ ಪ್ರದೇಶದಲ್ಲಿ ಕಾರ್ಯನಿರ್ವಹಿಸುವಾಗ ಅನೇಕ ಹಡಗುಗಳು ತಮ್ಮ ಟ್ರ್ಯಾಕಿಂಗ್ ವ್ಯವಸ್ಥೆಗಳನ್ನು ಆಫ್ ಮಾಡಿವೆ ಅಥವಾ ಕೌಶಲ್ಯದಿಂದ ನಿರ್ವಹಿಸಿವೆ, ಇದರಿಂದಾಗಿ ಚಲನೆಯನ್ನು ನಿಖರವಾಗಿ ಮೇಲ್ವಿಚಾರಣೆ ಮಾಡುವುದು ಹೆಚ್ಚು ಕಷ್ಟಕರವಾಗಿದೆ. ಸಂಘರ್ಷ ಪ್ರಾರಂಭವಾದಾಗಿನಿಂದ ಪರ್ಷಿಯನ್ ಕೊಲ್ಲಿಯಲ್ಲಿ ಕಂಡುಬರುವ ಅತಿದೊಡ್ಡ AIS ಅಡ್ಡಿ ಘಟನೆ ಎಂದು ವಿವರಿಸಿದ ಸಂಗತಿಯೊಂದಿಗೆ ದಟ್ಟಣೆಯ ಹೆಚ್ಚಳವು ಹೊಂದಿಕೆಯಾಯಿತು ಎಂದು ಕಂಪನಿ ಹೇಳಿದೆ.

"200 ಕ್ಕೂ ಹೆಚ್ಚು ವಾಣಿಜ್ಯ ಹಡಗುಗಳು ಏಕಕಾಲದಲ್ಲಿ ಸಿಗ್ನಲ್ ವಂಚನೆ ಅಥವಾ ಇತರ ಅಸಹಜ AIS ನಡವಳಿಕೆಯಿಂದ ಪ್ರಭಾವಿತವಾಗಿವೆ" ಎಂದು ಸುದ್ದಿಸಂಸ್ಥೆ ಹೇಳಿದೆ.

# ಸೆಮಿಫೈನಲ್‌ಗೆ ಲಗ್ಗೆ ಇಟ್ಟ ಅಶ್ಮಿತಾ ಚಲಿಹಾ

**ಮೆಕಾವೋ, ಜೂ.19:** ಭಾರತದ ಅಶ್ಮಿತಾ ಚಲಿಹಾ ಅವರು ಶುಕ್ರವಾರ ನಡೆದ 'ಮೆಕಾವೋ ಓಪನ್ 2026' ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭರ್ಜರಿ ಜಯ ಸಾಧಿಸುವ ಮೂಲಕ, ಕಳೆದ ಎರಡು ವರ್ಷಗಳಲ್ಲಿ ಮೊದಲ ಬಾರಿಗೆ ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್‌ನ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ, ವಿಶ್ವ ಬ್ಯಾಡ್ಮಿಂಟನ್ ಶ್ರೇಯಾಂಕದಲ್ಲಿ 63ನೇ ಸ್ಥಾನದಲ್ಲಿರುವ ಅಶ್ಮಿತಾ, ಮಕಾವೊ ಈಸ್ಟ್ ಏಷ್ಯನ್ ಗೇಮ್ಸ್ ಡೋಮ್‌ನಲ್ಲಿ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ವಿಶ್ವದ 99ನೇ ಶ್ರೇಯಾಂಕದ ದಕ್ಷಿಣ ಕೊರಿಯಾದ ಕಿಮ್ ಮಿನ್ ಸನ್ ಅವರನ್ನು 21–16, 21–18 ನೇರ ಸೆಟ್‌ಗಳಿಂದ 37 ನಿಮಿಷಗಳಲ್ಲಿ ಪರಾಭವಗೊಳಿಸಿದರು.

ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಶನಿವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಮತ್ತೊಬ್ಬ ಶಟ್ಲರ್ ಪಾರ್ಕ್ ಗಾ–ಯುನ್ ಅವರನ್ನು ಎದುರಿಸಲಿದ್ದಾರೆ. ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್‌ನಲ್ಲಿ ಅಶ್ಮಿತಾ ಅವರಿಗೆ ಇದು ಎರಡನೇ ಸೆಮಿಫೈನಲ್ ಪ್ರವೇಶವಾಗಿದೆ. 2024ರ ಥೈಲ್ಯಾಂಡ್ ಮಾಸ್ಟರ್ಸ್ ನಂತರ ಅವರು ಈ ಸಾಧನೆ ಮಾಡಿರುವುದು ಇದೇ ಮೊದಲು. ಅವರು ಈ ಹಿಂದೆ ಕೆಲವು ಸೂಪರ್ 100 ಸರಣಿಯ ಟೂರ್ನಿಗಳಲ್ಲಿ ಸೆಮಿಫೈನಲ್ ತಲುಪಿದ್ದರಾದರೂ, ಅವು ರ್‍ಯಾಂಕಿಂಗ್ ಪಾಯಿಂಟ್‌ಗಳನ್ನು ನೀಡುತ್ತಿದ್ದರೂ ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್‌ನ ಭಾಗವೆಂದು ಪರಿಗಣಿಸಲ್ಪಡುವುದಿಲ್ಲ.

ಮೊದಲ ಗೇಮ್‌ನಲ್ಲಿ ಇಬ್ಬರೂ ಆಟಗಾರ್ತಿಯರು 14–14 ಅಂಕಗಳೊಂದಿಗೆ ತೀವ್ರ ಪೈಪೋಟಿ ನಡೆಸುತ್ತಿದ್ದರು. ಈ ಹಂತದಲ್ಲಿ ಅಶ್ಮಿತಾ ಸತತ ನಾಲ್ಕು ಅಂಕಗಳನ್ನು ಗಳಿಸುವ ಮೂಲಕ ಪಂದ್ಯದ ಮೇಲಿನ ಹಿಡಿತ ಸಾಧಿಸಿ



ಮೊದಲ ಗೇಮ್ ಅನ್ನು ತಮ್ಮದಾಗಿಸಿಕೊಂಡರು.

ಇನ್ನು ಎರಡನೇ ಗೇಮ್‌ನಲ್ಲಿ ಅಶ್ಮಿತಾ ಅದ್ಭುತವಾಗಿ ಪುನರಾಗಮನ ಮಾಡಿದರು. ಪಂದ್ಯದ ವಿರಾಮದ ವೇಳೆಗೆ 11–5 ರಿಂದ ಹಿನ್ನಡೆ ಅನುಭವಿಸಿದ್ದ ಅವರು, ಒಂದು ಹಂತದಲ್ಲಿ 17–13 ರಲ್ಲಿದ್ದರು. ಅಲ್ಲಿಂದ ಅದ್ಭುತ ಆಟ ಪ್ರದರ್ಶಿಸಿದ ಭಾರತೀಯ ಶಟ್ಲರ್, ಕೊನೆಯ 9 ಅಂಕಗಳಲ್ಲಿ 8 ಅಂಕಗಳನ್ನು ತಮ್ಮದಾಗಿಸಿಕೊಳ್ಳುವ ಮೂಲಕ ಪಂದ್ಯವನ್ನು ಗೆದ್ದುಕೊಂಡರು. ಗಾಯದ ಸಮಸ್ಯೆಯಿಂದಾಗಿ ಮೂರು ತಿಂಗಳ ಕಾಲ ಕ್ರೀಡೆಯಿಂದ ದೂರವಿದ್ದ ಅಶ್ಮಿತಾ, 2026ರ ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್‌ನ ಆರಂಭದಲ್ಲಿ ಚೀನಾ ಮಾಸ್ಟರ್ಸ್ ಮತ್ತು ಮಲೇಷ್ಯಾ ಮಾಸ್ಟರ್ಸ್ ಟೂರ್ನಿಗಳಲ್ಲಿ ಸತತವಾಗಿ ಕ್ವಾರ್ಟರ್‌ಫೈನಲ್ ತಲುಪಿದ್ದರು. ಶನಿವಾರದ ಸೆಮಿಫೈನಲ್ ನಡೆಯುತ್ತದೆ ಸಹ ಆಟಗಾರ್ತಿ ಅನ್ಮೋಲ್ ಖರ್ಬ್ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಚೀನಾದ ನಾಲ್ಕನೇ ಶ್ರೇಯಾಂಕದ ಹ್ಯಾನ್ ಕಿಯಾನ್‌ಕ್ಸಿ ವಿರುದ್ಧ 14–21, 21–15, 21–13 ಗೋಲುಗಳಿಂದ ಸೋತ ನಂತರ, ಈ ಬಿಡಬ್ಲ್ಯೂಎಫ್ ಸೂಪರ್ 300 ಟೂರ್ನಿಯಲ್ಲಿ ಉಳಿದಿರುವ ಏಕೈಕ ಭಾರತೀಯ ಆಟಗಾರ್ತಿ ಅಶ್ಮಿತಾ ಆಗಿದ್ದಾರೆ.

# ಏಷ್ಯನ್ ರಿಲೇ ಚಾಂಪಿಯನ್‌ಶಿಪ್: ಸವಾಲು ಎದುರಿಸಲು ಭಾರತೀಯ ಓಟಗಾರರು ಸಿದ್ಧ

**ಶಾಂಗ್ಯು (ಚೀನಾ), ಜೂ.19:** ಚೀನಾದ ಶಾಂಗ್ಯುನಲ್ಲಿ ಜೂನ್ 20 ಮತ್ತು 21 ರಂದು ನಡೆಯಲಿರುವ ಏಷ್ಯನ್ ರಿಲೇ ಚಾಂಪಿಯನ್‌ಶಿಪ್ಸ್ 2026' ರಲ್ಲಿ ಗುರುಂದರ್‌ವೀರ್ ಸಿಂಗ್, ಅನಿಮೇಶ್ ಕುಜೂರ್ ಮತ್ತು ಒಲಿಂಪಿಯನ್ಸ್‌ಗಳಾದ ಸುಭಾ ವೆಂಕಟೇಶನ್ ಹಾಗೂ ಎಂ.ಆರ್. ಪೂವಮ್ಮ ಭಾರತೀಯ ತಂಡದ ಮುಂಚೂಣಿಯನ್ನು ಮುನ್ನಡೆಸಲಿದ್ದಾರೆ.

ಭಾರತೀಯ ಅಥ್ಲೀಟ್‌ಗಳು ಈ ಕೂಟದ ಐದು ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ – ಪುರುಷರ 4 x 400 ಮೀಟರ್, ಮಹಿಳೆಯರ 4ಥ100 ಮೀಟರ್ ಮತ್ತು 4 x 400 ಮೀಟರ್, ಹಾಗೂ ಮಿಶ್ರ (ಮಿಕ್ಸೆಡ್) 4 x 100 ಮೀಟರ್ ಮತ್ತು 4 x 400 ಮೀಟರ್ ರಿಲೇ. ಭಾರತದ ಪುರುಷರ 4 x 100 ಮೀಟರ್ ರಿಲೇ ತಂಡವು ಮೊದಲು ಸ್ಪರ್ಧಿಸಬೇಕಾಗಿತ್ತಾದರೂ, ಆಟಗಾರರ ಗಾಯದ ಸಮಸ್ಯೆಯಿಂದಾಗಿ ಕೊನೆಕ್ಷಣದಲ್ಲಿ ಹಿಂದೆ ಸರಿದಿದೆ.

2ನೇ ಏಷ್ಯನ್ ಅಥ್ಲೆಟಿಕ್ಸ್ ರಿಲೇಸ್‌ಗಾಗಿ ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ 29 ಸದಸ್ಯರ ಭಾರತೀಯ ತಂಡವನ್ನು ಪ್ರಕಟಿಸಿದೆ. ಫೆಡರೇಶನ್ ಕಪ್‌ನಲ್ಲಿ ಪುರುಷರ 100 ಮೀಟರ್ ರಾಷ್ಟ್ರೀಯ ದಾಖಲೆಯನ್ನು ಹಲವು ಬಾರಿ ಪರಸ್ಪರ ಮುರಿದಿದ್ದ ಗುರುಂದರ್‌ವೀರ್ ಸಿಂಗ್ ಮತ್ತು ಅನಿಮೇಶ್ ಕುಜೂರ್, ಶಾಂಗ್ಯುನಲ್ಲಿ ಒಟ್ಟಿಗೆ ಕಣಕ್ಕಿಳಿಯುವ ಸಾಧ್ಯತೆಯಿದೆ. ಗುರುಂದರ್‌ವೀರ್ ಪ್ರಸ್ತುತ 10.09 ಸೆಕೆಂಡ್‌ಗಳೊಂದಿಗೆ ಭಾರತದ ಪುರುಷರ 100 ಮೀಟರ್ ರಾಷ್ಟ್ರೀಯ ದಾಖಲೆಯನ್ನು ಹೊಂದಿದ್ದರೆ, ಅನಿಮೇಶ್ 20.32 ಸೆಕೆಂಡ್‌ಗಳೊಂದಿಗೆ 200 ಮೀಟರ್ ದಾಖಲೆಯನ್ನು ತಮ್ಮ ಹೆಸರಿಗೆ ಬರೆದುಕೊಂಡಿದ್ದಾರೆ. ಈ ಇಬ್ಬರೂ ಭಾರತದ ಇತಿಹಾಸದಲ್ಲೇ ಅತ್ಯಂತ ವೇಗದ ಸ್ಪ್ರಿಂಟರ್‌ಗಳಾಗಿದ್ದಾರೆ.

ಭಾರತದ ಸ್ಪ್ರಿಂಟ್ ರಿಲೇ ತಂಡದಲ್ಲಿ ಪ್ರಣವ್ ಗುರವ್ ಕೂಡ ಇದ್ದು, ಇವರು ರಾಂಚಿಯಲ್ಲಿ ನಡೆದ ಸ್ಪರ್ಧೆಯಲ್ಲಿ ಗುರುಂದರ್‌ವೀರ್ ಮತ್ತು ಅನಿಮೇಶ್ ಅವರ ನಂತರ ಮೂರನೇ ಸ್ಥಾನ ಪಡೆದಿದ್ದರು.



ಇದು ಇತ್ತೀಚಿನ ವರ್ಷಗಳಲ್ಲಿ ಭಾರತದ ಅತ್ಯಂತ ಬಲವಾದ ಪುರುಷರ ಸ್ಪ್ರಿಂಟ್ ರಿಲೇ ತಂಡಗಳಲ್ಲಿ ಒಂದಾಗಿದೆ. ಏಷ್ಯನ್ ರಿಲೇ ಚಾಂಪಿಯನ್‌ಶಿಪ್‌ನ ಮೊದಲ ಆವೃತ್ತಿಯು 2024 ರಲ್ಲಿ ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ನಡೆದಿತ್ತು. ಆಗ ಭಾರತದ ಮಿಶ್ರ 4 x 400 ಮೀಟರ್ ತಂಡವು ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದಿದ್ದರೆ, ಪುರುಷರ ಮತ್ತು ಮಹಿಳೆಯರ 4 x 400 ಮೀಟರ್ ತಂಡಗಳು ಬೆಳ್ಳಿ ಪದಕಗಳನ್ನು ಮುಡಿಗೇರಿಸಿ ಕೊಂಡಿದ್ದವು.

ಆ ಪದಕ ವಿಜೇತ ತಂಡದ ಹಲವು ಸದಸ್ಯರು ಈ ವರ್ಷವೂ ಮರಳುತ್ತಿದ್ದು, ಶಾಂಗ್ಯು ಕೂಟದ ಮಹಿಳೆಯರ ಮತ್ತು ಮಿಶ್ರ ರಿಲೇ ತಂಡಗಳ ಭಾಗವಾಗಿರುವ ಎಂ. ಆರ್. ಪೂವಮ್ಮ ಮತ್ತು ಸುಭಾ ವೆಂಕಟೇಶನ್ ಅವರೂ ಸೇರಿದ್ದಾರೆ. ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್ ಒಳಗೊಂಡಿರುವ ಬಿಡುವಿಲ್ಲದ ಕ್ರೀಡಾ ಸೀಸನ್‌ಗೂ ಮುನ್ನ ಈ ಸ್ಪರ್ಧೆಯು ಭಾರತಕ್ಕೆ ಒಂದು ಪ್ರಮುಖ ಅಂತರರಾಷ್ಟ್ರೀಯ ಪರೀಕ್ಷೆಯಾಗಿರಲಿದೆ.




# ಹಾಕಿ ಫೈನಲ್ ಮುನ್ನ ನಿರ್ಣಾಯಕ ಪಂದ್ಯ: ಇಂದು ಚಿಲಿ ವಿರುದ್ಧ ಭಾರತ ಹಣಾಹಣಿ

**ಆಕ್ಲೆಂಡ್, ಜೂ.19:** ಇಲ್ಲಿನ ನಾರ್ತ್ ಹಾರ್ಬರ್ ಹಾಕಿ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ಎಫ್‌ಐಎಚ್ ಹಾಕಿ ಮಹಿಳಾ ನೇಲನ್ಸ್ ಕಪ್ ನ್ಯೂಜಿಲೆಂಡ್ 2025–26' ಟೂರ್ನಿಯ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಭಾರತ ತಂಡವು ಚಿಲಿ ತಂಡವನ್ನು ಎದುರಿಸಲಿದ್ದು, ಫೈನಲ್‌ನಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವತ್ತ ಕಣ್ಣಿಟ್ಟಿದೆ.

ಪೂಲ್ ಎನಲ್ಲಿ ಆಡಿದ ಎಲ್ಲಾ ಪಂದ್ಯಗಳಲ್ಲೂ ಗೆದ್ದು ಅಜೇಯರಾಗಿ ಅಗ್ರಸ್ಥಾನ ಪಡೆಯುವ ಮೂಲಕ ಭಾರತ ತಂಡವು ಅತ್ಯುತ್ತಮ ಫಾರ್ಮ್‌ನೊಂದಿಗೆ ಸೆಮಿಫೈನಲ್ ಪ್ರವೇಶಿಸಿದೆ. ತನ್ನ ಮೊದಲ ಪಂದ್ಯದಲ್ಲಿ ಅಮೆರಿಕ (ಯುಎಸ್‌ಎ) ವಿರುದ್ಧ 3–2 ಗೋಲುಗಳ ಜಯ ಸಾಧಿಸಿದ್ದ ಭಾರತ, ನಂತರದ ರೋಚಕ ಪಂದ್ಯದಲ್ಲಿ ಜಪಾನ್ ತಂಡವನ್ನು 2–1 ಗೋಲುಗಳಿಂದ ಮಣಿಸಿತ್ತು. ಪೂಲ್‌ನ ಕೊನೆಯ ಪೂಲ್ ಪಂದ್ಯದಲ್ಲಿ ಭರ್ಜರಿ ಪ್ರದರ್ಶನ ನೀಡಿದ ಭಾರತ ತಂಡ, ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು ಉರುಗ್ವೆ ವಿರುದ್ಧ 3–2 ಗೋಲುಗಳ ಜಯ ದಾಖಲಿಸುವ ಮೂಲಕ ಟೂರ್ನಿಯಲ್ಲಿ ಸತತ ಮೂರನೇ ಗೆಲುವು ದಾಖಲಿಸಿತು.

ಭಾರತದ ದೀಪಿಕಾ ಟೂರ್ನಿಯ ಅತ್ಯುತ್ತಮ ಆಟಗಾರ್ತಿಯಾಗಿ ಹೊರಹೊಮ್ಮಿದ್ದು, ಒಟ್ಟು 4 ಗೋಲುಗಳನ್ನು ಗಳಿಸುವ ಮೂಲಕ ಸೆಮಿಫೈನಲ್‌ಗೂ ಮುನ್ನ ಜಂಟಿ ಅಗ್ರ ಸ್ಕೋರರ್ ಆಗಿದ್ದಾರೆ. ಡ್ರಾಗ್–ಫ್ಲಿಕ್ಕರ್ ದೀಪಿಕಾ ಅವರು ಯುಎಸ್‌ಎ ವಿರುದ್ಧ ಎರಡು ಗೋಲು ಹಾಗೂ ಉರುಗ್ವೆ ವಿರುದ್ಧ ಎರಡು ಗೋಲುಗಳನ್ನು ಬಾರಿಸಿದ್ದು, ಅಮೆರಿಕದ ಆಶ್ಲೇ



ಸೆಸ್ಸಾ ಮತ್ತು ಅಬಿಗೈಲ್ ಟಾಮರ್ ಅವರೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ದೀಪಿಕಾ ಗಳಿಸಿರುವ ನಾಲ್ಕೂ ಗೋಲುಗಳು ಪೆನಾಲ್ಟಿ ಕಾರ್ನರ್‌ಗಳ ಮೂಲಕ ಬಂದಿರುವುದು ವಿಶೇಷವಾಗಿದ್ದು, ಸೆಮಿಫೈನಲ್ ಹಂತಕ್ಕೆ ಮುನ್ನ ಭಾರತದ ಪೆನಾಲ್ಟಿ ಕಾರ್ನರ್ ತಂತ್ರದ ಬಲವನ್ನು ಇದು ತೋರಿಸುತ್ತದೆ.

ಚಿಲಿ ವಿರುದ್ಧದ ಇತ್ತೀಚಿನ ದಾಖಲೆಗಳು ಸಹ ಭಾರತಕ್ಕೆ ಹೆಚ್ಚಿನ ಆತ್ಮವಿಶ್ವಾಸ ನೀಡಲಿವೆ. ಉಭಯ ತಂಡಗಳ ನಡುವೆ ಇದುವರೆಗಿನ 6 ಪಂದ್ಯಗಳಲ್ಲಿ ಭಾರತ 5 ಪಂದ್ಯಗಳನ್ನು ಗೆದ್ದಿದ್ದರೆ ಒಂದು ಒಂದು ಪಂದ್ಯ ಡ್ರಾ ಆಗಿತ್ತು. ಇವೆರಡೂ ತಂಡಗಳು ಕೊನೆಯ ಬಾರಿಗೆ ಸ್ಪೇನ್‌ನಲ್ಲಿ ನಡೆದ 'ಎಫ್‌ಐಎಚ್ ಹಾಕಿ ಮಹಿಳಾ ನೇಷನ್ಸ್ ಕಪ್ 2022' ರಲ್ಲಿ ಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ ಭಾರತ 3–1 ಗೋಲುಗಳಿಂದ ಭರ್ಜರಿ ಜಯ ಸಾಧಿಸಿತ್ತು. ಚಿಲಿ ವಿರುದ್ಧದ ಈ ಉತ್ತಮ ದಾಖಲೆಯು ಭಾರತ ತಂಡಕ್ಕೆ ಮತ್ತಷ್ಟು ಬಲ ತುಂಬಲಿದ್ದು, ತನ್ನ ಅಜೇಯ ಓಟವನ್ನು ಮುಂದುವರಿಸಿ ಪ್ರಶಸ್ತಿಯತ್ತ ಹೆಜ್ಜೆ ಇಡಲು ನೆರವಾಗಲಿದೆ.

ಈ ಟೂರ್ನಿಯಲ್ಲಿ ಚಾಂಪಿಯನ್ ಆಗುವ ತಂಡವು ಮುಂದಿನ ವರ್ಷದ ಎಫ್‌ಐಎಚ್ ಪ್ರೊ ಲೀಗ್‌ಗೆ ಅರ್ಹತೆ ಪಡೆಯಲಿದೆ. ಭಾರತ ತಂಡವು ಟೂರ್ನಿಯುದ್ದಕ್ಕೂ ಸ್ಥಿರ ಪ್ರದರ್ಶನ ನೀಡಿದೆ ಮತ್ತು ಒತ್ತಡದ ಸಂದರ್ಭಗಳನ್ನು ಸಮರ್ಥವಾಗಿ ನಿಭಾಯಿಸಿದೆ. ಅಮೆರಿಕ ಮತ್ತು ಉರುಗ್ವೆ ವಿರುದ್ಧದ ಪಂದ್ಯಗಳಲ್ಲಿ ಆರಂಭಿಕ ಹಿನ್ನಡೆ ಅನುಭವಿಸಿದ ಹೊರತಾಗಿಯೂ ಅದ್ಭುತವಾಗಿ ಚೇತರಿಸಿಕೊಂಡು ಜಯಭೇರಿ ಬಾರಿಸಿದೆ. ಮತ್ತೊಂದೆಡೆ, ಪೂಲ್ ಬಿನಲ್ಲಿ ಒಂದು ಗೆಲುವು, ಒಂದು ಡ್ರಾ ಮತ್ತು ಒಂದು ಸೋಲಿನೊಂದಿಗೆ ಎರಡನೇ ಸ್ಥಾನ ಪಡೆದು ಚಿಲಿ ತಂಡ ಸೆಮಿಫೈನಲ್ ತಲುಪಿದೆ. ಸೆಮಿಫೈನಲ್‌ನಲ್ಲಿ ಭಾರತ ತಂಡಕ್ಕೆ ಕಠಿಣ ಸವಾಲು ನೀಡಲು ಸಜ್ಜಾಗಿದೆ. ದಕ್ಷಿಣ ಅಮೆರಿಕದ ಈ ತಂಡವು ಟೂರ್ನಿಯಲ್ಲಿ ಸ್ಥಿತಿಸ್ಥಾಪಕತ್ವವನ್ನು ಪ್ರದರ್ಶಿಸಿದ್ದು, ನಾಕೌಟ್ ಹಂತದಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಒಂದಾದ ಭಾರತಕ್ಕೆ ಆಘಾತ ನೀಡುವ ಗುರಿ ಹೊಂದಿದೆ.

ಫೈನಲ್ ಸ್ಥಾನದ ಮೇಲಿರುವ ಕಣ್ಣಿನೊಂದಿಗೆ, ಭಾರತ ತಂಡವು ಪೂಲ್ ಹಂತದ ಲಯವನ್ನು ಸೆಮಿಫೈನಲ್‌ನಲ್ಲೂ ಮುಂದುವರಿಸಿ, ಪ್ರಶಸ್ತಿ ಮುಡಿಗೇರಿಸಿಕೊಳ್ಳಲು ಕೇವಲ ಒಂದು ಹೆಜ್ಜೆ ದೂರದಲ್ಲಿ ನಿಲ್ಲುವ ತವಕದಲ್ಲಿದೆ. ಇನ್ನು ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಆತಿಥೇಯ ನ್ಯೂಜಿಲೆಂಡ್ ತಂಡವು ಅಮೆರಿಕವನ್ನು ಎದುರಿಸಲಿದೆ.